ಅಧ್ಯಕ್ಷರು.—ಈಗ ಬಜೆಟ್ ಡಿಸ್ಕಷನ್ ಆಗಲಿ......

ಶ್ರೀ ಎಂ. ಎಸ್. ನಾರಾಯಣರಾವ್.—ಸೊಸೈಟಿ ವಿಚಾರವನ್ನು ಸೋಮವಾರ ಮಧ್ಯಾಹ್ನ ತೆಗೆದುಕೊಳ್ಳೋಣ.

ಅಧ್ಯಕ್ಷರು.—ಅದನ್ನು ೨೮ನೇ ತಾರೀಖು ತೆಗೆದುಕೊಳ್ಳೋಣ. ಈಗ ಆಯವ್ಯಯದಮೇಲೆ ಚರ್ಚೆ ಪ್ರಾರಂಭವಾಗಲಿ. ಈಗ ಮಾನ್ಯ ಯಡಿಯೂರಪ್ಪನವರು ಮಾತನಾಡುತ್ತಾರೆ.

ವಿತ್ತೀಯ ಕಾರ್ಯಕಲಾಪಗಳು
೧೯೮೯-೯೦ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆ

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಅಧ್ಯಕ್ಷರೇ, ೧೯೮೯-೯೦ನೇ ಸಾಲಿಗೆ ಸಂಬಂಧಪಟ್ಟಂತೆ ಸರ್ಕಾರದವರು ಏನು ಆಯವ್ಯಯವನ್ನು ಈ ಸದನದಮುಂದೆ ಮಂಡಿಸಿದ್ದಾರೆ ಇದನ್ನು ನೋಡಿದರೆ ಈ ರಾಜ್ಯದ ಬಡ ಜನರ ಪರವಾದ ಯೋಜನೆಗಳನ್ನು ರೂಪಿಸಿ, ಆರ್ಥಿಕ ಸುಧಾರಣೆಯನ್ನು ಮಾಡಿ, ರಾಜ್ಯದ ರೈತರ ಪಾಲಿಗೆ, ನಿರುದ್ಯೋಗಿ ಯುವಕರ ಪಾಲಿಗೆ ಒಂದು ಹೊಸ ಬೆಳಕು, ಸಿಕ್ಕಬಹುದೆಂದು ಜನರು ಭಾವಿಸಿದ್ದರು. ಆದರೆ ಈ ಬಜೆಟ್‌ನ್ನು ನೋಡಿದಮೇಲೆ ರಾಜ್ಯದ ರೈತರ ಪಾಲಿಗೆ, ನಿರುದ್ಯೋಗಿ ಯುವಕರ ಪಾಲಿಗೆ, ಮಧ್ಯಮ ವರ್ಗದ ಜನರ ಪಾಲಿಗೆ ಈ ಸರ್ಕಾರ ಇನ್ನು ಬದುಕಿದೆಯೋ ಎಂಬ ಭಾವನೆ ಬರುತ್ತದೆ. ಮಾನ್ಯ ಮುಖ್ಯ ಮಂತ್ರಿಗಳ ಬಜೆಟ್ ಭಾಷಣದಲ್ಲಿ ಒಂದೇ ಒಂದು ಸ್ವಾಗತಾರ್ಹ ವಿಚಾರ ಎಂದರೆ ಮಹಿಳೆಯರಿಗೆ ಪೋಲೀಸ್ ಇಲಾಖೆಯಲ್ಲಿ ೧೦ ಪರ್ಸೆಂಟ್ ಹುದ್ದೆಗಳನ್ನು ಮೀಸಲಿರಿಸಲಾಗಿದೆ ಎಂಬುದು. ಇದು ಸ್ವಾಗತಾರ್ಹವಾದರೂ ಕೇವಲ ೧೦ ಪರ್ಸೆಂಟ್‌ನ್ನು ಮಾತ್ರ ಮೀಸಲಿಟ್ಟರೆ ಸಾಲದು. ಇವತ್ತು ರಾಜ್ಯದಲ್ಲಿನ ಯುವಜನರಲ್ಲಿ ನಿರುದ್ಯೋಗ ಎಂಬುದು ತಾಂಡವಾಡುತ್ತಿದೆ. ಲಕ್ಷೆಗಟ್ಟಲೆ ಯುವಕರು ಕೆಲಸವಿಲ್ಲದೆ ಬೀದಿಯಲ್ಲಿ ಅಲೆಯುತ್ತಿದ್ದಾರೆ. ಸರ್ಕಾರದ ಎಲ್ಲ ಇಲಾಖೆಗಳಲ್ಲೂ ಬಹಳಷ್ಟು ವಿವಿಧ ದರ್ಜೆಯ ಹುದ್ದೆಗಳು ಖಾಲಿ ಇರುವುದರಿಂದ ಆ ಎಲ್ಲಾ ಇಲಾಖೆಗಳಲ್ಲೂ ಈ ಯುವಕರಿಗೆ ೧೦ ಪರ್ಸೆಂಟ್ ಮೀಸಲಾತಿಯನ್ನು ಇಡಬೇಕು ಗ್ರಾಮಾಂತರ ಪ್ರದೇಶದಲ್ಲಿ ಕೆಲಸ ಮಾಡತಕ್ಕ ಮಹಿಳಾ ಕೃಷಿಕಾರ್ಮಿಕರಿಗೂ ತಾವು ಅನುಕೂಲ ಮಾಡಿಕೊಡಬೇಕು. ಅವರ ಜೀವನ ಸುಗಮವಾಗಿ ಸಾಗಲು ಒಂದು ಭವ್ಯ ಬುನಾದಿಯನ್ನು ಮಾಡಿ ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ನಾನು ಒತ್ತಾಯಮಾಡುತ್ತೇನೆ.

ಮಾನ್ಯ ಅಧ್ಯಕ್ಷರೆ, ಇಲಾಖಾವಾರು ಚರ್ಚೆಗೆ ಅವಕಾಶವಿಲ್ಲದಿರುವುದರಿಂದ ನಾನು ವಿವರವಾಗಿ ಮಾತನಾಡುವುದಕ್ಕೆ ಆಗುವುದಿಲ್ಲ. ನಾನು ಬಜೆಟ್ ಬಗ್ಗೆ ಒಂದು ಮಾತನ್ನು ಮಾತ್ರ ಹೇಳಬಹುದು ಅದೇನೆಂದರೆ ಇದು ಒಂದು ರೈತ ವಿರೋಧಿ ಬಜೆಟ್, ಇದು ಒಂದು ಹರಿಜನ ಗಿರಿಜನ ವಿರೋಧಿ ಬಜೆಟ್ ಎಂದು. ಇದಕ್ಕೆ ಪೂರಕವಾಗಿ ಕೆಲವು ಸಂಗತಿಗಳನ್ನು ಇಲ್ಲಿ ಹೇಳಬಯಸುತ್ತೇನೆ. ಮೊದಲನೆಯದಾಗಿ ಹೇಳುವುದಾದರೆ ಕಳೆದ ಸಾರಿ ಆದ ಮಳೆಯಿಂದಾಗಿ ಬಿಜಾಪುರ, ಗುಲ್ಬರ್ಗಾ, ಮುಂತಾದ ಕಡೆಗಳಲ್ಲಿ ಇಟ್ಟಿದ್ದ ಹಿಂಗಾರು ಮುಂಗಾರು ಬೆಳೆಗಳು ಸಂಪೂರ್ಣವಾಗಿ ನಾಶವಾಗಿವೆ. ಆದರೆ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಒಂದು ಮಾತನ್ನು ಮಾತ್ರ ಏನು ಹೇಳಿದ್ದಾರೆಂದರೆ ನಾವು ೨೮೫.೭೧ ಕೋಟಿ ರೂಪಾಯಿಗಳಷ್ಟು ನೆರವನ್ನು ಕೇಂದ್ರ ಸರ್ಕಾರದಿಂದ ಕೇಳಿದ್ದೆವು ಆದರೆ ಅವರು ನಮ್ಮ ರಾಜ್ಯಕ್ಕೆ ಕೇವಲ ೧೫.೩೭೫ ಕೋಟಿ ರೂಪಾಯಿಗಳನ್ನು ಮಾತ್ರ ನೀಡಿದ್ದಾರೆ, ಇದು ಬಹಳ ಕಡಿಮೆ ಆಯಿತು ಎಂದು ಹೇಳಿದ್ದಾರೆ. ಅಂದರೆ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಸಿಕ್ಕಿರತಕ್ಕ ಪರಿಹಾರ ಬಹಳ ಕಡಿಮೆ ಪ್ರಮಾಣದ್ದು ಎನ್ನತಕ್ಕ ಮಾತನ್ನು ಹೇಳಿದ್ದಾರೆ. ನಾನು ತಮ್ಮನ್ನು ಕೇಳುತ್ತೇನೆ, ಏನೆಂದರೆ ನಮ್ಮ ರಾಜ್ಯದಲ್ಲಿ ಅತಿ ಬಡವರು ಯಾರಿದ್ದಾರೆ ಅವರಿಗೆ ನೀವು ಏನು ಅನುಕೂಲಗಳನ್ನು ಮಾಡಿಕೊಟ್ಟಿದ್ದೀರಿ ಎಂದು ಬರಗಾಲಕ್ಕೆ ತುತ್ತಾಗಿ ಜೀವನವನ್ನು ಸಾಗಿಸುವ ಸಲುವಾಗಿ ಸ್ವಂತ ಊರುಗಳನ್ನು ಬಿಟ್ಟು ಬೇರೆ ಬೇರೆ ಕಡೆಗಳಿಗೆ ವಲಸೆ ಹೋಗತಕ್ಕ ಜನರಿಗೆ ಏನು ವ್ಯವಸ್ಥೆ ಮಾಡಿದ್ದೀರಿ ? ಈ ರೀತಿ ವಲಸೆ ಹೋಗುವುದನ್ನು ತಪ್ಪಿಸಲು ಸರ್ಕಾರ ಏನಾದರೂ ಯೋಚನೆ ಮಾಡಿದೆಯೋ ? ಇದಕ್ಕೆ ಏನಾದರೂ ಒಂದು ಪರಿಹಾರವನ್ನು ಕಂಡುಹಿಡಿದಿದೆಯೋ ಎಂಬು–

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ದನ್ನು ದಯವಿಟ್ಟು ತಿಳಿಸಬೇಕು. ೨೮೫ ಕೋಟಿ ೭೧ ಲಕ್ಷರೂಪಾಯಿಗಳ ಪರಿಹಾರ ಕೇಳಿದಾಗ ಕೇವಲ ಹದಿನೈದುವರೆ ಕೋಟಿ ಕೊಟ್ಟರು. ಈ ಭಾಗದಲ್ಲಿ ಅತಿವೃಷ್ಟಿಗೆ ತುತ್ತಾಗಿ ಯಾರು ಮನೆಗಳನ್ನು ಕಳೆದುಕೊಂಡರು ಸಾವಿಗೀಡಾದರು. ಬೆಳೆ ಸಂಪೂರ್ಣವಾಗಿ ನಾಶವಾಯಿತು ಅವರು ಕೈಗೆ ಕೆಲಸವಿಲ್ಲದೆ ವಲಸೆ ಹೋದರು. ಇಂಥ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಕಡೆ ಕೈ ತೋರದೆ ರಾಜ್ಯ ಸರ್ಕಾರದವರು ಯಾವ ರೀತಿ ಪರಿಹಾರ ಕಾರ್ಯಕ್ರಮವನ್ನು ಕೈಕೊಂಡರು ಎನ್ನುವುದಕ್ಕೆ ಬಜೆಟ್‌ನಲ್ಲಿ ಎಲ್ಲೂ ಕಾಣುವುದಿಲ್ಲ. ೨೮೫.೭೧ ಲಕ್ಷ ಕೇಳಿದೆವು, ಹದಿನೈದುವರೆ ಕೋಟಿ ಮಾತ್ರ ಕೊಟ್ಟರು ಎಂದು ಹೇಳಿದಾಕ್ಷಣಕ್ಕೆ ಸರ್ಕಾರದ ಜವಾಬ್ದಾರಿ ಮುಗಿಯುವುದಿಲ್ಲವೆಂದು ಸನ್ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ ಚುನಾವಣೆಗೋಸ್ಕರ ನೀವು ರಾಜ್ಯದ ರೈತರನ್ನು ಭೇಟಿ ಮಾಡಬೇಕಾಗುತ್ತದೆ. ನಿಮ್ಮನ್ನು ನಂಬಿ ರಾಜ್ಯದ ರೈತರು ಮೋಸ ಹೋಗಿ ಕಣ್ಣೀರಿನಲ್ಲಿ ಕೈ ತೊಳೆಯುತ್ತಿದ್ದಾರೆ. ಚುನಾವಣೆಯು ಕೊನೆಯ ವರ್ಷವಾದರು ಸಹ ರೈತರ ನೆರವಿಗೆ ಬರುತ್ತೀರೆಂದು ನಾನು ಭಾವಿಸಿದ್ದೆ ಈ ರೀತಿ ಅತಿವೃಷ್ಟಿಗೆ ರಾಜ್ಯದ ರೈತರು ತುತ್ತಾದ ಸಂದರ್ಭದಲ್ಲಿ ಯಾವ ರೀತಿಯ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಂಡಿರಿ, ಅದಕ್ಕೆ ಎಷ್ಟೆಷ್ಟು ದುಡ್ಡು ಖರ್ಚು ಮಾಡಿದಿರಿ ಎಂಬ ವಿವರ ಇದರಲ್ಲಿ ಇಲ್ಲ. ಅದಕ್ಕೋಸ್ಕರ ನಾನು ರಾಜ್ಯ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ದಯವಿಟ್ಟು ರೈತರಿಗೆ ಏನೇನು ಪರಿಹಾರ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು ? ಕೊನೆ ಪಕ್ಷ ರೈತರ ಬಗ್ಗೆ ಮೊಸಳೆ ಕಣ್ಣೀರಿಡುವಂತ ಸಂದರ್ಭದಲ್ಲಿ ಶಿವಮೊಗ್ಗದಲ್ಲಿ ಜನವಾಣಿ ಕಾರ್ಯಕ್ರಮದಲ್ಲಿ ಹೇಳಿದಿರಿ, ರೈತರ ಸಮಸ್ಯೆಯ ಬಗ್ಗೆ ನನಗೆ ಕಳಕಳಿ ಇದೆ. ನಾನು ಪ್ರಧಾನಿ ಹತ್ತಿರ ಹೋಗುತ್ತೇನೆ. ರಾಜ್ಯದ ರೈತರ ಸಮಸ್ಯೆಯನ್ನು ಬಗೆಹರಿಸುವ ಬಗ್ಗೆ ನನಗೆ ಕಳಕಳಿ ಇದೆ ಎನ್ನುವ ಮಾತನ್ನು ಹೇಳಿದರು. ನಾನು ಈ ರಾಜ್ಯದ ಮುಖ್ಯ ಮಂತ್ರಿಗಳನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ ಪ್ರಧಾನಿಯವರ ಹತ್ತಿರ ಈ ರಾಜ್ಯದ ರೈತರ ಪರವಾಗಿ ತಾವು ಹೋಗುವುದಕ್ಕೆ ಮುಂಚೆ ನೀವು ಈ ರಾಜ್ಯದಲ್ಲಿ ನಿಮ್ಮ ಮೂಲಕ ರೈತರ ಕಣ್ಣೀರು ಒರೆಸುವುದಕ್ಕೆ ಮಾಡಿದ ಕಾರ್ಯಕ್ರಮ.ಗಳು ಏನು ? ಅತಿವೃಷ್ಟಿಗೆ ತೀತ್ತಾಗಿ ಭಿಕ್ಷೆಯನ್ನು ಬೇಡುವಂತ ಸ್ಥಿತಿಗೆ ಬಂದಿರುವಾಗ ಈ ರಾಜ್ಯದ ರೈತರಿಗೆ ೨೮೫.೭೧ ಕೋಟಿ ಪರಿಹಾರ ಬೇಕೆಂದು ಕೇಳುವ ನೀವು ಎಷ್ಟು ಹಣ ಖರ್ಚುಮಾಡಿ-ದ್ದೀರಿ ? ಈ ರೀತಿ ಸಂಪೂರ್ಣವಾಗಿ ಬೆಳೆ ನಾಶವಾಗಿದೆ ಹಿಂಗಾರಿ ಮುಂಗಾರಿ ಬೆಳೆ ನಾಶವಾದ ಸಂದ-ರ್ಭದಲ್ಲಿ ಬಿಜಾಪುರ ಗುಲ್ಬರ್ಗಾ ಬೀದರ್ ರಾಯಚೂರು ಈ ಭಾಗದಲ್ಲಿ ನಾನು ಪ್ರವಾಸ ಹೋಗಿಬಂದೆ ರೈತರು ಸಹಕಾರಿ ಸಂಘಗಳಿಂದ ತೆಗೆದುಕೊಂಡು ಸಾಲಕ್ಕೆ ಬಡ್ಡಿ ಸುಸ್ತಿ ಬಡ್ಡಿಯನ್ನಾದರೂ ಮನ್ನಮಾಡಿ ಅಸಲು ಕೊಡತಕ್ಕಂತ ಅವಧಿಯನ್ನು ವಿಸ್ತೀರ್ಣ ಮಾಡುವಂತ ಒಂದು ಕೆಲಸವನ್ನಾದರೂ ತಾವು ಮಾಡಿದ್ದೀರಾ ? ತಾವು ಆಕಡೆ ಗಮನವನ್ನೇ ಕೊಡಲಿಲ್ಲ. ಇದರ ಬಗ್ಗೆ ನಿಮ್ಮ ಬಜೆಟ್‌ನಲ್ಲಿ ಒಂದು ಶಬ್ದವೂ ಕೂಡ ಇಲ್ಲ. ನಾನು ಸರ್ಕಾರವನ್ನು ಆಗ್ರಹ ಮಾಡುತ್ತೇನೆ. ದಯವಿಟ್ಟು ಈಗಲಾದರೂ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ರಾಜ್ಯದ ರೈತರ ಬಗ್ಗೆ ಮೊಸಳೆ ಕಣ್ಣೀರು ಸುರಿಸದೆ ದಯವಿಟ್ಟು ಈ ರೀತಿ ಅತಿವೃಷ್ಟಿಗೆ ತುತ್ತಾಗಿರುವ ರೈತರ ಬಗ್ಗೆ ನಿಮ್ಮ ಜಿಲ್ಲಾಧಿಕಾರಿಗಳು ಕೊಟ್ಟಿರುವ ರಿಪೋರ್ಟ್ ಏನು ? ಬೆಳೆ ಸಂಪೂರ್ಣವಾಗಿ ನಾಶವಾಗಿದೆ, ಎಂದು ವರದಿ ಬಂದಿದ್ದರೆ ಅಂಥ ರೈತರಿಗೆ ಸಹಕಾರಿ ಸಂಘದಿಂದ ತೆಗೆದುಕೊಂಡ ಸಾಲಕ್ಕೆ ಬಡ್ಡಿ ಸುಸ್ತಿ ಬಡ್ಡಿ ಮನ್ನಮಾಡಿ, ಅವರು ಕೊಟ್ಟಂಥ ಉದಾರವಾದಂಥ ತನ್ನ ಓಟಿನ ಪರಿಣಾಮವಾಗಿ ಈ ಖುರ್ಚಿಯಲ್ಲಿ ತಾವು ಕುಳಿತಿದ್ದೀರಿ. ಆ ಖುರ್ಚಿ ಮತ್ತೊಮ್ಮೆ ತಮಗೆ ಸಿಗಬೇಕಾದರೆ, ಆ ಜನರು ನಿಮ್ಮನ್ನು ಕಾಣಲು ಬಂದಾಗ ಅವರಿಗೆ ಗೌರವ ನೀಡಬೇಕೆನ್ನುವ ಆಶಯ ನಿಮಗೆ ಇದ್ದರೆ ದಯವಿಟ್ಟು ಅಂಥ ರೈತರ ಸಹಕಾರಿ ಸಂಘದ ಬಡ್ಡಿ ಸುಸ್ತಿ ಬಡ್ಡಿಯನ್ನು ಮನ್ನ ಮಾಡಬೇಕೆಂದು ಸರ್ಕಾರವನ್ನು ಆಗ್ರಹ ಮಾಡುತ್ತೇನೆ.

ಸ್ವಾಮಿ, ಇದು ರೈತರ, ವಿರೋಧಿ ಸರ್ಕಾರವೆಂದು ಹೇಳಿದರೆ ಬಹುಶಃ ನಿಜಕ್ಕೂ ತಲೆತಗ್ಗಿಸಬೇಕಾಗುತ್ತದೆ. ರೈತರ ಪರವಾಗಿ ಇಲ್ಲಿ ಕುಳಿತುಕೊಂಡು ಅವನಿಗೆ ನ್ಯಾಯವಕ್ಕಿಸಿ ಕೊಡಲಿಕ್ಕೆ ಇವರಿಗೆ ಆಗಲಿಲ್ಲ. ಬೆಳೆ ವಿಮಾ ಯೋಜನೆ ಈ ರಾಜ್ಯದಲ್ಲಿ ಬಂದಿದೆ. ಬಹುಶಃ ೪-೫ ವರ್ಷಗಳಲ್ಲಿ ಮೊದಲನೆ ಬಾರಿಗೆ ಈ ಸರ್ಕಾರ ಪರಸ್ಪರ ಬಡಿದಾಟದಲ್ಲಿ ಪರಸ್ಪರ ಭಿನಾಭಿಪ್ರಾಯದ ಗೊಂದಲದ ಮಧ್ಯೆಸಿಕ್ಕಿ ಹಾಕಿಕೊಂಡು ಮಾನ್ಯ ಮುಖ್ಯಮಂತ್ರಿಗಳು ಮಂತ್ರಿ ಮಂಡಲವನ್ನು ವಿಸ್ತರಣೆ ಮಾಡುವ ಗಡಿಬಿಡಿಯಲ್ಲಿ ಸಿಕ್ಕಿಹಾಕಿಕೊಂಡು ಅತೃಪ್ತಿ ಶಾಸಕರನ್ನು ತೃಪ್ತಿ ಮಾಡುವಂಥ ಕೆಲಸದಲ್ಲಿದ್ದಾರೆ. ಈ ರಾಜ್ಯದ ರೈತ ಬೆಳೆದಂಥ ಬೆಳೆಗೆ ಬೆಳೆ ವಿಮೆ ಯೋಜನೆ ಇತ್ತು. ಆ ಯೋಜನೆಯ ಕಡೆಗೆ ಗಮನ ಕೊಡುವುದಕ್ಕೆ ನಿಮಗೆ ಪುರಸತ್ತೇ ಇಲ್ಲ. ಇದರ ಪರಿಣಾಮ ಈ ರಾಜ್ಯದ ರೈತನ ಬೆಳೆ ಸಂಪೂರ್ಣವಾಗಿ ನಾಶವಾಯಿತು. ಆ ಬೆಳೆ ವಿಮೆ ಸವಲತ್ತು ಈವತ್ತು ರಾಜ್ಯದ ರೈತರಿಗೆ ಸಿಗುತ್ತಿಲ್ಲ. ಏತಕ್ಕೆ ಸಿಗುತ್ತಿಲ್ಲ ?

ಉದಾಹರಣೆಗೆ ರೈತರು ಸಹಕಾರಿ ಸಂಘಗಳಲ್ಲಿ ಸಾಲ ತೆಗೆದುಕೊಳ್ಳುತ್ತಾರೆ, ನೀವಂತೂ ಸಹಾಯ ಮಾಡುವಂಥ ಶಕ್ತಿ ಹೊಂದಿಲ್ಲ. ಕ್ರಾಪ್‌ಲೋನ್ ಎಂದು ಅವರು ತೆಗೆದುಕೊಳ್ಳುವಂಥ ಸಮಯದಲ್ಲಿ ಬ್ಯಾಂಕ್ ಮತ್ತು ಸೊಸೈಟಿಗಳಲ್ಲಿ ನೀವು ಕಟ್ಟಬೇಕಾಗಿದ್ದಂಥ ಬೆಳೆ ವಿಮೆ ಇನ್‌ಷೂರೆನ್ಸನ್ನು ರೈತರಿಂದ ಮುರಿದುಕೊಂಡಿದ್ದಾರೆ. ಮುರಿದುಕೊಂಡು ಎಂಟು ತಿಂಗಳಾದ ಮೇಲೆ ಅದನ್ನು ವಾಪಸ್ ಕೊಡುತ್ತಿದ್ದಾರೆ. ಇಂತಹ ವಿಚಾರದಲ್ಲಿ ಇಂಥ ಬೆಳೆ ಬೆಳೆಯಬೇಕೆಂದು ರಾಜ್ಯಸರ್ಕಾರದವರು ನೋಟಿಫೈ ಮಾಡಬೇಕಾಗಿತ್ತು. ಅದನ್ನು ಮಾಡದ ಪರಿಣಾಮ ಕಡುಬಡವರಾಗಿದ್ದವರೂ ಸಹ ಒಂದು ಸಾವಿರಕ್ಕೆ ೧೫ ರೂಪಾಯಿಗಳನ್ನು ಕೊಡಬೇಕಾಯಿತು. ಅವರು ಕೊಡದಿದ್ದರೆ ೪–೫ ಲಕ್ಷ ರೂಪಾಯಿಗಳು ನಿಮ್ಮ ಮೈಮೇಲೆ ಬರುತ್ತಿತ್ತು. ಆ ಪ್ರೀಮಿಯಮ್ ಕಟ್ಟದಿರುವ ಪರಿಣಾಮ ಅದನ್ನು ವ್ಯತಿರಿಕ್ತ ಪರಿಣಾಮವಾಗಿ ನೀವು ಪ್ರೀಮಿಯಮ್ ಹಣ. ಇನ್‌ಷೂರೆನ್ಸ್ ಹಣವನ್ನು ಕಟ್ಟದಿದ್ದ ಕೋಸ್ಕರ ಬೆಳೆ ವಿಮೆ ರಾಜ್ಯದ ಯಾವ ರೈತರಿಗೂ ಬರುವುದಿಲ್ಲ. ಅತಿವೃಷ್ಟಿಗೆ ತುತ್ತಾಗಿ ಸಂಪೂರ್ಣ ಬೆಳೆ ನಾಶವಾದಂಥ ರೈತ ತಾನು ಹಣವನ್ನ ಕಟ್ಟದಿದ್ದಕ್ಕೋಸ್ಕರ ಬಡ್ಡಿ ಎಂದು ಕೊಟ್ಟಂಥ ಹಣ ಎಂಟು ತಿಂಗಳಾದಮೇಲೆ ನಮ್ಮ ಸೊಸೈಟಿಗಳಲ್ಲಿ ಕಟ್ಟಿದಂಥ ಹಣ ಬ್ಯಾಂಕ್‌ನಲ್ಲಿ ಕೊಟ್ಟಂಥಹಣವನ್ನು ಇಟ್ಟುಕೊಂಡು ಬ್ಯಾಂಕ್ ಮ್ಯಾನೇಜರ್ ಎಂಟು ತಿಂಗಳಾದ ಮೇಲೆ ವಾಪಸ್ ಕೊಡುತ್ತಿದ್ದಾರೆ. ಬ್ಯಾಂಕ್ ಮ್ಯಾನೇಜರ್ ಹೋಗಿ ನಿಮ್ಮ ಸರ್ಕಾರಕ್ಕೆ ಛೀಮಾರಿ ಹಾಕಿ ಎಂದು ಹೇಳುತ್ತಿದ್ದಾರೆ. ಇಲ್ಲಿದ್ದ ದುಡ್ಡನ್ನು ಇನ್‌ಷೂರೆನ್ಸ್ ಡಿಪಾರ್ಟ್‌ಮೆಂಟ್‌ಗೆ ಟ್ರಾನ್ಸ್‌ಫರ್ ಮಾಡಲಾಗಲಿಲ್ಲ. ವಿತಕ್ಕೋಸ್ಕರ ಅಂದರೆ ನೀವು ಅದರ ಬಗ್ಗೆ ನೋಟಿಫೈ ಮಾಡಬೇಕಾಗಿತ್ತು. ಸರ್ಕಾರದವರು ಅದನ್ನು ಮಾಡದ ಪರಿಣಾಮವಾಗಿ ಇವತ್ತು ಸಂಪೂರ್ಣವಾಗಿ ಬೆಳೆ ನಾಶವಾದಂಥ ರೈತನಿಗೆ ಒಂದು ರೂಪಾಯಿ ಸಹ ಬೆಳೆ ವಿಮಾ ಯೋಜನೆಯಿಂದ ಸಿಕ್ಕದಿರತಕ್ಕಂಥ ಮಟ್ಟಕ್ಕೆ ಇವತ್ತು ರಾಜ್ಯದ ರೈತರನ್ನು ತಂದಿರುತ್ತೀರಿ ಇದು ಸಾಲಲಿಲ್ಲ ನಿಮಗೆ ಇಲ್ಲಿ ಬೇರೆ ಸರ್ಕಾರಿ ನೌಕರರು ಬರುತ್ತಾರೆ, ಬೇರೆ ಬೇರೆ ಸಮಸ್ಯೆಗಳು ಬರುತ್ತವೆ. ಅವರ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ತಲ್ಲೀನರಾಗಿದ್ದೀರಿ. ತೊಗಲಕ್ ದರ್ಬಾರು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಯಾವಾಗ ಈ ರಾಜ್ಯದ ರೈತರು ಕಳೆದ ೪–೫ ವರ್ಷಗಳಿಂದ ಅತಿವೃಷ್ಟಿ—ಅನಾವೃಷ್ಟಿಗೆ ತುತ್ತಾಗಿ, ಭೀಕರ ಬರಗಾಲಕ್ಕೆ ತುತ್ತಾಗಿ ಭಿಕ್ಷೆ ಬೇಡುವ ಸ್ಥಿತಿಗೆ ಬಂದಿದ್ದಾರೆ. ಅಂತಹ ರೈತರ ನೀರಾವರಿ ದರವನ್ನು ಏಕಾಏಕಿ ಏರಿಸುವ ಪ್ರಯತ್ನ ಮಾಡಿದ್ದೀರಿ. ಗೆಜೆಟ್ ನೋಟಿಫಿಕೇಷನ್ ಡಿಸೆಂಬರ್ ೨೨ನೇ ತಾರೀಖಿನಲ್ಲಿ ತಂದಿದ್ದೀರಿ. ಈ ಹಿಂದೆ ಅಧಿವೇಶನ ಸೇರಿದಂತಹ ಸಮಯದಲ್ಲಿ ಈ ರಾಜ್ಯದ ರೈತರ ನೀರಾವರಿ ದರವನ್ನು ಏರಿಸುವ ಬಗ್ಗೆ ವಿಧಾನಸಭೆಯಲ್ಲಿ ಚರ್ಚೆಯಾಗಲಿಲ್ಲ. ಈ ಬಗ್ಗೆ ಚರ್ಚೆಯನ್ನೆ ಮಾಡದೆ ನೀರಾವರಿ ದರವನ್ನು ಏರಿಕೆ ಮಾಡಿದ್ದೀರಿ. ಅವರ ನೆರವಿಗೆ ಬರಬೇಕಾದ ನೀವು ಈ ಒಂದು ಕೆಲಸವನ್ನು ಮಾಡಿದ್ದೀರಿ. ಇವತ್ತು ಮೊದಲು ಕಬ್ಬು ಬೆಳೆಯುವಂತಹ ಒಂದು ಎಕರೆಗೆ ನೀರಾವರಿ ತೆರಿಗೆ ೧೫೦ ರೂ.ಗಳನ್ನು ಕೊಡುತ್ತಾ ಇದ್ದೆವು. ಈಗ ನೀವು ಮಾಡಿರುವುದು ೪೦೦ ರೂಪಾಯಿಗಳು ಅದೆ ಲಿಫ್ಟ್ ಇರಿಗೇಷನ್ ಆದರೆ ಒಂದು ಎಕರೆಗೆ ೩೦೦ ರೂ. ಬತ್ತಕ್ಕೆ ೩೫ ರೂ.ಗಳನ್ನು ಮೊದಲು ನೀರಾವರಿ ತೆರಿಗೆಯನ್ನಾಗಿ ಒಂದು ಎಕರೆಗೆ ಕೊಡುತ್ತಾ ಇದ್ದೆವು ಇವತ್ತು ೧೦೦ ರೂ.ಗೆ ಹೆಚ್ಚು ಮಾಡಿದ್ದೀರಿ. ಅದೇ ಲಿಫ್ಟ್ ಇರಿಗೇಷನ್ ಆದರೆ ೨೦೦ ರೂ. ರಾಗಿ ಮತ್ತು ಜೋಳಕ್ಕೆ ಒಂದು ಎಕರೆಗೆ ೨೦ ರೂ. ಹಿಂದೆ ಇತ್ತು. ಈಗ ೬೦ ರೂ. ಮಾಡಿದ್ದೀರಿ. ಅದೇ ಗಾರ್ಡನ್ ಕ್ರಾಪ್‌ಗಳಿಗೆ ಮೊದಲು ೪೦ ರೂ. ಇತ್ತು. ಈಗ ೬೦ ರೂ.ಗೆ ಹೆಚ್ಚು ಮಾಡಿದ್ದೀರಿ. ಅದೇ ಲಿಫ್ಟ್ ಇರಿಗೇಷನ್‌ಗೆ ೧೨೦ ರೂ. ಈ ರೀತಿ ಮನಬಂದಂತೆ ನೀರಾವರಿ ತೆರಿಗೆಯನ್ನು ಏರಿಸಲು ಒಂದು ಪ್ರಯತ್ನವನ್ನು ನೀವು ಮಾಡಿದ್ದೀರಿ ಶಿವಮೊಗ್ಗ ಜಿಲ್ಲೆಯಲ್ಲಿ ಜನವರಿ ೧೩ನೇ ತಾರೀಖು ೫೦ಸಾವಿರ ರೈತರು ಸಭೆ ಸೇರಿದ್ದರು. ಬಗರ್ ಹುಕ್ಕುಂ ಸಾಗುವಳಿದಾರರು, ನೀರಾವರಿ ದರವನ್ನು ಏರಿಸಿರುವುದರಿಂದ ಕಂಗಾಲಾಗಿ ತನ್ನ ರಕ್ಷಣೆಗೆ ಯಾರೂ ಬರಲಿಲ್ಲವೆಂದು ಇಂದು ಭಿಕ್ಷೆ ಬೇಡುತ್ತಿರುವ ಎಲ್ಲ ರಾಜಕೀಯ ಪಕ್ಷಗಳ ರೈತರು ಶಿವಮೊಗ್ಗ ಚಲೋ ಅಂತ ೫೦ ಸಾವಿರ ಜನ ಸೇರಿದ್ದರು. ಜಿಲ್ಲಾ ಮಂತ್ರಿಗಳಾದ ಶ್ರೀಮಾನ್ ಜೆ. ಎಚ್. ಪಟೇಲ್‌ರವರು ಅದೇ ದಿವಸ ಅಲ್ಲೇ ಇದ್ದರು. ಡಿ.ಸಿ.ಸಿ. ಬ್ಯಾಂಕ್‌ನಲ್ಲಿ ಮೀಟಿಂಗ್ ನಡೆಯುತ್ತಿತ್ತು. ಅಂದು ೫೦ ಸಾವಿರ ಜನ ಸರ್ಕಾರಕ್ಕೆ ಧಿಕ್ಕಾರ ಅಂತ ಕೂಡಿಕೊಂಡು ಬಂದರು.

ಶ್ರೀ ಎನ್. ಎಸ್. ಖೇಡ್,—ಈ ಶಬ್ದವನ್ನು ಯಾರಿಗೆ ಹೇಳಬೇಕು ? ಸರ್ಕಾರಕ್ಕೋ ಮಂತ್ರಿಗಳಿಗೋ ಅಥವಾ ಗೋಡೆಗೋ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಆ ಒಂದು ನೀರಾವರಿ ದರವನ್ನು ಇಳಿಸುತ್ತೇವೆಂದು ಹೇಳುವಂತಹ ಧೈರ್ಯವನ್ನು ಜಿಲ್ಲಾ ಮಂತ್ರಿಗಳು ಮಾಡಲಿಲ್ಲ. ಅವನ ನೆರವಿಗೆ ಬರಲಿಲ್ಲ. ಈ

ರೀತಿಯಾಗಿ ಸರ್ಕಾರ ಮನಬಂದಂತೆ ನೀರಾವರಿ ದರವನ್ನು ಏರಿಸುವಂತಹ ಪ್ರಯತ್ನವನ್ನು ಮಾಡಿದೆ. ನಾನು ಕೇಳುತ್ತೇನೆ ಈ ಸರ್ಕಾರದಲ್ಲಿ ಇವತ್ತು ಒಂದು ಹೊತ್ತಿನಗಂಜಿಗೂ ಗತಿ ಇಲ್ಲದೆ ಭಿಕ್ಷೆ ಬೇಡುತ್ತಿರುವ ಲಕ್ಷಾಂತಾರೆ ಜನ ವಿಧಾನ ಸೌಧಕ್ಕೆ ಬಂದರೆ ಏನು ಮಾಡುತ್ತೀರಾ?

ಶ್ರೀ ಎಂ, ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೆ. ತಾವು ಮುಖ್ಯ ಸಚೇತಕರಿಗೆ ಆದೇಶ ಕೊಡಬೇಕು. ಈ ಸಭೆಗೆ ಮಂತ್ರಿಗಳು ಬರುತ್ತಾರೊ ಅಥವಾ ಇಲ್ಲವೋ ? ಇಲ್ಲ ಒಬ್ಬರೇ ಮಂತ್ರಿಗಳು ಇದ್ದಾರೆ. ಇನ್ನುಳಿದವರು ಎಲ್ಲಿ ? ಯಾರಿಗೆ ಹೇಳಬೇಕು ?

ಶ್ರೀ ಎ. ಲಕ್ಷ್ಮೀ ಸಾಗರ್.—ಕೌನ್ಸಿಲ್ ನಡೆಯುತ್ತಿದೆ. ಅಲ್ಲಿದ್ದಾರೆ.

ಶ್ರೀ ಎನ್. ಎಸ್. ಖೇಡ್.—ಕೌನ್ಸಿಲ್ ಅಡ್ಜರ್ನ್ ಆಗಿದೆ. ಆದರೂ ನಡೆಯುತ್ತಿದೆ ಎಂಬುದಾಗಿ ಸತ್ಯಕ್ಕೆ ದೂರವಾಗಿ ಹೇಳುತ್ತಿದ್ದಾರೆ.

ಶ್ರೀ ಎಂ. ಎಸ್. ಪಾಟೀಲ್.—ಮಂತ್ರಿಗಳನ್ನು ಕರೆಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಕೌನ್ಸಿಲ್ ನಡೆಯುತ್ತಿದೆ. ನನ್ನ ಹತ್ತಿರ ಅಜೆಂಡಾ ಇದೆ. ಎರಡು ಸಿಟ್ಟಿಂಗ್ ಇದ್ದು. ಮಂತ್ರಿಗಳು ಅಲ್ಲೇ ಇದ್ದಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಕೌನ್ಸಿಲ್ ನಡೆಯುತ್ತಿದ್ದರೂ ಸಹ ಎಲ್ಲ ೨೦ ಮಂತ್ರಿಗಳು ಅಲ್ಲೆ ಇದ್ದಾರೆಯೋ ? ಮುಖ್ಯಮಂತ್ರಿಗಳಿಂದ ಹಿಡಿದುಕೊಂಡು ಎಲ್ಲರೂ ಅಲ್ಲೇ ಇದ್ದಾರೆಯೇ ? ಇಲ್ಲಿ ನೀವು ಒಬ್ಬರೇ ಇದ್ದೀರಿ.

SRI A. LAXMI SAGAR.—You are talking out of context. According to the agenda they have two sitting. It is there now in Session.

ಶ್ರೀ ಬಿ. ಎಸ್. ಯಡಿಯೂರಪ್ಪ.—ಗೋರ್ಕಲ್ಲ ಮೇಲೆ ಮಳೆ ಸುರಿದಂತೆ ಸರ್ವಜ್ಞ......

ಶ್ರೀ ಎ. ಲಕ್ಷ್ಮೀಸಾಗರ್.—ಏನೂ ಇಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಿಮ್ಮ ಮಂತ್ರಿಗಳು ಇದ್ದರೆ ಏನು ? ಮಂತ್ರಿಗಳು ಇಲ್ಲದಿದ್ದರೆ ಏನು ? ಕಿವಿ ಇದ್ದು ಕಿವಿಗೆ ಹತ್ತಿ ಹಾಕಿಕೊಂಡಿರುವ ಜನಕ್ಕೆ, ಕಣ್ಣಿದ್ದು ಕಣ್ಣು ಕಾಣದ ಹಾಗೆ ಇರುವುದರಿಂದ ಜನಕ್ಕೆ, ಈ ರಾಜ್ಯದ ರೈತ ತಳಮಳಗೆ ಇಲ್ಲದಿರುವ ಕಾಲದಲ್ಲಿ ಅವನ ನೆರವಿಗೆ ಬರದೇ ಇರತಕ್ಕ ಜನಕ್ಕೆ, ನಿಮ್ಮನ್ನು ನಂಬಿ ಓಟುಕೊಟ್ಟಂತಹ ರೈತರಿಗೆ, ಅವನನ್ನು ತಬ್ಬಲಿಯನ್ನಾಗಿ ಮಾಡಿದಂತಹ ಸರ್ಕಾರಕ್ಕೆ ಧಿಕ್ಕಾ ಧಿಕ್ಕಾರ ಅಂತ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ವೆರಿಗುಡ್—ವೆರಿಗುಡ್ ನಾನು ಹಿಂದೆಯೇ ಒಂದು ಮಾತನ್ನು ಹೇಳಿದ್ದೇವೆ. ಅದೇನೆಂದರೆ, ನಮ್ಮ ಸನ್ಮಾನ್ಯ ಯಡಿಯೂರಪ್ಪನವರ ಒಂದು ರಾಜಕೀಯ ತತ್ವ ಏನೆಂದರೆ "ಶಾಪದಪಿ ಶರಾದಪಿ ಅಂತ" ಇದಕ್ಕೆ ಕನ್ನಡದಲ್ಲಿ ಅರ್ಥ ಹೇಳುವುದಾದರೆ, ಅವರು ಕೊಟ್ಟರೆ ಶಾಪ—ಬಿಟ್ಟರೆ ಬಾಣ. ಇನ್ನು ಬೇರೆ ಮಾರ್ಗವೇ ಇಲ್ಲ. ದಯಮಾಡಿ ತಾವು ಮುಂದುವರಿರಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಬಹುಶಃ ಶ್ರೀಮಾನ್ ಲಕ್ಷ್ಮೀಸಾಗರ್ ರವರು ತುರ್ತು ಪರಿಸ್ಥಿತಿಯಲ್ಲಿದ್ದಾಗ ನಾನೂ ಅವರ ಜೊತೆಗೇ ಇದ್ದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ,.—ನೀವು ವರ ಕೊಟ್ಟ ಮೇಲೆಯೇ ಅವರು ಉತ್ಪತ್ತಿ ಯಾದದ್ದು ಇಲ್ಲದಿದ್ದರೆ ಅವರೆಲ್ಲಿ ಉತ್ಪತ್ತಿ ಯಾಗುತ್ತಿದ್ದರು ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಆ ಕಾಲದಲ್ಲಿ ಈ ರಾಜ್ಯದ ಜನ ಈ ದೇಶದ ಜನ ನಿಮ್ಮನ್ನು ಯಾವ ರೀತಿ ಮುಂದೆ ಬಂದು ಅಧಿಕಾರವನ್ನು ಕೊಟ್ಟರೋ, ಆ ಸಮಯದಲ್ಲಿ ಮಾನ್ಯ ಲಕ್ಷ್ಮೀಸಾಗರ್ ರವರಿಗೆ ಆ ರೈತರ ಬಗ್ಗೆ ಇದ್ದಂತಹ ಸಹಾನುಭೂತಿ, ತಳಮಳ, ಬಡವರ ಬಗ್ಗೆ ಹರಿಜನ—ಗಿರಿಜನರ

ಬಗ್ಗೆ ಅಧಿಕಾರಕ್ಕೆ ಬಂದ ೬ ವರ್ಷಗಳಲ್ಲಿ ಎಲ್ಲಿ ಹೋಯಿತು ಎಂಬುದು ನನಗೆ ಅರ್ಥವಾಗಲಿಲ್ಲ. ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಆ ಪಾಪದ ಫಲವನ್ನು ಊಟ ಮಾಡುವ ಕಾಲ ಬಂದಿದೆ. ಜನ ತೀರ್ಮಾನ ಮಾಡುತ್ತಾರೆ. ಇನ್ನೂ ಅದರ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ನಾನು ಇಷ್ಟಪಡುವುದಿಲ್ಲ. ನಿಜವಾಗಿಯೂ ಈ ರಾಜ್ಯದಲ್ಲಿರುವ ರೈತನ ಬಗ್ಗೆ ಕಳಕಳಿ ಇದ್ದರೆ, ದಯಾಮಾಡಿ ತಕ್ಷಣವೇ ಈ ನೀರಾವರಿ ದರವನ್ನು ಏನು ಏರಿಕೆ ಮಾಡಿದ್ದೀರಿ, ಅದನ್ನು ತಕ್ಷಣವೇ ವಾಪಸ್ಸು ತೆಗೆದುಕೊಳ್ಳುವ ಪ್ರಯತ್ನ ಮಾಡಿ. ಏಕೆಂದರೆ, ಈ ನೀರಾವರಿ ಕರವನ್ನು ಏನು ಹೆಚ್ಚು ಮಾಡಿದ್ದೀರಿ ಇದು ಎಫೆಕ್ಟ್‌ಗೆ ಬರುವುದು ೧-೧-೮೯ರಿಂದ. ಆ ಬಡವನಿಗೆ ನೀರಾವರಿ ದರ ಏರಿಕೆಯಾಗಿ ಸಾವಿರಾರು ರೂಪಾಯಿ ನೀರಾವರಿ ತೆರಿಗೆ ಕಟ್ಟಬೇಕೆನಿಸುವುದು ಮುಂದಿನ ವರ್ಷ. ಅವನ ಹತ್ತಿರ ವಸೂಲಿ ಮಾಡುವುದಕ್ಕೆ ಹೋದಾಗ. ಮುಂದಿನ ವರ್ಷ ಚುನಾವಣೆ ವರ್ಷವಾಗಿರುವುದರಿಂದ ನೀವು ವಸೂಲಿಗೆ ಹೋಗುವುದಿಲ್ಲ. ನಾಳೆ ಮುಂದೆ ಬರುವ ಸರ್ಕಾರ ಬೇಕಾದರೆ ಆತನ ಜಮೀನು ಹರಾಜು ಮಾಡಲಿ ಎಂದು ಹೇಳಬಹುದು. ಆದ್ದರಿಂದ ನಾಳೆ ತಾವು ವಿರೋಧ ಪಕ್ಷದಲ್ಲಿ ಕೂತು, ನಾವು ತಪ್ಪು ಮಾಡಿದೆವು, ನೀರಿನ ದರ ಹೆಚ್ಚು ಮಾಡಿ ತಪ್ಪು ಮಾಡಿದೆವು ಅದನ್ನು ಕಡಿಮೆ ಮಾಡಿ ಎಂದು ಹೇಳುವ ಸ್ಥಿತಿಗೆ ತಾವು ಬರಬಾರದು ಎಂಬ ಅಪೇಕ್ಷೆ ಇದ್ದರೆ ಈ ನೀರಿನ ತೆರಿಗೆಯನ್ನು ಹಾಕಬೇಡಿ. ಈ ರಾಜ್ಯದ ರೈತ ಬದುಕಬೇಕೆಂದಿದ್ದರೆ, ನಾಳೆ ಚುನಾವಣೆ ಸಮಯದಲ್ಲಿ ನಿಮ್ಮ ಶಾಸಕರು ರೈತರನ್ನು ಭೇಟಿ ಮಾಡಿ ಮರ್ಯಾದೆಯಿಂದ ವಾಪಸ್ಸು ಬರಬೇಕೆಂಬ ಅಪೇಕ್ಷೆ ಈ ಸರ್ಕಾರಕ್ಕೆ ಇದ್ದರೆ. ಈ ನೀರಾವರಿ ದರವನ್ನು ಮೊದಲು ಇದ್ದ ಹಾಗೆ ಮಾಡಿ. ಇದಕ್ಕೆ ಸಾಕ್ಷಿ, ಶಿವಮೊಗ್ಗ ಜಿಲ್ಲೆಯಲ್ಲಿ ಸೇರಿದ್ದ ೫೦-೬೦ ಸಾವಿರ ಜನರು. ನೀವು ಮಾಡಿದ ಪಾಪದ ಫಲವಾಗಿ ರೈತರು ಕಷ್ಟ ಅನುಭವಿಸುತ್ತಿದ್ದಾರೆ. ೧೫ ದಿವಸಗಳಲ್ಲಿ ಶಿವಮೊಗ್ಗ ಜಿಲ್ಲೆಯ ಸುಮಾರು ೪೦೦ ಹಳ್ಳಿಗಳಲ್ಲಿ ಸಾರ್ವಜನಿಕ ಸಭೆ ಮಾಡಿದೆವು. ಬೆಳಿಗ್ಗೆ ಆರೂವರೆ ಏಳು ಗಂಟೆಗೆ ಹೊರಟರೆ ರಾತ್ರಿ ೧೨-೧ ಗಂಟೆಗೆ ವಾಪಸ್ಸು ಬರುತ್ತಿದ್ದೆವು. ಏಕೆ ಇದೆಲ್ಲಾ? ನೀವು ನಂಬಿ ಅಧಿಕಾರಕ್ಕೆ ತಂದ ಜನತಾ ದಳ ಸರ್ಕಾರ ಪರಸ್ಪರ ಬಡಿದಾಡಿಕೊಂಡು ಈ ರಾಜ್ಯದ ರೈತನನ್ನು ಬಗರ್‌ಹುಕುಂ ಸಾಗುವಳಿದಾರನನ್ನು, ಬಡ ಗೇಣಿದಾರರನ್ನು ಮರೆತು ಭಿಕ್ಷೆ ಬೇಡುವ ಸ್ಥಿತಿಗೆ ಬಂದಿದೆ. ನೀರಾವರಿ ದರ ಜಾಸ್ತಿಯಾಗಿ ನಿನ್ನ ಮನೆಗೆ ನೋಟೀಸ್ ಬರುವವರೆಗೆ ಕಾಯದೇ ಈಗಲೇ ಬಾ, ಈಗಲೇ ಹೋರಾಟದಲ್ಲಿ ಪಾಲ್ಗೊಂಡು ಈ ಸರ್ಕಾರಕ್ಕೆ ಧಿಕ್ಕಾರ ಎಂದು ಹೇಳಿ ಎಂದು ಕರೆದುಕೊಂಡು ಬಂದಿದ್ದೇವೆ. ಕಾಂಗ್ರೆಸ್‌ನ. ಜನತಾದ ಬೇರೆ ಬೇರೆ ಪಕ್ಷದ ಸಾಮಾನ್ಯ ಜನರು ಸುಮಾರು ೫೦ ಸಾವಿರದಷ್ಟು ಸಂಖ್ಯೆಯಲ್ಲಿ ಶಿವಮೊಗ್ಗದಲ್ಲಿ ಬಂದಿದ್ದರು. ಇದು ಇಡೀ ರಾಜ್ಯದಲ್ಲಿ ಪುನರಾವರ್ತನೆಯಾಗುತ್ತದೆ. ಇದೇ ತಿಂಗಳ ೧೧ನೇ ತಾರೀಖು ಮಂಗಳೂರಿನಲ್ಲಿ ೩೫ ಸಾವಿರದಿಂದ ೪೦ ಸಾವಿರ ಜನರನ್ನು ಸೇರಿಸುತ್ತಿದ್ದೇವೆ, ನಿಮ್ಮ ಸರ್ಕಾರಕ್ಕೆ ಧಿಕ್ಕಾರ ಹೇಳುವುದಕ್ಕೋಸ್ಕರ. ಈ ರೈತ ವಿರೋಧಿ ಸರ್ಕಾರ ಬಡ ಗೇಣಿದಾರನಿಗೆ ಏನು ಅನ್ಯಾಯ ಮಾಡುತ್ತಿದೆ ಎಂಬುದನ್ನು ಹೇಳುವುದಕ್ಕೆ ನಾವು ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದೇವೆ. ಈ ಹೋರಾಟದ ಅಗತ್ಯತೆ ಇಲ್ಲವೇ ಸ್ವಾಮಿ? ಯಾರು ಬುದ್ಧಿ ಇಲ್ಲದ ಕಡು ಬಡವ, ರೈತ ತಾನು ನಂಬಿ ಓಟು ಕೊಟ್ಟು ಇಲ್ಲಿಗೆ ಕಳುಹಿಸಿಕೊಟ್ಟ ಶಾಸಕರು ಆ ಕಡೆ ಈ ಕಡೆ ಎಲ್ಲರೂ ಈ ಶಾಸನ ಸಭೆಯಲ್ಲಿ ಬಂದಮೇಲೆ ಈ ಸದನದಲ್ಲಿ ಬೆಳಿಗ್ಗೆಯಿಂದ ನಡೆದ ಚರ್ಚೆಯಲ್ಲಿ ಈ ರಾಜ್ಯದ ರೈತರಿಗೆ ಸಂಬಂಧಪಟ್ಟ ಪಂಪುಸೆಟ್ಟುಗಳಿಗೆ ವಿದ್ಯುತ್ ಸರಬರಾಜಿನ ವಿಷಯ ಬಿಟ್ಟು ಕಳೆದ ೪-೫ ದಿವಸಗಳಲ್ಲಿ ಯಾವ ಪ್ರಮುಖವಾದ ವಿಷಯಗಳ ಬಗ್ಗೆ ಚರ್ಚೆಯಾಗಿದೆ ಸ್ವಾಮಿ? ಇದು ಈಗ ಇರುವ ಸ್ಥಿತಿ. ನನ್ನ ಕಾಂಗ್ರೆಸ್ ಮಿತ್ರರೇ ಕೆಲವರು ನನಗೆ ಕೇಳುತ್ತಾರೆ. ಯಡಿಯೂರಪ್ಪನವರೇ ಯಾಕ್ರೀ ರಾಜ್ಯದ ಉದ್ದಗಲ ಓಡಾಡುತ್ತೀರಿ, ಈ ಸರ್ಕಾರದ ಕಾಲ ಮುಗಿಯುತ್ತಾ ಬಂದಿದೆ, ಪಾಪದ ಬಟ್ಟಲು ತುಂಬುತ್ತಿದೆ, ನಾವು ಹುಚ್ಚರಂತೆ ತಿರುಗಿ ಸರ್ಕಾರ ಮಾಡಿದ ವೈಫಲ್ಯಗಳನ್ನು ಹೇಳಿದ ಪರಿಣಾಮ ಜನರು ಹುಚ್ಚೆದ್ದು ಕುಣಿತಾರೆ, ಕೊನೆಗೆ ಲಾಭ ಆಗುವುದು ಯಡಿಯೂರಪ್ಪನವರೇ ನಿಮಗಲ್ಲ, ಈ ಸರ್ಕಾರವನ್ನು ಧಿಕ್ಕಾರ ಮಾಡಿದ ಜನ ಕಾಂಗ್ರೆಸ್ ಕಡೆ ಓಟು ಕೊಡುತ್ತಾರೆ, ನಾವು ಅಧಿಕಾರಕ್ಕೆ ಬರುತ್ತೇವೆ'' ಎಂದು ನಮ್ಮ ಕಾಂಗ್ರೆಸ್ ಮಿತ್ರರೇ ಹೇಳಿದರು. ಮತ್ತೆ ಮುಂದುವರೆದು ಅವರು ''ನಾವು ಏಕೆ ಶ್ರಮ ತೆಗೆದುಕೊಳ್ಳೋಣ, ಈ ಸರ್ಕಾರ ತಪ್ಪು ಮಾಡಬೇಕು, ಜನ ಕಣ್ಣೀರಲ್ಲಿ ಕೈತೊಳೆಯಬೇಕು. ನಮ್ಮದು ಒಂದೇ ಒಂದು ಪಾಯಿಂಟ್ ಪ್ರೋಗ್ರಾಂ, ಈ ಸರ್ಕಾರದ ಮೇಲೆ ಬೇಸತ್ತ ಜನರು ನಮಗೆ ಓಟು ಕೊಡಬೇಕು, ನೀವು ಎಲ್ಲಿದ್ದೀರಿ ಯಡಿಯೂರಪ್ಪನವರೇ'' ಎಂದು ನನಗೆ ಅನೇಕ ಸ್ನೇಹಿತರು ಹೇಳುತ್ತಿದ್ದಾರೆ. ಆದರೆ ಈ ರಾಜ್ಯದ ರೈತ ಬುದ್ಧಿವಂತನಾಗಿದ್ದಾನೆ. ಆ ರೀತಿಯ ಯಾವುದೇ ಒಂದು ಭ್ರಮೆಯಲ್ಲಿ ಆತ ಇಲ್ಲ. ಒಂದು ಆಡಳಿತ ಪಕ್ಷವಾಗಿ ನೀವು ಮಾಡಿದ ಒಳ್ಳೆಯ ಹಾಗೂ ಕೆಟ್ಟ ಕೆಲಸಗಳ ಬಗ್ಗೆ ಜನರಿಗೆ ತಿಳಿಸುವ ಜವಾಬ್ದಾರಿಯನ್ನು

ವಿರೋಧ ಪಕ್ಷದವರು ಮಾಡಬೇಕಾಗುತ್ತದೆ. ತಾವು ತಪ್ಪು ಮಾಡಿದಾಗ ತಪ್ಪನ್ನು ತಿದ್ದುವ ಪ್ರಯತ್ನ ಮಾಡಿ ಜನರಿಗೆ ಅನ್ಯಾಯ ಆಗದಹಾಗೆ ನಾವು ಮಾಡಬೇಕಾಗುತ್ತದೆ. ನಾವು ಹೇಳುವುದನ್ನೂ ಕೇಳದೇ ಇದ್ದಾಗ ಅಧಿಕಾರದ ಮದದಲ್ಲಿ ಮೈಮರೆತು ಕೂತಿದ್ದಾಗ ನಾವು ಅದನ್ನು ಜನರಿಗೆ ಹೇಳಬೇಕಾಗುತ್ತದೆ. ಅವರು ಯಾವುದೋ ಲೋಕದಲ್ಲಿದ್ದಾರೆ, ವಿರೋಧ ಪಕ್ಷದವರು ಹೇಳಿದ ಮಾತಿಗೆ ಬೆಲೆ ಕೊಡುವ ಸ್ಥಿತಿಯಲ್ಲಿ ಅವರು ಇಲ್ಲ ಎಂದು ಹೇಳಬೇಕಾಗುತ್ತದೆ. ಭ್ರಷ್ಟಾಚಾರದ ಬಗ್ಗೆ ಇಲ್ಲಿ ಅನೇಕ ವಿಚಾರಗಳು ಚರ್ಚೆಯಾಗಿವೆ. ಎನ್.ಆರ್.ಐ. ಮತ್ತೊಂದು, ಮಗದೊಂದು. ಮಧುವಿನ ಈ ರೀತಿ ಬೇಕಾದಷ್ಟು ವಿಷಯಗಳು ಚರ್ಚೆಯಾಗಿವೆ. ನಾನು ಇಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಕಾಂಗ್ರೆಸ್ ಆಡಳಿತದ ಬಗ್ಗೆ ನಾವು ನಿವೆಲ್ಲಾ ಟೀಕೆ ಮಾಡಿದ್ದೇವೆ. ಪ್ರಮುಖ ತೀರ್ಮಾನ ತೆಗೆದುಕೊಳ್ಳುವ ಸಂದರ್ಭದಲ್ಲಿ ಈ ಪ್ರಜಾಪ್ರಭುತ್ವದ ವ್ಯವಸ್ಥೆಗೆ ಗೌರವ ತರಬೇಕೆನ್ನುವ ಅಪೇಕ್ಷೆ ನಿಮಗಿದ್ದಿದ್ರೆ, ಇಲ್ಲಿ ಎಲ್ಲಾ ವಿರೋಧ ಪಕ್ಷಗಳ ನಾಯಕರ ಜೊತೆ ಅನೇಕ ವಿಷಯಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟು ಆಡಳಿತ ಮಾಡಬೇಕೆಂದು ಮನಸ್ಸು ಇದ್ದರೆ ಈ ರೀತಿ ಲಕ್ಷಾಂತರ ಜನರಿಗೆ ಸಂಬಂಧಪಟ್ಟ ವಿಷಯಗಳು ಚರ್ಚೆಗೆ ಬಂದಾಗ, ಎನ್.ಆರ್.ಐ. ಬಗ್ಗೆ ತೀರ್ಮಾನ ತೆಗೆದುಕೊಳ್ಳುವಾಗ ವಿರೋಧ ಪಕ್ಷದ ನಾಯಕರಿಗೆ ಆ ಫೈಲನ್ನು ಕಳುಹಿಸಬೇಕಾಗಿತ್ತು. ತೀರ್ಮಾನ ತೆಗೆದುಕೊಳ್ಳುವುದಕ್ಕೆ ಹೇಗಿದ್ದರೂ ನಿಮಗೆ ಬಹುಮತ ಇದ್ದೇ ಇದೆ. ಈ ಬಗ್ಗೆ ಕಾಂಗ್ರೆಸ್ ಪಕ್ಷದ ಮುಖಂಡರು ಏನು ಹೇಳುತ್ತಾರೆ, ಕಮ್ಯುನಿಸ್ಟ್ ಪಕ್ಷದ ಮುಖಂಡರು ಏನು ಹೇಳುತ್ತಾರೆ, ಬಿ.ಜೆ.ಪಿ.ಯವರು ಏನು ಹೇಳುತ್ತಾರೆ ಎಂಬುದನ್ನೆಲ್ಲಾ ಕೇಳಿ ನಂತರ ನೀವು ತೀರ್ಮಾನವನ್ನು ತೆಗೆದುಕೊಳ್ಳಬಹುದಿತ್ತು. ಸಾವಿರಾರು ಜನರಿಗೆ ಸಂಬಂಧಪಟ್ಟ ವಿಷಯದ ಬಗ್ಗೆ ತೀರ್ಮಾನ ತೆಗೆದುಕೊಳ್ಳುವ ಸಂದರ್ಭದಲ್ಲಿ ಅಧಿಕಾರ ಕೈಯಲ್ಲಿದೆ ಎಂದು ಹೇಳಿ ಕಾನೂನಿನ ದುರುಪಯೋಗ ಮಾಡಿಕೊಂಡ ಪರಿಣಾಮವಾಗಿ ಇವತ್ತು ಈ ರಾಜ್ಯದ ರೈತ ಕಂಗಾಲಾಗಿದ್ದಾನೆ, ಈ ಸರ್ಕಾರದ ವಿರುದ್ಧ ಸಿಡಿದೆದ್ದಿದ್ದಾನೆ. ಇದರ ಬಗ್ಗೆ ತಾವು ಗಮನಹರಿಸಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಸಿ. ಅಂಡ್ ಡಿ. ಲ್ಯಾಂಡ್ ಬಗ್ಗೆ ಹೇಳುವುದಾದರೆ, ಈ ಸಿ. ಅಂಡ್ ಡಿ. ಲ್ಯಾಂಡ್ ಯಾವುದು ? ಯಾವ ರೆವಿನ್ಯೂ ಇಲಾಖೆಗೆ ಸೇರಿದಂತಹ ಸೊಪ್ಪಿನಬೆಟ್ಟ ಇರಬಹುದು, ಗೋಮಾಳ ಇರಬಹುದು. ಆ ಎಲ್ಲ ಜಮೀನುಗಳನ್ನು ಸೇರಿಸಿ ಸಿ. ಅಂಡ್. ಡಿ. ಲ್ಯಾಂಡ್ ಅಂತ ಮಾಡಿ, ಆ ಎಲ್ಲ ಲ್ಯಾಂಡನ್ನು ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಿದಿರಿ. ಇದು ನಿಮ್ಮ ವರ್ಗಾವಣೆ ಮಾಡುವ ಉದ್ದೇಶ ಏನು ? ಆಯವ್ಯಯದ ಪುಟ ೧೨ರಲ್ಲಿ ಒಂದು ಮಾತನ್ನು ಹೇಳಿದ್ದೀರಿ. ಏನೆಂದರೆ,

> ''ಸಿ. ಮತ್ತು ಡಿ. ವರ್ಗದ ರೆವಿನ್ಯೂ ಜಮೀನುಗಳನ್ನು ಸಾಮಾಜಿಕ ವನ ನಿರ್ಮಾಣದ ಅಭಿವೃದ್ಧಿಗಾಗಿ ಅರಣ್ಯ ಇಲಾಖೆಗೆ ನಾವು ವರ್ಗಾಯಿಸಿದ್ದೇವೆ ಇವುಗಳ ಪೈಕಿ ಕೆಲವು ಜಮೀನುಗಳನ್ನು ಇದುವರೆವಿಗೂ ಅಭಿವೃದ್ಧಿಪಡಿಸಲಾಗಿಲ್ಲ.'' ಎಂದು.

ನಾನು ಕೇಳುತ್ತೇನೆ ಸ್ವಾಮಿ, ಈ ರಾಜ್ಯದ ಜನಕ್ಕೆ ಮೋಸ ಮಾಡತಕ್ಕ ಹೇಳಿಕೆಯನ್ನು ಏಕೆ ಕೊಡುತ್ತೀರಿ? ಕೆಲವು ಜಮೀನುಗಳು ಅಂದರೆ ಎಷ್ಟು ? ಇವತ್ತು ರಾಜ್ಯದಲ್ಲಿ ೮ ಲಕ್ಷ ಎಕರೆ ಜಮೀನನ್ನು ಈ ರೀತಿ ಸಿ. ಅಂಡ್ ಡಿ. ಲ್ಯಾಂಡ್ ಎಂಬುದಾಗಿ ಮಾಡಿ, ಅದನ್ನು ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಿದ್ದೀರಿ. ನಾನು ಧೈರ್ಯವಾಗಿ ಹೇಳುತ್ತೇನೆ. ಅರಣ್ಯ ಇಲಾಖೆಗೆ ಈ ರೀತಿ ವನ ನಿರ್ಮಾಣ ಮಾಡುವುದಕ್ಕೋಸ್ಕರ ವರ್ಗಾವಣೆ ಮಾಡಿದ್ದರಲ್ಲಿ ವನ ನಿರ್ಮಾಣ ಮಾಡಲೇ ಇಲ್ಲ. ಸಿ. ಅಂಡ್ ಡಿ. ಲ್ಯಾಂಡ್ ಏನು ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಿದ್ದೀರಿ, ಅದರಲ್ಲಿ ಸಾಗರ ತಾಲ್ಲೂಕಿನಲ್ಲಿ ೬೨ ಕೆರೆಗಳನ್ನು ವರ್ಗಾವಣೆ ಮಾಡಿದ್ದೀರಿ. ಅದರಲ್ಲಿ ನಾನು ಸ್ವತಃ ೧೨ ಕೆರೆಗಳನ್ನು ಹೋಗಿ ನೋಡಿಕೊಂಡು ಬಂದಿದ್ದೇನೆ. ಕೆರೆಗಳಲ್ಲಿ ಏನಾದರು ಗಿಡಗಳನ್ನು ಬೆಳೆಸುತ್ತೀರಾ ? ಅನೇಕ ಹಳ್ಳಿಗಳನ್ನು ಸಿ. ಅಂಡ್ ಡಿ. ಲ್ಯಾಂಡ್ ಎಂಬುದಾಗಿ ವರ್ಗಾವಣೆ ಮಾಡಿದ್ದೀರಿ. ಲಕ್ಷಾಂತರ ಎಕರೆ ಜಮೀನಿನಲ್ಲಿ ಲಕ್ಷಾಂತರ ಜನರು ಏನು ಬಗರ್ ಹುಕ್ಕುಂ ಸಾಗುವಳಿ ಮಾಡುತ್ತಿದ್ದಾರೋ, ಅದನ್ನೂ ಕೂಡ ಸಿ. ಮತ್ತು ಡಿ. ಲ್ಯಾಂಡ್ ಎಂಬುದಾಗಿ ಅರಣ್ಯ ಇಲಾಖೆಗೆ ವರ್ಗಾಯಿಸಿದ್ದೀರಿ. ಎಲ್ಲಿ ಇತ್ತು ನಿಮ್ಮ ಆದೇಶ ಅವತ್ತು. ಮಾನ್ಯ ಮುಖ್ಯಮಂತ್ರಿಗಳು ಚುನಾವಣೆಯಲ್ಲಿ ಗೆದ್ದು ಬಂದಾಗ, ವಿಧಾನಸಭೆಯನ್ನು ವಿಸರ್ಜನೆ ಮಾಡಿ, ಎರಡನೆ ಸಾರಿ ಆರಿಸಿ ಬಂದಾಗ ಈ ವಿಧಾನ ಸಭೆಯಲ್ಲಿ ಕಾರ್ಯಕಲಾಪ ಪ್ರಾರಂಭವಾಗುವುದಕ್ಕಿಂತ ೩ ದಿವಸ ಮುಂಚಿತವಾಗಿ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಒಂದು ತೀರ್ಮಾನವನ್ನು ತೆಗೆದುಕೊಂಡರು. ಶಿವಮೊಗ್ಗ, ಚಿಕ್ಕಮಗಳೂರು, ಆ ಭಾಗದ ಜಿಲ್ಲಾಧಿಕಾರಿಗಳನ್ನು ಕರೆಸಿ ಆ ಭಾಗದಲ್ಲಿರತಕ್ಕ ಸಿ. ಮತ್ತು ಡಿ. ಲ್ಯಾಂಡನ್ನು ೨೪ ಗಂಟೆಯೊಳಗೆ ವರ್ಗಾವಣೆ ಮಾಡಿ ಎಂಬುದಾಗಿ ಆದೇಶವನ್ನು ಕೊಟ್ಟರು. ಆಗ ವರ್ಗಾವಣೆ ಮಾಡುವುದಕ್ಕೋಸ್ಕರ ಹೆಲಿಕ್ಯಾಪ್ಟರ್ ಓಡಾಡಿತು. ಈ ಸದನದಲ್ಲಿ ಮೊದಲನೆಯ ದಿವಸವೇ

ನಾನು ಕೇಳಿದೆ. ಏನು ಸ್ವಾಮಿ ೨ನೇ ಸಾರಿ ಅಧಿಕಾರಕ್ಕೆ ಬರುತ್ತಿದ್ದ ಹಾಗೆ ಇಷ್ಟು ಅವಸರದಲ್ಲಿ ಏಕೆ ಸಿ. ಮತ್ತು ಡಿ. ಲ್ಯಾಂಡನ್ನು ಅರಣ್ಯ ಇಲಾಖೆಗೆ ವರ್ಗಾವಣೆ ಮಾಡುತ್ತಿದ್ದೀರಿ ಎಂದು, ಇದಕ್ಕೇನಾ ಜನ ನಿಮ್ಮನ್ನು ಅಧಿಕಾರಕ್ಕೆ ತಂದಿದ್ದು ? ವಿಧಾನಸಭೆಯಲ್ಲಿ ನಮ್ಮನ್ನು ಕೇಳಬೇಕಾಗಿತ್ತು ಕೇಳಿದ್ದೀರಾ ಎನ್ನುವ ಮಾತನ್ನು ಹೇಳಿದ್ದೇನೆ. ಇವರು ಟಾಟಾ-ಬಿರ್ಲಾರವರನ್ನು ಬೆಳೆಸುವುದಕ್ಕೆ ಹೊರಟಿದ್ದೀರಿ ಎನ್ನುವ ಮಾತನ್ನು ಸಹ ಹೇಳಿದ್ದೇನೆ.

೨-೩೦ ಪಿ. ಎಂ.

ಶ್ರೀ ಬಿ. ಸ್ವಾಮಿರಾವ್.—ಕೋರಂ ಇಲ್ಲ. ಯಾರಿಗೆ ಹೇಳಬೇಕು ? ಅವರು ಯಾರಿಗಾಗಿ ಭಾಷಣ ಮಾಡುತ್ತಿದ್ದಾರೆ ?

ಶ್ರೀ ಆರ್. ವೆಂಕಟರಾಮಯ್ಯ.—ಕೋರಂ ಇಲ್ಲದಿದ್ದರೆ ಸಭೆಯನ್ನು ಅಡ್ಜರ್ನ್ ಮಾಡ ಬೇಕಾಗುತ್ತದೆ.

ಶ್ರೀ ಎಚ್. ಕೆ. ಕುಮಾರಸ್ವಾಮಿ.—ದಯಮಾಡಿ ಸೋಮವಾರಕ್ಕೆ ಸಭೆಯನ್ನು ಅಡ್ಜರ್ನ್ ಮಾಡಿ.

ಶ್ರೀ ಆರ್. ವೆಂಕಟರಾಮಯ್ಯ.—ಲಕ್ಷ್ಮೀಸಾಗರ್ ಅವರು ಒಬ್ಬರೇ ಇಲ್ಲಿ ಇದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಒಂದೇ ಒಂದು ಈ ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳು ವಂತಹದ್ದು. ೫ ವರ್ಷಗಳ ಹಿಂದೆ ೨ನೇ ಸಾರಿ ಇವರು ಅಧಿಕಾರಕ್ಕೆ ಬಂದಾಗ, ಈ ಸದನ ಸೇರುವುದಕ್ಕೆ ಮೊದಲೇ ಈ ಸದನದಲ್ಲಿ ಕಾರ್ಯಕಲಾಪಗಳು ಪ್ರಾರಂಭವಾಗುವುದಕ್ಕಿಂತ ಮುಂಚಿತವಾಗಿ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಸಿ. ಮತ್ತು ಡಿ. ವರ್ಗ ಲ್ಯಾಂಡನ್ನು ಅರಣ್ಯ ಇಲಾಖೆಗೆ ವರ್ಗಾವಣೆ ಮಾಡುವಂತಹ ತೀರ್ಮಾನವನ್ನು ತೆಗೆದುಕೊಂಡರು. ೬ ವರ್ಷದ ನಂತರ ಈ ಸರ್ಕಾರವನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಬಜೆಟ್‌ನಲ್ಲಿ ನೀವು ಹೇಳಬೇಕಾಗಿತ್ತು. ೫ ಲಕ್ಷ ಎಕರೆಯನ್ನು ಏನು ಅರಣ್ಯ ಇಲಾಖೆಗೆ ಸಾಮಾಜಿಕ ವನ ನಿರ್ಮಾಣಕ್ಕಾಗಿ ವರ್ಗಾವಣೆ ಮಾಡಿದ್ದೇವೆಯೋ ಅದರಲ್ಲಿ ೬ ಲಕ್ಷ ಎಕರೆಯಲ್ಲಿ ಮಾತ್ರ ವನ ನಿರ್ಮಾಣ ಮಾಡಿದ್ದೇವೆ, ಅಥವಾ ಅರಣ್ಯ ಇಲಾಖೆಗೆ ವರ್ಗಾವಣೆ ಮಾಡು ವಂತಹ ಸಮಯದಲ್ಲಿ ಎಷ್ಟೆಷ್ಟು ಎಕರೆ ಪ್ರತಿ ವರ್ಷ ಬೇಕಾಗಿತ್ತೋ ಅಷ್ಟಷ್ಟು ಎಕರೆಯನ್ನು ಮಾತ್ರ ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಬೇಕಾಗಿತ್ತು. ಅದನ್ನು ಮಾಡದೆ ಯಾವ ರೈತ ಗೋಮಾಳದಲ್ಲಿ ದನಗಳು ಮೇಯುವುದಕ್ಕೋಸ್ಕರ, ಜಾನುವಾರುಗಳಿಗೋಸ್ಕರ ತಾತ ಮುತ್ತಾತನ ಕಾಲದಿಂದಲೂ ಉಳಿದುಕೊಂಡು ಬಂದಿತ್ತು. ಸೊಪ್ಪಿನ ಬೆಟ್ಟದಲ್ಲಿ ಸೊಪ್ಪು ಬೇಕಾಗಿತ್ತು. ಮಣ್ಣು ಬೇಕಾಗಿತ್ತು. ಬ್ರಿಟೀಷರ ಕಾಲದಿಂದಲೂ ಉಳಿದುಕೊಂಡು ಬಂದಂತಹ ಜಮೀನು ಅದು. ಆದರೆ ವಿಶ್ವ ಬ್ಯಾಂಕಿನಿಂದ ಕೋಟಿಗಟ್ಟಲೆ ದುಡ್ಡು ಬರುತ್ತದೆಂದು ಹೇಳಿ ಅರಣ್ಯ ಇಲಾಖೆಯವರ ಮುತುವರ್ಜಿ ಎಷ್ಟು ಸ್ವಾಮಿ ? ಇವತ್ತು ಗ್ರಾನೈಟ್ ಪಿಂಕ್ ಕಲ್ಲರ್ ಸ್ಟೋನ್ ಕನಕಪುರದಲ್ಲಿ ಲೂಟಿಯಾಗುತ್ತಿದೆ. ನಾನು ಹೋಗಿ ನೋಡಿಕೊಂಡು ಬಂದಿದ್ದೇನೆ. ಜನವರಿ ೨೧ನೇ ತಾರೀಖು ಅಲ್ಲಿಗೆ ಹೋಗಿ ಬಂದಿದ್ದೇನೆ. ಕೋಟ್ಯಾಂತರ ರೂಪಾಯಿಗಳ ಪಿಂಕ್ ಕಲ್ಲರ್ ಸ್ಟೋನ್ ಕಳ್ಳಸಾಗಾಣಿಕೆಯಾಗುತ್ತಿದೆ. ಮೈಸೂರು ಜಿಲ್ಲೆಯ ಚಾಮರಾಜನಗರ ತಾಲ್ಲೂಕಿನಿಂದಲೂ ಪಿಂಕ್ ಕಲರ್ ಸ್ಟೋನ್ ಕಳ್ಳತನವಾಗುತ್ತಿದೆ. ಯಾರು ಸ್ವಾಮಿ ಅವರಿಗೆ ಲೈಸನ್ಸನ್ನು ಕೊಟ್ಟವರು ? ಈ ಸರ್ಕಾರ ಸತ್ತಿದೆಯಾ ? ಅಧಿಕಾರಿಗಳು ಬದುಕಿರಲಿಲ್ಲವಾ ? ಒಂದೊಂದು ಲಾರಿಯಲ್ಲಿ ೨೫-೩೦ ಟನ್‌ಗಳಷ್ಟು ಪಿಂಕ್ ಕಲ್ಲರ್ ಸ್ಟೋನ್ ಕಳ್ಳಸಾಗಾಣಿಕೆಯಾಗಿ ಮಂಗಳೂರು ಬಂದರಿನಿಂದ ಹೊರಗಡೆ ದೇಶಗಳಿಗೆ ಹೋಗುತ್ತಿರಬೇಕಾದರೆ ಯಾವ ನೈಸರ್ಗಿಕ ಸಂಪತ್ತು ಈ ನಾಡಿನ ಜನತೆಗೆ ದೊರಕಬೇಕಾಗಿತ್ತೋ ಅದು ಹೊರಗಡೆ ಹೋಗುತ್ತಿರುವಾಗ, ಯಾವ ಪುಡಾರಿ ಜೇಬಿಗೆ ಆ ದುಡ್ಡು ಸೇರುತ್ತಿದೆ ? ನೋಡಿದರೂ ನೋಡದ ಹಾಗೆ ಏತಕ್ಕೋಸ್ಕರ ಸುಮ್ಮನೆ ಸುಮ್ಮನೆ ಕುಳಿತಿದ್ದೀರಿ ? ಮುಂದಿನ ದಿವಸಗಳಲ್ಲಿ ಚುನಾವಣೆಯ ಸಮಯದಲ್ಲಾದರೂ ಆ ಬಗ್ಗೆ ಜನರಿಗೆ ಉತ್ತರವನ್ನು ಹೇಳಬೇಕಾಗುತ್ತದೆ. ಆದರೂ ಈ ಸದನಕ್ಕೆ ಆ ಬಗ್ಗೆ ಏನನ್ನು ನೀವು ಹೇಳುತ್ತೀರೋ ಅದನ್ನು ಹೇಳಿ.

ಇನ್ನು ಸಿ. ಮತ್ತು ಡಿ. ಲ್ಯಾಂಡ್ ಬಗ್ಗೆ ನೇರವಾಗಿ ಸರ್ಕಾರವನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ನನಗೆ ಗೊತ್ತಿದೆ, ಮುಖ್ಯಮಂತ್ರಿಗಳು ಉತ್ತರ ಕೊಡತಕ್ಕಂತಹ ಸಂದರ್ಭದಲ್ಲಿ ಶ್ರೀ ಯಡಿಯೂರಪ್ಪ ನವರ ಹೆಸರನ್ನು ಪ್ರಸ್ತಾಪ ಮಾಡಲಿಕ್ಕಿಲ್ಲ. ಏಕೆ ? ಒಂದು ಪಕ್ಷದಲ್ಲಿ ಎಷ್ಟು ಜನ ಸದಸ್ಯರಿದ್ದಾರೆ, ಅದರ ಆಧಾರದ ಮೇಲೆ ಉತ್ತರ ಕೊಡತಕ್ಕಂತಹ ಜನ ನೀವು. ಅದು ನನಗೆ ಗೊತ್ತಿದೆ.

ನಿನ್ನೆ ದಿವಸ ಯಾವ ಶಿಕಾರಿಪುರ ತಾಲ್ಲೂಕಿನಲ್ಲಿ ದಲಿತರ ಬೆತ್ತಲೆ ಮೆರವಣಿಗೆಯಾಯಿತು. ನಾನು ಬೇರೆ ಬೇರೆ ಜಿಲ್ಲೆಗಳಲ್ಲಿ ಪ್ರವಾಸ ಮುಗಿಸಿಕೊಂಡು ೧೩ನೇ ತಾರೀಖು ಬೆಳಗ್ಗೆ ಊರಿಗೆ ಬಂದಾಗ ಅವರು ನನ್ನಲ್ಲಿ ಬಂದು ಕಣ್ಣೀರು ಹಾಕಿದಾಗ ನಾನು ಸ್ಥಳ ಪರಿಶೀಲನೆ ಮಾಡಿ, ಡಿ. ಸಿ. ಮತ್ತು ಎಸ್. ಪಿ. ಅವರಿಗೆ ಕರೆದುಕೊಂಡು ಹೋಗಿ ತೋರಿಸಿದೆ. ಅದೇ ವಿಚಾರವನ್ನು ಇದೇ ಮುಖ್ಯಮಂತ್ರಿಗಳಲ್ಲಿ ಇದೇ ರಾಚಯ್ಯನವರು ಹೇಳಿದಾಗ ಅವರು ಕಣ್ಣೀರು ಹಾಕಿದರು. ನೋಡಿ ಏನು ಮಾಡುತ್ತೇನೆ ೨೪ ಗಂಟೆಗಳಲ್ಲಿ ಅಂತ ಹೇಳಿದರು. ಆದರೆ ಈ ಸದನವಲ್ಲಿ ನೋಡಿದರೆ ಕಳ್ಳಸಾಗಾಣಿಕೆಯ ಬಗ್ಗೆ ಉತ್ತರ ಹೇಳಿದರು. ಬೇಕಾದರೆ ರೆಕಾರ್ಡ್ ತರಿಸಿ ನೋಡಿ. ಕಳೆದ ೬-೭ ವರ್ಷಗಳಿಂದ ಶಿಕಾರಿಪುರ ತಾಲ್ಲೂಕಿನಲ್ಲಿ ಅರಣ್ಯ ಲೂಟಿಯಾಗುತ್ತಿದೆ. ಚಂದ್ರಕಲಾ ಫಾರೆಸ್ಟ್‌ನಲ್ಲಿ ಶ್ರೀಗಂಧದ ಲೂಟಿಯಾಗುತ್ತಿದೆ. ಬನ್ನಿ ಹೋಗಿ ನೋಡೋಣವೆಂದು ಅರಣ್ಯ ಸಚಿವರಿಗೆ ಬೇಡಿಕೊಂಡೆ, ಮುಖ್ಯಮಂತ್ರಿಗಳನ್ನು ಬೇಡಿಕೊಂಡೆ, ನಮ್ಮ ಜಿಲ್ಲಾ ಮಂತ್ರಿಗಳನ್ನೂ ಬೇಡಿಕೊಂಡೆ, ಇಲ್ಲೂ ಪ್ರಸ್ತಾಪ ಮಾಡಿದೆ. ಆದರೆ ಯಾರೂ ಬರಲಿಲ್ಲ. ಆ ಅಧಿಕಾರಿ ಲಕ್ಷಾಂತರ ರೂಪಾಯಿ ನಾಟಾ ಹಿಡಿದ ಎಂದೆಲ್ಲ ಹೇಳಿದರು. ಕಳೆದ ೮-೧೦ ವರ್ಷಗಳಲ್ಲಿ ನಿಮ್ಮ ಸರ್ಕಾರ, ಅರಣ್ಯವನ್ನು ಲೂಟಿ ಮಾಡಿದೆ, ಯಡಿಯೂರಪ್ಪ ಕಳೆದ ೮-೧೦ ವರ್ಷಗಳಲ್ಲಿ ನಾಟಾ ಹಿಡಿಯುವುದಕ್ಕೆ ಶ್ರೀಗಂಧದ ಕಳ್ಳಸಾಗಾಣಿಕೆಯನ್ನು ಹಿಡಿಯುವುದಕ್ಕೆ, ಅಡ್ಡಿ ಮಾಡಿದ ಅಥವಾ ಅವರನ್ನು ಬಿಡಿಸಿಕೊಂಡು ಹೋಗಲು ಶಿಫಾರಸ್ ಮಾಡಿದಂತಹ ಒಂದು ಪ್ರಸಂಗವನ್ನು ಈ ಸಭೆಯಲ್ಲಿ ಇಟ್ಟರೆ, ನಾನು ಒಂದು ನಿಮಿಷವೂ ಇಲ್ಲಿ ಇರುವುದಿಲ್ಲ. ಅಲ್ಲಿ ಬೆತ್ತಲೆ ಮೆರವಣಿಗೆಯಾಯಿತು. ಅಧಿಕಾರಿಗಳನ್ನು ಡಿಸ್‌ಮಿಸ್ ಮಾಡಿ ಮನೆಗೆ ಕಳುಹಿಸಬೇಕೆಂಬ ಇಚ್ಛೆ ನನಗೆ ಇರಲಿಲ್ಲ. ಆದರೆ ಈಬಗ್ಗೆ ನಾನು ಹೇಳುವುದನ್ನು ಸೌಜನ್ಯದಿಂದ ಮುಖ್ಯ ಮಂತ್ರಿಗಳು ಕೇಳಬೇಕಾಗಿತ್ತು. ನನ್ನ ಬಗ್ಗೆ ಅವರು ಸೌಜನ್ಯವನ್ನು ತೋರಿಸಬೇಕಾಯಿತು. ಆದರೆ ನನ್ನನ್ನು ಇಲ್ಲಿ ಗುಲಾಮನಂತೆ ನಡೆಸಿಕೊಂಡರು. ಸದನದಿಂದ ಹೊರಗೆ ಹಾಕುವಂತಹ ಧೈರ್ಯವನ್ನು ನಿಮ್ಮ ಮುಖ್ಯಮಂತ್ರಿಗಳು ಮಾಡಿದರು. ಈ ರಾಜ್ಯದಲ್ಲಿ ವಿರೋಧ ಪಕ್ಷಗಳ ಸರ್ಕಾರ ಅಧಿಕಾರಕ್ಕೆ ಬರಬೇಕು, ಕಾಂಗ್ರೆಸ್ (ಐ) ಯೇತರು ಸರ್ಕಾರ ಇಲ್ಲಿ ಅಸ್ತಿತ್ವಕ್ಕೆ ಬರಬೇಕು. ಅವರು ಒಂದು ಒಳ್ಳೆಯ ಕೆಲಸವನ್ನು ಮಾಡಬೇಕೆಂಬ ನಂಬಿಕೆಯಿಂದ ನಾವು ಇವರಿಗೆ ಬೇಷರತ್ತು ಬೆಂಬಲಕೊಟ್ಟೆವು. ಅದಕ್ಕಾಗಿ ಇವರು ನಮ್ಮ ಮೇಲೆ ಸೇಡು ತೀರಿಸಿ ಕೊಳ್ಳತಕ್ಕ ಕೆಲಸವನ್ನು ಮಾಡುತ್ತಿದ್ದಾರೆ. ಈ ರಾಜ್ಯದ ಜನ ಸತ್ತಿಲ್ಲ, ಒಂದು ವೇಳೆ ನಮ್ಮ ಕಡೆಯಿಂದ ತಪ್ಪಾಗಿದೆಯೆಂದರೆ ಈ ರಾಜ್ಯದ ಜನತೆಯ ಕ್ಷಮಾಪಣೆ ಕೇಳುತ್ತೇವೆ, ಏನೋ ಒಳ್ಳೆಯ ಕೆಲಸ ಮಾಡುತ್ತಾರೆಂದು ಬೇಷರತ್ತು ಬೆಂಬಲವನ್ನು ಇವರಿಗೆ ಕೊಟ್ಟೆವು. ಇವರು ಅಧಿಕಾರಕ್ಕೆ ಬಂದು ನಮಗೆ ದ್ರೋಹ ಮಾಡುವಂತಹ ಕೆಲಸವನ್ನು ಐದಾರು ವರ್ಷಗಳಿಂದ ಮಾಡುತ್ತಿದ್ದಾರೆ. ನಮ್ಮ ಅಪೇಕ್ಷೆ ರೀತಿಯಲ್ಲಿ ಇವರು ಕೆಲಸ ಮಾಡಲಿಲ್ಲ. ಈಗ ಮಂತ್ರಿಮಂಡಲವನ್ನು ವಿಸ್ತರಣೆ ಮಾಡುವುದು ಮತ್ತೆ, ಶಾಸಕರುಗಳನ್ನು ಅಡ್ಜಸ್ಟ್ ಮಾಡಿಕೊಳ್ಳಲು ಇನ್ನೂ ಒಂದು ಸಲ ಮಂತ್ರಿಮಂಡಲ ವಿಸ್ತರಣೆ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಇವರು ಮಾಡುತ್ತಿರುವುದೆಲ್ಲ ಈ ರಾಜ್ಯದ ಜನತೆಗೆ ಗೊತ್ತಾಗಿದೆ. ಅಧಿಕಾರವನ್ನು ಉಳಿಸಿಕೊಳ್ಳಲು ಇವರು ಈ ರೀತಿ ಮಾಡುತ್ತಿದ್ದಾರೆ. ಇನ್ನು ಭ್ರಷ್ಟಾಚಾರದ ಬಗ್ಗೆ ವೈಯಕ್ತಿಕವಾಗಿ ಯಾರ ಬಗ್ಗೆಯೂ ನಾನು ಮಾತನಾಡುವುದಿಲ್ಲ. ಈಗ ಡಾ|| ಜೀವರಾಜ್ ಆಳ್ವ ಅವರು ಈ ಸದನದಲ್ಲಿ ಇಲ್ಲ. ಅವರು ನನಗೆ ಸಾಕಷ್ಟು ನೀರು ಕುಡಿಸಿದ್ದಾರೆ. ಇನ್ನೂ ಕುಡಿಸುತ್ತಿದ್ದಾರೆ. ಜನವರಿ ೨೩ನೇ ತಾರೀಖು ಪ್ರಜಾವಾಣಿ ಪತ್ರಿಕೆಯಲ್ಲಿ ಒಂದು ವಿಷಯ ಬಂದಿದೆ. ಅದು ಈ ರೀತಿ ಇದೆ. "ಆಡಳಿತ ಸ್ಥಗಿತ - ಜಾತಿವಾದಿ ದೇವೇಗೌಡರೇ ಕಾರಣ" ನಾನು ಇದರ ವಿವರಗಳಿಗೆ ಹೋಗುವುದಿಲ್ಲ. ನನಗೆ ಸಂಬಂಧಪಟ್ಟ ಒಂದು ಮಾತನ್ನು ಹೇಳುತ್ತೇನೆ. "೬ ವರ್ಷಗಳ ಜನತಾ ಪಕ್ಷದ ಅಧಿಕಾರಾವಧಿಯಲ್ಲಿ ಗೌಡರ ನೇತೃತ್ವದಲ್ಲಿ ಲೋಕೋಪಯೋಗಿ ಇಲಾಖೆಗೆ ಒಂದು ಸಾವಿರ ಕೋಟಿ ರೂಪಾಯಿಯನ್ನು ಖರ್ಚು ಮಾಡಿದ್ದೇವೆ. ಆದರೆ ಈ ಇಲಾಖೆ ಯಿಂದ ಪಕ್ಷಕ್ಕೆ ಒಂದೇ ಒಂದು ರೂಪಾಯಿ ದೇಣಿ ಬಂದಿಲ್ಲ" ಡಾ|| ಜೀವರಾಜ ಆಳ್ವರವರುಈ ರೀತಿ ಪತ್ರಿಕೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈ ಸ್ಟೇಟ್‌ಮೆಂಟ್ ಸರಿಯೋ ತಪ್ಪೋ ಎಂಬುದನ್ನು ನಾನು ತಿಳಿದುಕೊಳ್ಳಬೇಕಾಗಿದೆ. ಇದನ್ನು ಇದುವರೆಗೆ ಯಾರೂ ಸಹ ಡಿನೈ ಮಾಡಿಲ್ಲ. ಶ್ರೀ ಲಕ್ಷ್ಮಿಸಾಗರ್ ರವರಿಗೆ ನಾನು ಕೇಳುತ್ತೇನೆ, ಮುಖ್ಯಮಂತ್ರಿಯವರಿಗೆ ನಾನುಕೇಳುತ್ತೇನೆ, ಅದೇನೆಂದರೆ ಮಂತ್ರಿ ಗಳಾಗಿರತಕ್ಕವರು, ಅವರುಗಳು ಇಲಾಖೆಗಳಲ್ಲಿ ಖರ್ಚು ಮಾಡಿದಂತಹ ಹಣದಲ್ಲಿ ಎಷ್ಟು ಪರ್ಸೆಂಟ್ ಹಣವನ್ನು ಪಾರ್ಟಿಗೆ ಕೊಟ್ಟಿದ್ದಾರೆಂದು, I want to know that. ಶ್ರೀ ರಾಮಕೃಷ್ಣ ಹೆಗಡೆ ಯವರು ಮುಖ್ಯ ಮಂತ್ರಿಗಳಾಗಿದ್ದ ಕಾಲದಲ್ಲಿ ಆಯಾ ಮಂತ್ರಿಗಳು ಅವರ ಪಾರ್ಟಿಗೆ ಎಷ್ಟು ಕೊಟ್ಟಿದ್ದಾರೆಂಬುದು ಹೇಳಬೇಕು. ಹಾಗೆಯೇ ಈಗ ಬೊಮ್ಮಾಯಿಯವರು ಬಂದಮೇಲೆ ಆ ಪರ್ಸೆಂಟೇಜು ಕಡಿಮೆಯಾಗಿದೆಯೇ ಜಾಸ್ತಿ ಆಗಿದೆಯೋ ಎಂಬುದನ್ನು ಹೇಳಬೇಕು. ನನಗೆ ಆ ಅಂಕಿ ಅಂಶಗಳು ಬೇಕು. ಆ ಸ್ಟೇಟ್‌ಮೆಂಟ್ ತಪ್ಪಾಗಿದ್ದರೆ ಅದನ್ನು ಡಿನೈ ಮಾಡಬೇಕಾಗಿತ್ತು.

ಆದರೆ ಆ ರೀತಿ ಮಾಡಿಲ್ಲ. ಜವಾಬ್ದಾರಿ ಸ್ಥಾನದಲ್ಲಿರತಕ್ಕ ಡಾ॥ ಜೀವರಾಜ್ ಆಳ್ವ ಅವರು ಈ ರೀತಿ ಹೇಳಿದ್ದಾರೆ. ಅವರು ಐದಾರು ವರ್ಷಗಳಕಾಲ ಮಂತ್ರಿಯಾಗಿ ಕೆಲಸ ಮಾಡಿದವರು. ಅವರು ಎಷ್ಟು ಪರ್ಸೆಂಟೇಜ್ ಪಕ್ಷಕ್ಕೆ ಕೊಟ್ಟಿದ್ದಾರೆಂಬುದು ಹೇಳಬೇಕು. ಆ ದುಡ್ಡು ರಾಜ್ಯದ ಜನತೆಗೆ ಬರಬೇಕಾಗಿತ್ತು. ಅದನ್ನು ಪಾರ್ಟಿಫಂಡ್‌ಗೆ ತೆಗೆದುಕೊಂಡಿದ್ದರೆ ಅದು ಸರಿಯೇ ? ಜನತಾ ಪಾರ್ಟಿಗೆ ಕಮ್ಯೂನಿಸ್ಟ್ ಬಿ. ಜೆ. ಪಿ. ಹಾಗೂ ಕಾಂಗ್ರೆಸ್ಸಿಗೆ ಹಣ ಕೊಡಲು ಏನಾದರೂ ಇಟ್ಟುಕೊಂಡಿದ್ದೀರಾ ? ಯಾವ ಬ್ಯಾಂಕಿನಲ್ಲಿ ಇಟ್ಟಿದ್ದೀರಿ ? ಅದರ ಬಗ್ಗೆ ರಾಜ್ಯದ ಜನತೆ ತಿಳಿದುಕೊಳ್ಳಲು ಅಪೇಕ್ಷೆ ಪಟ್ಟಿದ್ದಾರೆ. ಆದ್ದರಿಂದ ಅದರ ವಿವರಗಳನ್ನು ಕೊಡಿ ಆ ಹಣವನ್ನು ಕೊಟ್ಟರೆ ನಾನು ತೆಗೆದುಕೊಳ್ಳುತ್ತೇನೆ, ಮುಂದೆ ಬರುವಂತಹ ಚುನಾವಣೆ ದುಡ್ಡಿನ ಮೇಲೆ ನಡೆಯುತ್ತದೆ. ಪೋಸ್ಟರ್‌ಗಳಿಗೆ ಬ್ಯಾನರ್‌ಗಳಿಗಾದರೂ ದುಡ್ಡು ಬೇಕಾಗುತ್ತದೆ, ಆದ್ದರಿಂದ ದುಡ್ಡು ಕೊಟ್ಟರೆ ಖಂಡಿತಾ ತೆಗೆದುಕೊಳ್ಳುತ್ತೇನೆ. ಅದರಲ್ಲಿ ತಪ್ಪೇನಿದೆ ? ಜನತೆ ಕೊಟ್ಟ ತೆರಿಗೆ ಹಣ ಕೊಡಲಿ ಬಿಡಿ, ತಪ್ಪೇನು ?

ಶ್ರೀ ಕೆ. ಹೆಚ್. ಪಾಟೀಲ್.—ಅವರು ಕೊಟ್ಟರೆ ಅವರು ನೀವು ಹಂಚಿಕೊಳ್ಳುತ್ತೀರಾ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಮರೆತಿದ್ದೆ, ನಮ್ಮ ಕಾಂಗ್ರೆಸ್ ಮಿತ್ರರಿಗೆ ಹಣದ ಅಗತ್ಯವಿಲ್ಲ. ದಯವಿಟ್ಟು ಕ್ಷಮಿಸಿ. ಸಿ ಅಂಡ್ ಡಿ ಲ್ಯಾಂಡನ್ನು ವರ್ಗಾವಣೆ ಮಾಡುತ್ತಿರುವುದರ ಬಗ್ಗೆ ಹೇಳುತ್ತೇನೆ. ಇದರ ಬಗ್ಗೆ ತಮಗೆ ಎಷ್ಟು ಜವಾಬ್ದಾರಿ ಇದೆ, ಎಷ್ಟು ಕಳಕಳಿ ಇದೆ. ನನಗೂ ಅಷ್ಟೇ ಜವಾಬ್ದಾರಿ ಮತ್ತು ಕಳಕಳಿ ಇದೆ. ಎಲ್ಲರನ್ನೂ ಸೇರಿಸಿ ಮಾತನಾಡುವುದಕ್ಕೆ ನಾನು ಇಚ್ಛೆಪಡುತ್ತೇನೆ. ವನ ನಿರ್ಮಾಣ ಮಾಡದೆ, ಎಂ ಪಿ ಎಂ ಗೆ ಕೆ ಪಿ ಎಂಗೆ ವರ್ಗಾವಣೆ ಮಾಡತಕ್ಕ ಪ್ರಯತ್ನವನ್ನು ಇಲಾಖೆಯವರು ಮಾಡುತ್ತಿದ್ದಾರೆ. ಅದಕ್ಕೋಸ್ಕರ ಒಂದು ಪ್ರಶ್ನೆಯನ್ನು ತಮ್ಮ ಮುಂದಿಡುತ್ತೇನೆ. ಸಿ ಅಂಡ್ ಡಿ ಲ್ಯಾಂಡನ್ನು ಇದುವರೆಗೆ ಎಷ್ಟು ವರ್ಗಾವಣೆ ಮಾಡಿದ್ದೀರಿ ? ವರ್ಗಾವಣೆ ಮಾಡಿದುವುದರಲ್ಲಿ ಅರಣ್ಯ ಇಲಾಖೆ ಎಷ್ಟು ವನ ನಿರ್ಮಾಣ ಮಾಡಿದೆ ? ಎಂ ಪಿ ಎಂ ಗೆ ಮತ್ತು ಕೆ ಪಿ ಎಂ ಗೆ ಖಾಲಿಯಿರತಕ್ಕ ಜಮೀನನ್ನು ಎಷ್ಟು ಕೊಟ್ಟಿದ್ದೀರಿ ? ಇದನ್ನು ನಾನು ಪ್ರಸ್ತಾಪ ಮಾಡಲಿಲ್ಲ, ಮಾನ್ಯ ಮುಖ್ಯಮಂತ್ರಿಗಳು ವಾಪಸ್ಸು ತೆಗೆದುಕೊಳ್ಳುವ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಅವರು ಹೇಳಿರುವ ಮಾತು "ಸಿ ಅಂಡ್ ಡಿ" ವರ್ಗದ ರೆವಿನ್ಯೂ ಜಮೀನುಗಳನ್ನು ಸಾಮಾಜಿಕ ವನ ನಿರ್ಮಾಣದ ಅಭಿವೃದ್ಧಿಗಾಗಿ ಅರಣ್ಯ ಇಲಾಖೆಗೆ ನಾವು ವರ್ಗಾಯಿಸಿದ್ದೇವೆ. ಇವುಗಳ ಪೈಕಿ ಕೆಲವು ಜಮೀನುಗಳನ್ನು ಇದುವರೆಗೂ ಅಭಿವೃದ್ಧಿಪಡಿಸಲಾಗಿಲ್ಲ. ಅವುಗಳನ್ನು ಹಿಂದಕ್ಕೆ ಪಡೆಯಲು ಮತ್ತು ಭೂ ಅನುದಾನ ನಿಯಮಗಳ ಮೇರೆಗೆ ಅವುಗಳನ್ನು ನೀಡಲು ಉದ್ದೇಶಿಸಿದ್ದೇನೆ. ಇದರಿಂದಾಗಿ ವನ ನಿರ್ಮಾಣ ಕಾರ್ಯವನ್ನು ಶೀಘ್ರಗೊಳಿಸುವುದಕ್ಕಾಗಿ ವ್ಯಕ್ತಿಗಳು ಅರಣ್ಯ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಹುದು ಎಂದು ಹೇಳಿದ್ದೀರಿ, ಅದಕ್ಕೆ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ ೮ ಲಕ್ಷ ಎಕರೆ ಜಮೀನಿನಲ್ಲಿ ಆರೂವರೆ ಏಳು ಲಕ್ಷ ಎಕರೆ ಜಮೀನು ಖಾಲಿಯಿದೆ. ಅದನ್ನು ಬೇರೆಯವರಿಗೆ ವರ್ಗಾವಣೆ ಮಾಡತಕ್ಕ ಪ್ರಯತ್ನ ಮಾಡುತ್ತಿದ್ದಾರೆ. ಮಾನ್ಯ ಲಕ್ಷ್ಮೀಸಾಗರ್‌ರವರು ಒಂದು ಹೇಳಿಕೆ ಕೊಟ್ಟಿದ್ದಾರೆ. ಇವರು ಏನು ಹೇಳಿದ್ದಾರೆಂದರೆ, ಇದೇ ವಿಷಯಕ್ಕೆ ಸಂಬಂಧಪಟ್ಟ ಹಾಗೆ "ಯಾವ ಸಿ ಮತ್ತು ಡಿ ಲ್ಯಾಂಡ್ ವರ್ಗಾವಣೆ ಇದೆ, ಅರಣ್ಯ ಸಂರಕ್ಷಣೆ ಕಾಯಿದೆಯಡಿಯಲ್ಲಿ ಘೋಷಣೆ ಮಾಡಿದ್ದೇವೆ, ಅಂತಹ ಜಮೀನನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ" ಎಂದು ಹೇಳಿದ್ದಾರೆ. ಏತಕ್ಕೆ ಸ್ವಾಮಿ? ಈಗಾಗಲೇ ಅರಣ್ಯ ಇಲಾಖೆಯ ಭೂಮಿಯಲ್ಲಿ ಬಗರು ಹುಕುಂ ಸಾಗುವಳಿ ಯಾರು ಮಾಡಿದ್ದಾರೆ. ಎಲ್ಲಿ ಊರುಗಳಿವೆ, ಕೆರೆಕಟ್ಟೆಗಳಿವೆ. ಅಂತಹ ಕಡೆ ಅರಣ್ಯ ಸಂರಕ್ಷಣೆ ಕಾಯಿದೆ ಅಡಿಯಲ್ಲಿ ಘೋಷಣೆ ಮಾಡುವುದಕ್ಕೆ ಏತಕ್ಕೆ ಬರುವುದಿಲ್ಲ? ಮೊದಲು ಏತಕ್ಕೆ ಅವಕಾಶ ಕೊಟ್ಟಿದ್ದೀರಿ? ಮೊದಲು ಯಾವುದೇ ಘೋಷಣೆ ಮಾಡದೆ, ಸಿ ಮತ್ತು ಡಿ ಲ್ಯಾಂಡ್ ಅನ್ನು ವಾಪಸ್ಸು ತೆಗೆದುಕೊಳ್ಳುವುದನ್ನು ವಿರೋಧ ಮಾಡಬೇಕಾಗಿದೆ. ವನ ನಿರ್ಮಾಣ ಮಾಡಬೇಡಿಯೆಂದು ನಾನು ಹೇಳುತ್ತಿಲ್ಲ. ಯಾವ ಯಾವ ವರ್ಷ ಎಷ್ಟೆಷ್ಟು ಭೂಮಿಯನ್ನು ಕೇಳುತ್ತಾರೆ ಅಷ್ಟು ಭೂಮಿಯನ್ನು ಕೊಡುತ್ತಾ ಹೋಗಿ. ನೀವು ಏತಕ್ಕೆ ವರ್ಗಾವಣೆ ಮಾಡುತ್ತಿದ್ದೀರಿ ಇದಕ್ಕೆ ಕಾರಣವೇನು?

ಶ್ರೀ ಪಟಮಕ್ಕಿ ರತ್ನಾಕರ್. – ಮಾನ್ಯ ಯಡಿಯೂರಪ್ಪನವರು ಸಿ ಮತ್ತು ಡಿ ಲ್ಯಾಂಡ್ ಬಗ್ಗೆ ಹೇಳುತ್ತಿದ್ದಾರೆ. ಮಾನ್ಯ ಕೃಷಿ ಮಂತ್ರಿಗಳು ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ ಸಿ ಮತ್ತು ಡಿ ಲ್ಯಾಂಡನ್ನು ಗುರುತಿಸುವುದರಲ್ಲಿ ತಪ್ಪಾಗಿದೆ ಅದನ್ನು ಮರುಪರಿಶೀಲನೆ ಮಾಡಿ ಸುಮಾರು ೧೨ ಲಕ್ಷ ಎಕರೆ ಭೂಮಿಯನ್ನು ರೈತರಿಗೆ ವಾಪಸ್ಸು ಕೊಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಅದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಒಪ್ಪಿಸುತ್ತೇವೆನ್ನುವ ಮಾತನ್ನು ಕೂಡ

ಹೇಳಿದ್ದಾರೆ. ಮಾನ್ಯ ಯಡಿಯೂರಪ್ಪನವರು ಎತ್ತಿರತಕ್ಕ ಪ್ರಶ್ನೆ ಇಡೀ ರಾಜ್ಯಕ್ಕೆ ಹಾಗೂ ಎಲ್ಲಾ ಶಾಸಕರಿಗೂ ಸಂಬಂಧಪಟ್ಟ ವಿಚಾರವಾಗಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಲಕ್ಷ್ಮೀಸಾಗರ್‌ರವರೇ, ನಿಮ್ಮ ಬಗ್ಗೆ ನನಗೆ ಗೌರವವಿದೆ. ಸಹಜವಾಗಿ ಮಂತ್ರಿ ಕೆಲಸ ಮಾಡಬೇಕಾದರೆ ಕೆಲವು ಕಟ್ಟುನಿಟ್ಟುಗಳು ಇರುತ್ತವೆ. ಆ ಕಟ್ಟುನಿಟ್ಟುಗಳನ್ನು ಮುರಿದು ಬರಬೇಕೆಂದರೆ, ತಮ್ಮ ತಲೆಯ ಮೇಲಿನ ಸಂಕೋಲೆಯನ್ನು ಬಿಡಿಸಿಕೊಂಡು ಬರಬೇಕು. ಈ ಬಗ್ಗೆ ನಿಮ್ಮ ಮನಸ್ಸಿಗೂ ಬಹಳ ಬೇಜಾರಾಗಿದೆ. ಏನು ಮಾಡುವುದಕ್ಕಾಗುತ್ತದೆ, ನಿಮ್ಮ ಕಂಪನಿ ಹಾಗೆ ಇದೆ. ಸ್ವಲ್ಪ ಸ್ವಲ್ಪ ನಿಮಗೂ ಸರಿಬರುತ್ತಿಲ್ಲ ಅನಿಸುತ್ತಿದೆ. ನೀವು ಒಬ್ಬರಾದರೂ ಅಲ್ಲಿದ್ದರೆ ರಿಪೇರಿ ಮಾಡಬಹುದು. ರಿಪೇರಿ ಮಾಡುವುದಕ್ಕೆ ನೀವು ಅಲ್ಲಿರಬೇಕು. ಧೈರ್ಯವಿರುವವರೆಲ್ಲಾ ಇಲ್ಲಿ ಕುಳಿತುಕೊಂಡಿದ್ದಾರೆ. ಅಲ್ಲಿರುವವರಿಗೆ ಧೈರ್ಯವಿಲ್ಲ. ನಿಮಗೆ ಬೆಂಬಲ ಕೊಟ್ಟಿದ್ದರ ಪಾಪದ ಫಲ ಇದು. ಜನತೆ ನಮ್ಮನ್ನು ಕೇಳುತ್ತಾರೆ. ಈಗಲಾದರೂ ಸಿ ಮತ್ತು ಡಿ ಲ್ಯಾಂಡ್ ಏನು ದುರುಪಯೋಗವಾಗುತ್ತಿದೆ, ಆ ಬಗ್ಗೆ ಒಂದು ವೈಟ್ ಪೇಪರ್ ಹೊರಡಿಸಿ. ಸತ್ಯಾಸತ್ಯತೆಯನ್ನು ರಾಜ್ಯದ ಜನತೆಗೆ ತಿಳಿಸಿ. ಬಗರ್ ಹುಕುಂ ಸಾಗುವಳಿಯನ್ನು ಖಾಯಂ ಮಾಡುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಅನೇಕ ಸಾರಿ ಹೇಳಿದ್ದಾರೆ. ಇವತ್ತು ತಹಶೀಲ್ದಾರ್‌ರವರು ಹಣಕ್ಕೋಸ್ಕರ ಬಡವರಿಗೆ ಟಿ.ಟಿ. ಹಾಕಿ ಅವರ ರಕ್ತ ಹೀರುತ್ತಿದ್ದಾರೆ. ಬಗರ್ ಹುಕುಂ ಸಾಗುವಳಿ ಮಾಡಿದವರಿಗೆ ಫೈನ್ ಹಾಕಿ ದಂಡ ವಸೂಲಿ ಮಾಡುತ್ತಿದ್ದಾರೆ. ಇಲ್ಲದವರಿಗೆ ಭೂಮಿಯನ್ನು ಏತಕ್ಕೆ ಖಾಯಂ ಮಾಡುತ್ತಿಲ್ಲ? ೧೫-೨೦ ವರ್ಷಗಳಿಂದ ಬಗರ್‌ಹುಕುಂ ಸಾಗುವಳಿ ಮಾಡಿಕೊಂಡು ಬಂದಿದ್ದಾರೆ. ಅನೇಕ ತೀರ್ಮಾನಗಳನ್ನು ತೆಗೆದುಕೊಳ್ಳುತ್ತೀರಿ, ಹೊರದೇಶಗಳಲ್ಲಿರುವಂತಹ ಐಎಎಸ್, ಐಪಿಎಸ್, ಡಾಕ್ಟರ್ಸ್ ಮತ್ತು ಇಂಜಿನಿಯರ್ಸ್‌ಗಳು ಇಂಡಸ್ಟ್ರೀಸ್ ಪ್ರಾರಂಭ ಮಾಡಲಿಕ್ಕೆ ಅವರು ಅವರ ಮಕ್ಕಳು ಮೊಮ್ಮಕ್ಕಳು ಎಲ್ಲರೂ ಮುಂದುವರಿಯುವಂತಹ ಮುಂದಾಲೋಚನೆಯನ್ನು ಇಟ್ಟುಕೊಂಡು ಅವರಿಗೆಲ್ಲಾ ಸೈಟುಗಳನ್ನು ಕೊಡುವಂತಹ ನಿಮ್ಮ ಸರ್ಕಾರ, ಎನ್‌ಆರ್‌ಐ ಹಗರಣದಲ್ಲಿ ಸಿಕ್ಕಿ ಬಿಡಿದಾಡತಕ್ಕ ನಿಮ್ಮ ಸರ್ಕಾರ, ನಿಮ್ಮ ಕುರ್ಚಿಯ ಮೇಲೆ ಕೂರಿಸಿ ಬಂಗಲೆ ಕಾರುಗಳಲ್ಲಿ ಓಡಾಡಲಿಕ್ಕೆ ಕಾರಣರಾದಂತಹ ಜನರ ಬಗರ್ ಹುಕುಂ ಸಾಗುವಳಿಯನ್ನು ಅಂತಹ ಭೂಮಿಯನ್ನು ಅವರಿಗೆ ಖಾಯಂ ಮಾಡುವುದಕ್ಕೆ ಏತಕ್ಕೆ ನಿಧಾನ ಮಾಡುತ್ತಿದ್ದೀರಿ? ಈ ಒಂದು ಕ್ಷಣದಿಂದಲೇ ಜಿಲ್ಲಾಧಿಕಾರಿಗಳವರಿಗೆ ಆದೇಶವನ್ನು ಕೊಡಿ. ಏನೆಂದರೆ, ಯಾವುದೇ ಕಾರಣಕ್ಕೆ ದಂಡವನ್ನು ವಸೂಲಿ ಮಾಡಬೇಡಿಯೆಂದು. ಏಕೆಂದರೆ ಒಂದು ಎಕರೆಗೆ ಅವನು ನೂರು ಸಾವಿರ ದಂಡ ಕೊಡಬೇಕಾಗುತ್ತದೆ. ನಾಳೆ ಜಮೀನು ಕನ್‌ಫರ್ಮ್ ಮಾಡಿದರೆ ಅದಕ್ಕೆ ಸಂಬಂಧ ಇಲ್ಲ. ಅಡ್ಜಸ್ಟ್ ಆಗುವುದಿಲ್ಲ. ಏಕೆ ಫೈನ್ ವಸೂಲು ಮಾಡುತ್ತೀರಿ? ಆತನದ್ದೇನು ತಪ್ಪು? ಅದಕ್ಕೋಸ್ಕರ ಜಮೀನನ್ನು ಕನ್‌ಫರ್ಮ್ ಮಾಡಿ. ಇನ್ನೂ ಬಗರ್ ಹುಕುಂ ಸಾಗುವಳಿಯನ್ನು ಅರಣ್ಯ ಇಲಾಖೆಯಲ್ಲೂ ಮಾಡಿದ್ದಾರೆ. ಸಿ ಅಂಡ್ ಡಿ ಲ್ಯಾಂಡ್‌ನಲ್ಲಿ ೮-೧೦ ಲಕ್ಷ ಎಕರೆ ಜಮೀನು ಅರಣ್ಯ ಇಲಾಖೆಗೆ ವರ್ಗಾವಣೆ ಮಾಡುವ ನಿಮ್ಮ ಸರ್ಕಾರ ಅಕಸ್ಮಾತ್ ೧-೨ ಲಕ್ಷ ಎಕರೆ ಜಮೀನಿನಲ್ಲಿ ಅರಣ್ಯ ಇಲಾಖೆಯಲ್ಲಿ ಬಗರ್ ಹುಕುಂ ಸಾಗುವಳಿ ಮಾಡಿದ್ದರೆ ನೀವು ಕೇಂದ್ರ ಸರ್ಕಾರಕ್ಕೆ ಬರೆದು ಇನ್ನೂ ೮ ಲಕ್ಷ ಎಕರೆ ಬಿಟ್ಟು ಕೊಡುತ್ತೇವೆ. ಆ ಎರಡು ಲಕ್ಷ ಎಕರೆ ವಾಪಸ್ಸು ಕೊಡಿ ಎಂದು ಕೇಳಿ. ಈ ರಾಜ್ಯದಲ್ಲಿ ಅರಣ್ಯ ನಾಶವಾಗುತ್ತಿದೆ. ಪ್ರತಿನಿತ್ಯ ಇದ್ದವರು ಹೋಗಿ ಕಾಡು ಕಡಿಯುವ ಪ್ರಯತ್ನ ಮಾಡುತ್ತಿದ್ದಾರೆ. ಬಡವರ ಹೆಸರಿನಲ್ಲಿ ದೊಡ್ಡವರು ಈ ಕೆಲಸ ಮಾಡುತ್ತಿದ್ದಾರೆ. ಇದು ಈ ರಾಜ್ಯದಲ್ಲಿ ಒಂದೇಸಾರಿ ನಿಲ್ಲಬೇಕು ಎಂದರೆ ಈ ರೀತಿ ಬಗರ್ ಹುಕುಂ ಸಾಗುವಳಿ ಮಾಡಿರುವುದು ಅರಣ್ಯ ಇಲಾಖೆಯಲ್ಲಿ ಇರಲಿ, ರೆವಿನ್ಯೂ ಇಲಾಖೆಯಲ್ಲಿ ಇರಲಿ, ಯಾರು ನಿಮ್ಮ ಪ್ರಕಾರ ಕಡು ಬಡವರು ಇದ್ದಾರೆ ಅಂತಹವರಿಗೆ ಖಾಯಂ ಮಾಡಿ. ಒಂದು ಸಾರಿ ನಿಮ್ಮ ಸರ್ಕಾರಕ್ಕೆ ಆ ಕೀರ್ತಿ ಬರಲಿ. ಯಾವ ಕಾರಣಕ್ಕೂ ಮುಂದೆ ಬರುವ ದಿವಸಗಳಲ್ಲಿ ಈ ಬಗರ್ ಹುಕುಂ ಸಾಗುವಳಿ ಹೆಸರಿನಲ್ಲಿ ಕಾಡಿನಲ್ಲಿ ಪ್ರವೇಶ ಮಾಡಿ ವನ್ಯ ಸಂಪತ್ತು ನಾಶವಾಗಬಾರದು ಎಂಬ ಅಪೇಕ್ಷೆ ನಿಮಗೆ ಇದ್ದರೆ ಇದಕ್ಕೆ ಒಂದು ಕೊನೆ ತೆರೆಯನ್ನು ಎಳೆಯಲು ಪ್ರಯತ್ನ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡುತ್ತೇನೆ. ಇನ್ನು ಬಡ ಗೇಣಿದಾರರ ಬಗ್ಗೆ. ಶ್ರೀ ಲಕ್ಷ್ಮೀಸಾಗರ್‌ರವರೇ ನಮ್ಮ ಬಗ್ಗೆ ಸಿಟ್ಟಿನಲ್ಲಿ, ಬೇಸರದಲ್ಲಿ ನಮ್ಮ ಜೊತೆ ಒಳ್ಳೆ ಮಾತನಾಡುತ್ತಿದ್ದವನು, ತಿರುಗಿಬಿದ್ದ ಎಂದು, ಅವನು ಹೇಳಿದ್ದು ಏನೂ ಮಾಡಬಾರದು ಎಂಬ ತೀರ್ಮಾನಕ್ಕೆ ಬಾರದೆ ದಯವಿಟ್ಟು ಮಾಡಿ. ಇದು ಲಕ್ಷಾಂತರ ಜನ ಬಡ ಗೇಣಿದಾರರಿಗೆ ಸಂಬಂಧಪಟ್ಟಿದ್ದು. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡಿಕೊಂಡಿದ್ದಕ್ಕೆ ಅವರು ಉತ್ತರ ಬರೆದಿದ್ದಾರೆ, ಅದರಲ್ಲಿ ೧೮-೨-೮೮ಕ್ಕೆ ಬರೆದ ಪತ್ರ ಬಂದು ಕೈಸೇರಿದೆ. ತಮ್ಮ ಪತ್ರದಲ್ಲಿ ಭೂಸುಧಾರಣೆ ಶಾಸನದನ್ವಯ ಮಾಜಿ ಗೇಣಿದಾರರು ಸರ್ಕಾರಕ್ಕೆ ಕೊಡಬೇಕಾದ ಪ್ರೀಮಿಯಂ ಹಣದ

ಬಾಕಿಗೆ ಸಂಬಂಧಿಸಿದಂತೆ ಮೂಲ ಕಾಯಿದೆಯಲ್ಲಿ ಕೆಲವು ಲೋಪದೋಷಗಳು ಇದ್ದು, ಗೇಣಿದಾರರ ಹಿತದೃಷ್ಟಿಯಿಂದ ಸೂಕ್ತ ತಿದ್ದುಪಡಿ ಮಾಡಬೇಕೆಂದು ತಾವು ಪ್ರಸ್ತಾಪಿಸಿದ್ದೀರಿ. ಈ ಬಗ್ಗೆ ಕೂಡಲೇ ಪರಿಶೀಲಿಸಿ ಮುಂದೆ ನಿಮಗೆ ಉತ್ತರಿಸುತ್ತೇನೆ ಎಂದು ಹೇಳಿದ್ದಾರೆ. ಈ ರಾಜ್ಯದಲ್ಲಿ ಏಳೂವರೆ ಲಕ್ಷ ಬಡ ಗೇಣಿದಾರರು ಇದ್ದಾರೆ, ಇದರಲ್ಲಿ ನಿಮ್ಮ ಪ್ರಕಾರ ಹತ್ತು ಎಕರೆ ಒಳಗಡೆ ಇರತಕ್ಕಂಥ ಬಡವರಿಗೆ ಯಾವುದೇ ರೀತಿಯ ಪ್ರೀಮಿಯಂ ಹಣ ಕಟ್ಟಬಾರದು ಎಂದು ತಾವು ಆದೇಶ ಹೊರಡಿಸಿರಿವಿರಿ. ಈ ಕಾಯದೆ ಏನು ಹೇಳುತ್ತದೆ ಎಂದರೆ ೧೭–೧೧–೮೪ರ ನಂತರ ಪಾವತಿಸಬೇಕಾದ ಪ್ರೀಮಿಯಂ ಕಂತುಗಳಿಗೆ ಮಾತ್ರ ಅನ್ವಯಿಸಲಿದ್ದು ಶೇಕಡಾ ೯೦ರಷ್ಟು ಪ್ರಕರಣಗಳು ೧೯೭೩ ರಿಂದ ೭೮ರ ಒಳಗೇನೆ ತೀರ್ಮಾನವಾಗಿದ್ದು, ೧೯೮೪ಕ್ಕೆ ೨೦ ಕಂತುಗಳು ಮುಗಿದುಹೋಗಿದ್ದು, ೧೯೮೪ರ ಕಂತುಗಳು ಕೇವಲ ಎರಡು ಅಥವಾ ಮೂರು ಮಾತ್ರ ಇದ್ದು ಈ ಪ್ರೀಮಿಯಂ ಅನ್ನು ಮನ್ನಾ ಮಾಡಿದ್ದರಿಂದ ಕಡುಬಡವನಿಗೆ ಅನುಕೂಲವಾಗುವುದಿಲ್ಲ. ಆದ್ದರಿಂದ ನಾನು ಸಲಹೆ ಕೊಡುವಂಥಾದು ಏನೆಂದರೆ ೭೩ರಿಂದ ಈಚೆಗೆ ಲ್ಯಾಂಡ್ ಟ್ರಿಬ್ಯೂನಲ್‌ನಿಂದ ಜಮೀನು ತೀರ್ಮಾನ ಮಾಡುವುದಕ್ಕೆ ಪ್ರಾರಂಭವಾಯಿತು : ೨೦ ಕಂತುಗಳು ೮೩ಕ್ಕೆ ಮುಗಿದುಹೋಗುತ್ತವೆ. ಎರಡು ಮೂರು ಎಕರೆ ಜಮೀನು ಇರುವ ಕಡುಬಡವನಿಗೆ ಒಂದು ಪೈಸೆ ಕೂಡ ಈ ಕಾನೂನಿನಿಂದ ನೆರವಾಗುವುದಿಲ್ಲ. ಆದ್ದರಿಂದ ನಾನು ಆಗ್ರಹ ಮಾಡುವಂಥಾದ್ದು ಏನೆಂದರೆ, ತಾವು ಕಾನೂನು ತಜ್ಞರಿದ್ದೀರಿ. ನನಗೆ ಗೊತ್ತು. ಆ ಸಮಯದಲ್ಲಿ ತಮಗೆ ಚುನಾವಣೆಯಲ್ಲಿ ಓಟು ಬೇಕಿತ್ತು, ತಾವು ಬಹಳ ಬುದ್ಧಿವಂತರು ಇದ್ದೀರಿ ಸ್ವಾಮಿ. ಬಡ ಗೇಣಿದಾರರಿಗೆ ದುಡ್ಡು ಕಟ್ಟಬೇಕಾಗಿಲ್ಲ, ಪ್ರೀಮಿಯಂ ಹಣ ಕಟ್ಟಬೇಕಾಗಿಲ್ಲ, ಪುಕ್ಕಟೆ ಜಮೀನು ಎಂದಿರಿ. ಅವನು ಆನಂದವಾಗಿ ಮಲಗಿಕೊಂಡ, ಓಟು ಕೊಟ್ಟು ನಿಮ್ಮನ್ನು ಇಲ್ಲಿ ಕುರ್ಚಿಯಲ್ಲಿ ಕುಳ್ಳಿರಿಸಿದ. ಮುಂದೆ ನೀವೇನು ಮಾಡಿದಿರಿ ? ನಿಮ್ಮಲ್ಲಿ ದುಡ್ಡಿಲ್ಲ. ಸರ್ಕಾರದ ನೌಕರರಿಗೆ ಸಂಬಳ ಕೊಡಲಾಗದ ಸ್ಥಿತಿಗೆ ಈ ಸರ್ಕಾರ ಬಂತು. ಆಗ ಯಾರಿಗೆ ಹಿಂದೆಮುಂದೆ ಇಲ್ಲ, ಕೇಳುವವರಿಲ್ಲ. ಕಡುಬಡವ ಸಾಯುತ್ತಿದ್ದರೆ ಅವರ ಮೇಲೆ ಪ್ರಹಾರ ಆರಂಭವಾಯಿತು. ಈ ವರ್ಷ ಮಾಡಿದಷ್ಟು ಕಂದಾಯ ವಸೂಲಿ ಹಿಂದೆದೂ ಆಗಿರಲಿಲ್ಲ. ಈ ಒಡ ಗೇಣಿದಾರರಿಂದ ಬಲವಂತದಿಂದ ಹಣ ವಸೂಲಿ ಮಾಡುವುದು ಪ್ರಾರಂಭವಾಗಿದೆ. ಅದಕ್ಕೆ ನಾನು ವಿನಂತಿ ಮಾಡುವುದು ಏನೆಂದರೆ, ಯಾವುದೇ ಗೇಣಿದಾರ ೧೦ ಎಕರೆಗಿಂತ ಕಡಿಮೆ ಜಮೀನು ಇದ್ದವರಿಗೆ, ೧೦ ಎಕರೆಗಿಂತ ಕಡಿಮೆ ತತ್ಸಮಾನವಾಗಿ ಯಾರಿಗಾದರೂ ಬಾಗಾಯ್ತು ಜಮೀನು ಇದ್ದರೆ ಅಂತವರ ಕಂತುಗಳನ್ನು ಪೂರ್ವಭಾವಿಯಾಗಿ ಅನ್ವಯಿಸುವಂತೆ ಮನ್ನಾ ಮಾಡುವಂಥ ಕಾನೂನನ್ನು ತೆಗೆದುಕೊಂಡು ತನ್ನಿ. ಈ ಕಾನೂನಿನಲ್ಲಿ ಬಡವನಿಗೆ ಅನುಕೂಲವಾಗಬೇಕು ಎನ್ನುವ ತಳಮಳ ನಿಮಗೆ ಇದ್ದರೆ ಇದನ್ನು ತೆಗೆದುಕೊಂಡುಬನ್ನಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೂರುವರೆ ಲಕ್ಷ ಗೇಣಿದಾರರು ಇದ್ದಾರೆ. ಒಂದು ಎಕರೆ, ಅರ್ಧ, ಕಾಲು ಎಕರೆ ಜಮೀನು ಇದ್ದವರಿಗೆ ಒಂದು ಕೂಡ ಇದರಿಂದ ಲಾಭ ಬರುವುದಿಲ್ಲ. ನಿಮ್ಮ ಉದ್ದೇಶ, ಕಡು ಬಡವ. ಗೇಣಿದಾರ ಹಣ ಕೊಡಬಾರದೆನ್ನುವ ಅಪೇಕ್ಷೆ ಇದ್ದರೆ ಇದನ್ನು ಮೊಡಲುಮಾಡಿ. ನಿಮಗೆ ಕಾನೂನು ಸಲಹೆಯನ್ನು ಕೊಟ್ಟವರನ್ನು ನಾನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ತಿಂಗಳಿಗೆ ನಾಲ್ಕೈದು ಸಾವಿರ ರೂಪಾಯಿ ಸಂಬಳ ತೆಗೆದುಕೊಂಡು, ಚುನಾವಣೆ ಸಮಯದಲ್ಲಿ ಆಶ್ವಾಸನೆ ಕೊಟ್ಟು, ಕಾನೂನು ಮಾಡಿ ಈಗ ನೀವು ಕೂಡ ಪರೋಕ್ಷವಾಗಿ ಶಾಮಿಲಾಗಿ ಬಡವರಿಂದ ಓಟು ಪಡೆಯುವುದಕ್ಕೆ ಕಾರಣಕರ್ತರಾದ ಕಾರಣ ಇವತ್ತು ಬಡವ ಬೀದಿ ಪಾಲಾಗಿದ್ದಾನೆ, ಅದಕ್ಕಾಗಿ ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಏನೆಂದರೆ, ಬಡ ಗೇಣಿದಾರ ಹತ್ತು ಎಕರೆಯ ಒಳಗಡೆ ನಿಮ್ಮ ಕಾನೂನು ಪ್ರಕಾರ ಇದ್ದರೆ ಅವನಿಂದ ಪ್ರೀಮಿಯಂ ಎಂದು ತೆಗೆದುಕೊಂಡಿದ್ದನ್ನು, ಬಡ್ಡಿ ಸಮೇತ ವಾಪಾಸ್ಸು ಕೊಟ್ಟು ಈ ಕಾನೂನಿನಲ್ಲಿರುವ ತಪ್ಪನ್ನು ಸರಿಪಡಿಸಬೇಕು. ಈ ರಾಜ್ಯದಲ್ಲಿರತಕ್ಕಂಥ ಯಾವುದೇ ಬಡ ಗೇಣಿದಾರ, ೧೦ ಎಕರೆಗಿಂತ ಕಡಿಮೆ ಇರುವ ಯಾರು ಗೇಣಿದಾರರು ಇದ್ದಾರೆ, ಅವರಿಗೆ ಅನ್ವಯವಾಗುವ ರೀತಿಯಲ್ಲಿ ಶಾಸನವನ್ನು ನೀವು ತರಬೇಕು. ಮಾನ್ಯ ಮುಖ್ಯಮಂತ್ರಿಗಳು ಸಹಿತ ಇದರ ಬಗ್ಗೆ ಕಳಕಳಿಯನ್ನು ಹೊಂದಿದ್ದಾರೆ. ಆ ಬಗ್ಗೆ ಅವರೇ ಕೆಲಸ ಮಾಡುತ್ತಾರೆ ಎಂದು ಹೇಳಿ ನಾನು ನಂಬಿದ್ದೇನೆ. ಆ ಕಡೆಗೆ ದಿಟ್ಟವಾದ ಹೆಜ್ಜೆಯನ್ನು ಇಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಬಹುಶಃ ಭ್ರಷ್ಟಾಚಾರ ಪ್ರಕರಣದ ಬಗ್ಗೆ ಒಂದೇ ಒಂದು ಮಾತು ಹೇಳುತ್ತೇನೆ. ನಮ್ಮ ಹೊನ್ನಾಳ್ಳಿ ಶಾಸಕರು ಇಲ್ಲಿ ಇದ್ದಾರೆ ಎಂದು ಭಾವಿಸಿದ್ದೇನೆ.

ಸ್ವಾಮಿ, ಅತ್ಯಂತ ವಿನಯದಿಂದ ಇಲ್ಲಿ ಕುಳಿತಿರತಕ್ಕಂಥ ಅಧಿಕಾರಿಗಳಲ್ಲಿ ಮತ್ತು ನಮ್ಮ ಶಾಸಕ ಮಿತ್ರರಲ್ಲಿ ಹಾಗೂ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಯಾವುದೇ ಅಧಿಕಾರಿಗಳ ಮೇಲೆಯೂ ನನಗೆ ಅಲರ್ಜಿ ಇಲ್ಲ: ಯಾರೇ ಅಧಿಕಾರ ನಡೆಸಿದರೂ ಸಹ ಯಾವುದೇ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದರೂ ಸಹ ಅಲ್ಪಾಮೇಟ್ ಆಗಿ, ಈ ಒಂದು ಕಾರ್ಯಕ್ರಮವನ್ನು ಬಡವರಿಗೆ ತಲುಪಿಸತಕ್ಕ

ಪ್ರಾಮಾಣಿಕ ಅಧಿಕಾರಿಗಳು ಇಲ್ಲದೇಹೋದರೆ, ಈ ರಾಜ್ಯ ಉಳಿಯುವುದಿಲ್ಲ, ಈ ದೇಶ ಉಳಿಯುವುದಿಲ್ಲ ಮಧ್ಯೆ ಮಧ್ಯೆ ಕೆಲವು ಭ್ರಷ್ಟರು ಹುಟ್ಟಿಕೊಳ್ಳುತ್ತಾರೆ. ಇದನ್ನು ಸರಿಪಡಿಸುವಂಥ ಪ್ರಯತ್ನ ಮಾಡ ಬೇಕು. ಉದಾಹರಣೆಗೆ ಹೊನ್ನಾಳಿ ತಾಲ್ಲೂಕಿನಲ್ಲಿ ಹಿಂದೆ ಸುಧಾಕರ ಎಂಬ ತಸಶೀಲ್ದಾರ್ ಇದ್ದರು. ಇಲ್ಲಿ ನೀವು ಆಶ್ಚರ್ಯಪಡಬಹುದು. ರಕ್ಷಣಾ ನಿಧಿಗಾಗಿ ಬಂಗಾರದ ಬಾಂಡುಗಳನ್ನು ಕೊಟ್ಟರು : ಚೈನಾ ಯುದ್ಧ ಸಮಯದಲ್ಲಿ ಅಂದರೆ ೧೯೬೪–೬೫ರಲ್ಲಿ ಮುಜರಾಯಿ ದೇವಸ್ಥಾನಗಳ ರಕ್ಷಣಾ ನಿಧಿಗಾಗಿ ಬಂಗಾರದ ಬಾಂಡುಗಳನ್ನು ತೆಗೆದುಕೊಂಡರು. ಆ ಬಾಂಡುಗಳ ಅವಧಿ ಮುಗಿದು ಈಗ ಹೋಯಿತು. ಈಗ ಬಂಗಾರ ವಾಪಸ್ ಕೊಡಬೇಕು. ಉದಾಹರಣೆಗೆ ಎರಡು ಮೂರು ಕೇಸ್‌ಗಳು ಇವೆ. ಶ್ರೀ ಹಳದಮ್ಮದೇವಿ ದೇವಸ್ಥಾನ ಮಾರಿಕೊಪ್ಪ ಹೊನ್ನಾಳಿ ತಾಲ್ಲೂಕು, ಇಲ್ಲಿ ೪೭ ಗ್ರಾಂ ತೂಕದ ಬಂಗಾರ ವನ್ನು ಕೊಟ್ಟಿದ್ದಾರೆಂದು ತೋರಿಸಿದ್ದಾರೆ. ಆದರೆ, ಅಕ್ಚುಯಲ್ ಆಗಿ ಕೊಟ್ಟಿರುವುದು ೧೪ ಗ್ರಾಮ್ ಉಳಿದದ್ದು ಏನಾಯಿತು? ಎಲ್ಲಿ ಮಾರಿದರು? ಹಾಗೆಯೇ ವೀರಭದ್ರೇಶ್ವರ ದೇವಸ್ಥಾನ, ಇದು ಕೂಡ ಹೊನ್ನಾಳಿ ತಾಲ್ಲೂಕಿನಲ್ಲಿಯೇ ಇವೆ. ಇಲ್ಲಿ ೨೩ ಗ್ರಾಂ ಎಂದು ಹೇಳಿದ್ದಾರೆ, ಆದರೆ ಅದು ೪೦ ಗ್ರಾಮ್ ಎಂದು ಇದೆ. ಪೂಜಾರಿಯವರಿಗೆ ದುಡ್ಡು ಬಂತು, ಅವನಿಗೆ ೨ ಸಾವಿರ ಕೊಟ್ಟು, ತಾಲ್ಲೂಕು ಆಫೀಸಿನ ಗುಮಾಸ್ತರನ್ನು ಹಿಡಿದುಕೊಂಡು, ೧೦ ಸಾವಿರ ರೂಪಾಯಿಗಳನ್ನು ವಾಪಸ್ ಡ್ರಾ ಮಾಡಿದ ನನ್ನ ಹತ್ತಿರ ಇದರ ಪಟ್ಟಿ ಕೂಡ ಇದೆ. ಈ ವಿಚಾರದಲ್ಲಿ ಮುಖ್ಯಮಂತ್ರಿಯವರಿಗೆ ಬರೆದಿದ್ದೇನೆ, ಎಲ್ಲರಿಗೂ ಬರೆದಿದ್ದೇನೆ. ಕಡೆಗೆ ಹೊನ್ನಾಳಿ ಶಾಸಕರು ಹೇಳಿದಮೇಲೆ ಸಸ್ಪೆಂಡ್ ಮಾಡಿದರು. ಅತ ಟ್ರಿಬ್ಯುನಲ್‌ಗೆ ಹೋಗಿ ಉಳಿದುಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಬಹುಶಃ ಈ ರಾಜ್ಯದಲ್ಲಿ ಒಬ್ಬ ತಹಶೀಲ್ದಾರ್, ಪೂಜಾರಿಗೆ ಬಂದಂಥ ದುಡ್ಡು, ದೇವಸ್ಥಾನದ ಹುಂಡಿಗೆ ಬಂದಂಥ ದುಡ್ಡನ್ನು ಇವರೇ ಸಹಿ ಮಾಡಿ, ಹೊಡೆದಿರತಕ್ಕ ಪ್ರಕರಣ ಏನಿದೆ, ಬಹುಶಃ ಇದು ಒಂದು ಸ್ಯಾಂಪಲ್ ಎಂದು ಇಟ್ಟುಕೊಳ್ಳಿ, ವಿವರಗಳನ್ನು ನಾನು ಕೊಡುತ್ತೇನೆ. ನಾನು ಒಬ್ಬ ಜವಾಬ್ದಾರಿ ಸ್ಥಾನದಲ್ಲಿ ಕುಳಿತು ಮಾತನಾಡುತ್ತಿದ್ದೇನೆ. ಕೊನೆಯ ಪಕ್ಷ ಈ ರೀತಿ ಮಾಡಬಾರದು ಎನ್ನತಕ್ಕ ಭಯ ಬರುವ ದೃಷ್ಟಿ ಯಿಂದಲಾದರೂ, ಇದರ ಬಗ್ಗೆ ಜುಡಿಷಿಯಲ್ ಎನ್‌ಕ್ವೈರಿ ಮಾಡಿಸಿ. ನಿಜವಾಗಿಯೂ ಪ್ರಾಮಾಣಿಕ ಅಧಿಕಾರಿಗಳ ಬಗ್ಗೆ ಕಳಕಳಿ ಇದ್ದು, ಭ್ರಷ್ಟಾಚಾರಕ್ಕೆ ಬೆಂಬಲ ಇಲ್ಲ ಎಂಬ ಉದ್ದೇಶ ನಿಮಗೆ ಇದ್ದರೆ, ಈ ದಿಕ್ಕಿನಲ್ಲಿ ವಿಶೇಷ ಗಮನ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ನಿಮ್ಮ ಜನಪರ ಕಾರ್ಯಕ್ರಮಗಳ ಬಗ್ಗೆ ತಾವೇ ಹಿಂದಿನ ವರ್ಷ ಹೇಳಿದಿರಿ. ತಾಳಿಭಾಗ್ಯ ಯೋಜನೆ ಬದಲು ಬೇರೆ ಕಾರ್ಯಕ್ರಮವನ್ನು ರೂಪಿಸುತ್ತೇವೆ ಎಂದು ಹೇಳಿದಿರಿ. ಏಕೆ ಸುಳ್ಳು ಹೇಳುತ್ತೀರಿ, ಏಕೆ ಸತ್ಯಕ್ಕೆ ದೂರವಾದ ಮಾತನ್ನು ಹೇಳುತ್ತೀರಿ ? ರಾಜ್ಯಪಾಲರ ಭಾಷಣದಲ್ಲಿ, ಬಜೆಟ್ ಭಾಷಣದಲ್ಲಿ ಹಿಂದೆ ನೀವು ತಾಳಿಭಾಗ್ಯ ಕಾರ್ಯಕ್ರಮ ಬೇಡ ಎಂದು ಹೇಳಿದಿರಿ, ಏಕೆ, ಮುಸ್ಲಿಂ ಹೆಣ್ಣು ಮಕ್ಕಳು ತಾಳಿ ಕಟ್ಟಿಕೊಳ್ಳುವುದಿಲ್ಲ, ಅವರ ಮನಸ್ಸಿಗೆ ನೋವಾಗುತ್ತದೆ ಎಂದು. ನಾನು ಅವತ್ತೇ ನಿಂತುಕೊಂಡು, ಮುಸ್ಲಿಂ ಹೆಣ್ಣು ಮಕ್ಕಳೂ ಕೂಡ ತಾಳಿ ಕಟ್ಟಿಕೊಳ್ಳುತ್ತಾರೆ. ಇದು ಬೇಡ ಎಂದರೆ, ತಾಳಿ ಬದಲು ಬೇರೆ ವಸ್ತ್ರ ಕೊಡಿ, ಪಾತ್ರೆಗಳನ್ನು ಕೊಡಿ, ಆದರೆ ಇದನ್ನು ಮಾತ್ರ ನಿಲ್ಲಿಸ ಬೇಡಿ ಎಂದು ಹೇಳಿದ್ದೆ. ಲಕ್ಷಾಂತರ ಮಂದಿ ಹಿಂದೂಗಳ ಅಪಮಾನ ಮಾಡಬೇಡಿ, ಅವರ ಸ್ವಾಭಿ ಮಾನಕ್ಕೆ ಧಕ್ಕೆ ತರಬೇಡಿ, ನಿಮ್ಮ ಕಾಲದಲ್ಲಿ ತಾಳಿ ಕಾರ್ಯಕ್ರಮ ತಂದು, ನಿಮ್ಮ ಕಾಲದಲ್ಲಿಯೇ ವಾಪಸ್ ತೆಗೆದುಕೊಳ್ಳತಕ್ಕ ಪ್ರಯತ್ನ ಮಾಡಬೇಡಿ ಎಂದು ಹೇಳಿದೆ. ಸನ್ಮಾನ್ಯ ಹೆಗಡೆಯವರ ಆ ಕಳಕಳಿ, ಆ ಭಾಷಣದ ವೈಖರಿ ಏನಿದೆ, ಅಂದರೆ ಸುಳ್ಳನ್ನು ಸತ್ಯ ಮಾಡುವುದು, ಸತ್ಯವನ್ನು ಸುಳ್ಳು ಮಾಡುವುದು. ಇಂತಹ ಮಾತಿನ ಚಕಮುಕಿಯನ್ನು ರಾಜಕಾರಣದಲ್ಲಿ ಮಾಡಬಾರದು. ಮಾನ್ಯ ಹೆಗಡೆಯವರು ಇರಬಹುದು ಯಡಿಯೂರಪ್ಪ ಇರಬಹುದು, ಯಾರೇ ಇರಲಿ. ಅಷ್ಟೊಂದು, ಒಳ್ಳೆಯ ರೀತಿಯ ಮಾತನಾಡಿದರು, ಎಲ್ಲರೂ ಇದಕ್ಕೆ ತಲೆಬಾಗಿದರು. ಸಮಾಜದಲ್ಲಿ ಬದುಕತಕ್ಕ ಪ್ರತಿಯೊಬ್ಬ ವ್ಯಕ್ತಿಗೂ ಸರ್ಕಾರದ ಸವಲತ್ತು ಸಿಗಬೇಕು ಎಂದು ತಾಳಿ ಭಾಗ್ಯ ಯೋಜನೆ ಬಿಟ್ಟು ಬೇರೆ ಕಾರ್ಯಕ್ರಮ ತರುತ್ತೇವೆಂದು ಹೇಳಿ ಇಲ್ಲಿಗೆ ಒಂದು ವರ್ಷವಾಯಿತು. ಎಲ್ಲಿ ಹೋಯಿತು ನಿಮ್ಮ ಈ ತಾಳಿಭಾಗ್ಯ ಕಾರ್ಯಕ್ರಮ. ದಯವಿಟ್ಟು ನಾನು ಹೆಸರು ಪ್ರಸ್ತಾಪ ಮಾಡಿದ್ದೇನೆ, ಕ್ಷಮಿಸಿ ಮಾಜಿ ಮುಖ್ಯಮಂತ್ರಿಗಳು ಎಂದು ತಿದ್ದಿಕೊಳ್ಳುತ್ತೇನೆ. ಇನ್ನು ಶಾಲಾ ಮಕ್ಕಳ ಬಗ್ಗೆ ಹೇಳಿದರು. ಇದೇ ಮಾಜಿ ಮುಖ್ಯಮಂತ್ರಿಗಳೇ ಹೇಳಿದರು. ಶ್ರೀಮಂತನ ಮಕ್ಕಳು, ಬಡವನ ಮಕ್ಕಳು ಶಾಲೆಗೆ ಬರುತ್ತಾರೆ, ಒಬ್ಬ ಒಳ್ಳೆಯ ಬಟ್ಟೆ ಹಾಕಿ ಕೊಂಡು ಬರುತ್ತಾನೆ, ಇನ್ನೊಬ್ಬ ಹರಕಲು ಬಟ್ಟೆ ಹಾಕಿ ಕೊಂಡು ಬರುತ್ತಾನೆ, ಮಕ್ಕಳಲ್ಲಿ ಪ್ರಾರಂಭದಲ್ಲೇ ಮೇಲುಕೀಳು ಎಂಬ ಭಾವನೆ ಬರಬಾರದು ಎಂದು ಹೇಳಿ ಸಮವಸ್ತ್ರ ಕೊಡುವ ಪದ್ಧತಿ ಜಾರಿಗೆ ತಂದರು. ನಾವೇನು ಬೇಡ ಎಂದು ಹೇಳಲಿಲ್ಲ, ಸ್ವಾಗತ ಮಾಡಿದೆವು. ವಿದ್ಯಾವಿಕಾಸ ಯೋಜನೆಯಲ್ಲಿ ಪ್ರಾಥಮಿಕ ಶಾಲಾ ಮಕ್ಕಳಿಗೆ ಉಚಿತ ಸಮವಸ್ತ್ರ

ಮತ್ತು ಪಠ್ಯಪುಸ್ತಕಗಳನ್ನು ಕೊಡುವ ವಿಷಯ. ಇಲಾಖೆಯಿಂದ, ದುಡ್ಡು ಬೇಕೆಂದು ಕಳುಹಿಸಿ ಕೊಟ್ಟರು. ೧೯೮೮–೮೯ನೇ ಸಾಲಿನಲ್ಲಿ ಎರಡು ಜೊತೆ ಬಟ್ಟೆ ಕೊಡಲಿಲ್ಲ. ನೀವೇ ತಂದಂಥ ಈ ಯೋಜನೆ, ಎರಡು ಜೊತೆಯಿಂದ, ಒಂದು ಜೊತೆಗೆ ಇಳಿಸಿದೆ. ತಾವು ದಯವಿಟ್ಟು ಇಲ್ಲಿ ಹೇಳ ಬೇಕು. ಮುಂದಿನ ವರ್ಷ ಇದನ್ನೂ ಮುಗಿಸುತ್ತೀರೋ ಏನೋ ಎಂದು, ನೀವು ಮೊದಲು ಎರಡು ಜೊತೆ ಎಂದು ಹೇಳಿ, ಏಕೆ ಒಂದು ಜೊತೆಗೆ ಇಳಿಸಿದಿರಿ. ಬಡ ಮಕ್ಕಳಿಗೆ ಏಕೆ ಮೋಸ ಮಾಡುತ್ತಿದ್ದೀರಿ. ಇದಕ್ಕೆ ಸರಿಯಾದ ಉತ್ತರ ಕೊಡಬೇಕು. ಇನ್ನು ಶಾಲಾ ಕಟ್ಟಡಗಳ ಬಗ್ಗೆ ತಾವು ಕಳಕಳಿಯಿಂದ ಹೇಳುತ್ತೀರಿ. ಬೆಂಗಳೂರಿನಲ್ಲಿ ಶೇಷಾದ್ರಿಪುರಂ ಎರಡನೇ ರಸ್ತೆಯಲ್ಲಿರುವ ಸರ್ಕಾರಿ ಮಾದರಿ ಬಾಲಕಿಯರ ಪ್ರಾಥಮಿಕ ಶಾಲಾ ಕಟ್ಟಡ ಎರಡು ವರ್ಷದಿಂದ ಕುಸಿದು ಬಿದ್ದಿದೆ. ಈ ಪರಿಸ್ಥಿತಿಯಲ್ಲಿ ಶಾಲೆ ಇದೆ. ಇದರ ಕಡೆಗೆ ಸರ್ಕಾರ ಗಮನಹರಿಸಿಲ್ಲವೆಂದೂ, ಇದು ಶೋಚನೀಯ ವಿಚಾರವೆಂದೂ, ಫೋಟೋ ಸಮೇತ ಪತ್ರಿಕೆಗಳಲ್ಲಿ ಬಂದಿದೆ. ಈಗ ಮರದ ಕೆಳಗಡೆ ಶಾಲೆ ನಡೆಸುತ್ತಿದ್ದಾರೆ, ಅದೂ ಬೆಂಗಳೂರು ಮಹಾನಗರದಲ್ಲಿ. ಎರಡು ವರ್ಷಗಳಿಂದ ಶಾಲೆ ಬಿದ್ದಿದೆ, ಪತ್ರಿಕೆಗಳಲ್ಲಿ ಫೋಟೋ ಕೂಡ ಬಂದಿದೆ. ದಯುಮಾಡಿ ಇದರ ಬಗ್ಗೆ ತಾವು ಪರಿಶೀಲನೆ ಮಾಡಿ. ಹೀಗೆ, ಇನ್ನೂ ಅನೇಕ ರೀತಿಯ ಸಮಸ್ಯೆಗಳು ಇವೆ, ಈ ರಾಜ್ಯದಲ್ಲಿ ದೊಡ್ಡ ಸಂಖ್ಯೆಯಲ್ಲಿ ನೇಕಾರರು ಇದ್ದಾರೆ. ನಾನು ಗುಲ್ಬರ್ಗಾ ಬಿಜಾಪುರದ ಕಡೆ ಪ್ರವಾಸ ಹೋದಾಗ ಕೆಲವು ಮನವಿಗಳು ನೇಕಾರರಿಂದ ನನಗೆ ಬಂದಿವೆ. ನಾನೇ ಹೋಗಿ ಪ್ರತ್ಯಕ್ಷವಾಗಿ ನೋಡುವ ಪ್ರಯತ್ನ ಮಾಡಿದೆ. ಅಲ್ಲಿ ಲಕ್ಷಾಂತರ ನೇಕಾರರ ಕುಟುಂಬ ಗಳು ಇರುವಂತಹ ಸಂದರ್ಭದಲ್ಲಿ, ನಿಮಗಂತೂ ಅವರಿಗೆ ಬೇರೆ ಉದ್ಯೋಗ ಕೊಡುವುದಕ್ಕೆ ಶಕ್ತಿ ಇಲ್ಲ. ಇವತ್ತಿನ ಹಣಕಾಸಿನ ಪರಿಸ್ಥಿತಿಯಲ್ಲಿ ಯಾವುದೇ ಸರಕಾರಕ್ಕೂ ಸಾಧ್ಯ ಇಲ್ಲ. ಐದು ವರ್ಷದ ಹಿಂದೆ ಸರಕಾರಿ ನೌಕರರಿಗೆ ೩೫ ಕೋಟಿ ರೂಪಾಯಿ ಸಂಬಳ ಕೊಡುತ್ತಿದ್ದುದು ಇವತ್ತು ೧೧೮–೧೧೦ ಕೋಟಿ ರೂಪಾಯಿಗಳಿಗೆ ಅದು ಹೋಗಿದೆ ಎಂದು ಮುಖ್ಯಮಂತ್ರಿಗಳೇ ಹೇಳುತ್ತಿದ್ದಾರೆ. ಇದಕ್ಕೆ ಬೇರೆ ಬೇರೆ ಬಾಬಿನ ಖರ್ಚೂ ಸೇರಿದರೆ ಇನ್ನೂ ೪೦ ಕೋಟಿ ರೂಪಾಯಿ ಹೆಚ್ಚು ಖರ್ಚಾಗುತ್ತದೆ. ಈ ರೀತಿ ಇದ್ದರೆ ಇವತ್ತು ಯಾವ ಡೆವಲಪ್‌ಮೆಂಟ್ ವರ್ಕ್ಸನ್ನೂ ಮಾಡುವುದಕ್ಕೆ ಸಾಧ್ಯ ಇಲ್ಲ ಆದುದ ರಿಂದ ಇರುವಂತಹ ಕಾರ್ಯಕ್ರಮಗಳನ್ನೇ ಯಶಸ್ವಿಯಾಗಿ ಮಾಡುವ ಪ್ರಯತ್ನ ಮಾಡಬೇಕು. ನೇಕಾರರ ವೃತ್ತಿಯನ್ನು ಯಾರು ಮಾಡುತ್ತಿದ್ದಾರೆ. ಅವರಿಗೆ ನೆರವನ್ನು ಕೊಡುವ ಪ್ರಯತ್ನ ಮಾಡ ಬೇಕು. ಕೆ. ಹೆಚ್. ಡಿ. ಸಿ. ಗೆ ಹೋಯಿತು ಎಂದರೆ ಅಲ್ಲಿ ದುಡ್ಡಿಲ್ಲ ಎಂದು ಹೇಳುತ್ತಾರೆ. ನೇಕಾರರು ತಮ್ಮ ಬೇಡಿಕೆಗಳ ಬಗ್ಗೆ ಧರಣಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಅವರ ಮುಖ್ಯವಾದ ಬೇಡಿಕೆಗಳೇನೂ ದೊಡ್ಡವಲ್ಲ. ತಮಗೆ ಕಾಲಕಾಲಕ್ಕೆ ಕಚ್ಚಾಮಾಲನ್ನು ಸರಿಯಾಗಿ ಪೂರೈಕೆ ಮಾಡ ಬೇಕು, ತಾವು ನೇಯ್ದಂಥ ಸೀರೆಗಳಿಗೆ ಸರಿಯಾದ ಮಜೂರಿ ಕೊಡಬೇಕು, ನೂಲು ಸಿಗಬೇಕು. ಇತರ ಅನುಕೂಲಗಳನ್ನು ಮಾಡಿಕೊಡಬೇಕು. ಇವೇ ಅವರ ಸಣ್ಣಪುಟ್ಟ ಬೇಡಿಕೆಗಳು. ಇದಕ್ಕಾಗಿ ಅವರು ಧರಣಿ ಸತ್ಯಾಗ್ರಹ ಮಾಡುತ್ತಿದ್ದಾರೆ. ಸರಕಾರ ಇದರ ಬಗ್ಗೆ ಗಮನ ಕೊಡುತ್ತಿಲ್ಲ. ಕೆ.ಹೆಚ್.ಡಿ.ಸಿ. ಯವರು ದುಡ್ಡಿಲ್ಲ ಎಂದು ಹೇಳುತ್ತಿದ್ದಾರೆ. ಅವರು ತಯಾರಿಸಿದ ಮಾಲನ್ನು ಕೊಂಡುಕೊಳ್ಳುವುದಕ್ಕೆ ದುಡ್ಡನ್ನು ಕೊಡುತ್ತಿಲ್ಲ. ಅದಕೋಸ್ಕರ ಸರಕಾರದವರು ದಯುಮಾಡಿ ಇವರ ಬಗ್ಗೆ ವಿಶೇಷವಾದ ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಎಸ್. ಸಿ. ಎಸ್. ಟಿ. ಜನರ ಬಗ್ಗೆ ಹೇಳುವುದಾದರೆ, ಈ ವಿಚಾರ ತಮಗೆ ಗೊತ್ತಿದೆ. ಸ್ಪೆಷಲ್ ಕಾಂಪೊನೆಂಟ್ ಪ್ರೋಗ್ರಾಂಗೆ ಕೇಂದ್ರ ಸರಕಾರ ಮೇ ತಿಂಗಳಲ್ಲಿ ಹಣ ಬಿಡುಗಡೆ ಮಾಡಿದೆ. ರಾಜ್ಯ ಸರ್ಕಾರ ಅದಕ್ಕೆ ಮ್ಯಾಚಿಂಗ್ ಗ್ರಾಂಟ್ ಕೊಡಬೇಕು, ಇದುವರೆಗೆ ಕೇಂದ್ರ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡಿದೆ, ತಾವು ಎಷ್ಟು ಮ್ಯಾಚಿಂಗ್ ಗ್ರಾಂಟು ಕೊಟ್ಟಿದ್ದೀರಿ ಎಂಬುದರ ಬಗ್ಗೆ ವಿವರಗಳನ್ನು ಕೊಡಬೇಕು. ಮಾನ್ಯ ಸ್ಪೀಕರ್‌ರವರು ನಮಗೆ ಕೊಟ್ಟಿರು ವಂತಹ ಅಂಕಿಅಂಶದ ಪ್ರಕಾರ, ಕಳೆದ ಡಿಸೆಂಬರ್‌ರವರೆಗೆ ನೀವು ಏನು ಖರ್ಚು ಮಾಡಬೇಕಾಗಿತ್ತು ಅದರಲ್ಲಿ ಕಾಲುಭಾಗವನ್ನು ಸಹ ಖರ್ಚು ಮಾಡಲಿಲ್ಲ. ಟ್ರೆಜರಿಗೆ ಬಂದಂಥ ಹಣವನ್ನು ಸರಕಾರಿ ನೌಕರರಿಗೆ ಸಂಬಳ ಕೊಡುವುದಕ್ಕೆ ಖರ್ಚು ಮಾಡಲಾಗಿದೆ. ಹರಿಜನ ಗಿರಿಜನರ ಉದ್ಧಾರಕ್ಕೋಸ್ಕರ ಅವರ ಏಳಿಗೆಗೋಸ್ಕರ ಕೇಂದ್ರ ಸರ್ಕಾರ ಕೊಟ್ಟಂಥ ಹಣವನ್ನು ಬೇರೆ ಬಾಬಿಗೆ ಖರ್ಚು ಮಾಡಿದಂಥ ನಿಮ್ಮ ಧೈರ್ಯವನ್ನು ಮೆಚ್ಚತಕ್ಕದ್ದೇ. ಇದುವರೆಗೆ ಕೇಂದ್ರದಿಂದ ಎಷ್ಟು ಬಂದಿದೆ. ಎಷ್ಟು ಖರ್ಚು ಮಾಡಿದ್ದೀರಿ, ನೀವು ಎಷ್ಟು ಕೊಟ್ಟಿದ್ದೀರಿ ಎಂಬುದರ ವಿವರ ಕೊಡಬೇಕು. ಮ್ಯಾಚಿಂಗ್ ಗ್ರಾಂಟ್ ಎಷ್ಟು ಕೊಟ್ಟಿದ್ದೀರಿ ಎಂಬುದರ ಬಗ್ಗೆ ಹೇಳಬೇಕು. ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳಾದ ಸಿಂಧ್ಯಾರವರು ಕೆಲವು ಜಿಲ್ಲೆಗಳಿಗೆ ಹೋಗಿ ಸರ್ಟಿಫಿಕೇಟ್ ಕೊಟ್ಟು ಬಂದಿದ್ದಾರೆ. ಸಮಾಜಕಲ್ಯಾಣ ಕಾರ್ಯ ಹರಿಜನ ಗಿರಿಜನರ ಅಭಿವೃದ್ಧಿ ಕಾರ್ಯ, ಅವರ ಏಳಿಗೆ ಬಹಳ ಚೆನ್ನಾಗಿ ನಡೆದಿದೆ ಎಂದು

ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಆದರೆ ನಾನು ಹೇಳಿದ್ದರ ಬಗ್ಗೆ ದಯವಿಟ್ಟು ವಿಶೇಷ ಗಮನ ಕೊಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುವುದಕ್ಕೆ ಇಚ್ಛಿಪಡುತ್ತೇನೆ.

ಕೊನೆಯದಾಗಿ, ಯೂನಿವರ್ಸಿಟಿಗಳ ವಿಷಯ ಹೇಳುತ್ತೇನೆ. ಇಡೀ ರಾಜ್ಯದಲ್ಲಿ ಅವ್ಯವಸ್ಥೆ ತಾಂಡವವಾಡುತ್ತಿದೆ. ಮಂಗಳೂರು ಯೂನಿವರ್ಸಿಟಿಯಲ್ಲಿ ಬಿ. ಬಿ. ಎಂ. ಪರೀಕ್ಷೆಯಲ್ಲಿ ಏಳು ವಿದ್ಯಾರ್ಥಿಗಳ ಆನ್ಸರ್ ಪೇಪರ್ ಎಲ್ಲೋ ಕಳೆದು ಹೋಗಿದೆ. ಬಿ. ಬಿ. ಎಂ. ಪರೀಕ್ಷೆ ಅಕ್ಟೋಬರ್ ೮೮ ರಲ್ಲಿ ಆಗಿದೆ. ಇನ್ನೂ ರಿಸಲ್ಟ್ ಅನೌನ್ಸ್ ಆಗಿಲ್ಲ. ಏಳು ಜನರ ಆನ್ಸರ್ ಪೇಪರ್ಸ್ ಇಲ್ಲ. ಹೀಗೆ ಆಗಿದೆ. ಅಲ್ಲಿರುವಂತಹ ಸೆನೆಟ್ ಮೆಂಬರ್ ಆದಂಥ ಶ್ರೀ ಎಸ್. ಪಿ. ಚೆಂಗಪ್ಪ ಎನ್ನುವವರು ಈ ವಿಷಯವನ್ನು ಅಲ್ಲಿನ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈ ವಿಚಾರ ಡೆಕ್ಕನ್ ಹೆರಾಲ್ಡ್, ಇಂಡಿಯನ್ ಎಕ್ಸ್‌ಪ್ರೆಸ್ ಮತ್ತು ಹಿಂದೂ ಪತ್ರಿಕೆಗಳಲ್ಲಿ ಬಂದಿದೆ. ಇದೊಂದು ಸ್ಯಾಂಪಲ್ ಮಾತ್ರ. ಈ ರೀತಿ ಎಲ್ಲಾ ಕಡೆ ಆಗುತ್ತಿದೆ. ಕೊಶ್ಚನ್ ಪೇಪರ್ ಮುಂಚೆಯೇ ಲೀಕ್ ಆಗುವುದು, ಆನ್ಸರ್ ಪೇಪರ್ ಸಿಗದಿರುವುದು, ಆನ್ಸರ್ ಪೇಪರ್‌ನ್ನು ಮನೆಗೆ ತೆಗೆದುಕೊಂಡು ಹೋಗಿ ಬರೆಸಿ ಹೆಚ್ಚು ನಂಬರ್ ಹಾಕುವುದು, ಇದೆಲ್ಲಾ ನಡೆಯುತ್ತಲೇ ಇದೆ. ಇದು ಬೇರೆ ವಿಚಾರ. ಈ ಮಂಗಳೂರು ಯೂನಿವರ್ಸಿಟಿಯ ಆನ್ಸರ್ ಪೇಪರ್ಸ್ ಎಲ್ಲಿ ಹೋಗಿದೆ ಎಂಬುದನ್ನು ತಾವು ಹೇಳಬೇಕು, ಇದರ ಬಗ್ಗೆ ತನಿಖೆ ಮಾಡಬೇಕು.

ಇನ್ನು ಇಲ್ಲಿ ಕೆ. ಇ. ಬಿ. ಬಗ್ಗೆ ಚರ್ಚೆ ನಡೆಯಿತು. ರೈತನ ಉದ್ಧಾರದ ಬಗ್ಗೆ ಚರ್ಚೆ ನಡೆಯಿತು. ಯಾವುದೇ ಕಾಲಕ್ಕೂ ಇಂಡಸ್ಟ್ರಿಗಳಿಗೆ ತೊಂದರೆ ಆಗುವುದಕ್ಕೆ ಬಿಡುವುದಿಲ್ಲ ಎಂದು ಮಂತ್ರಿಗಳು ಹೇಳಿದರು ಇದು ಖಂಡನೀಯವಾದುದು. ರೈತರಿಗೆ ಅನುಕೂಲ ಆಗಬೇಕು. ವಿಶೇಷವಾಗಿ ರೈತರ ಪಂಪ್‌ಸೆಟ್‌ಗಳಿಗೆ ಗಮನ ಕೊಡಬೇಕು. ಕೆ. ಇ. ಬಿ.ಗೆ ೭೩ ಕೋಟಿ ರೂಪಾಯಿ ಬಾಕಿ ಬರಬೇಕು. ಸಂಡೂರ್ ಮ್ಯಾಂಗನೀಸ್ ಫ್ಯಾಕ್ಟರಿಯಿಂದ ೫ ಕೋಟಿ ಬಾಕಿ ಬರಬೇಕು. ಅಲ್ಯೂಮಿನಿಯಂ ಫ್ಯಾಕ್ಟರಿಯಿಂದ ೭ ಕೋಟಿ ಬಾಕಿ ಬರಬೇಕು, ನೀವು ಈ ವಿಚಾರ ಕೋರ್ಟಿನಲ್ಲಿದೆ ಎಂದು ಹೇಳುತ್ತೀರಿ, ಕೋರ್ಟಿಗೆ ಹೇಗೆ ಹೋಯಿತು ? ಸ್ಟ್ರಾಂಗ್ ವಕೀಲ್ ಮಾಡುವ ಪ್ರಯತ್ನ ಏತಕ್ಕೆ ನೀವು ಮಾಡುವುದಿಲ್ಲ ಎಂದು ಕೇಳುತ್ತೇನೆ ?

ಇನ್ನು ಸ್ಟೈಫೆಂಡರಿ ಗ್ರಾಜುಯೇಟ್ಸ್ ೨೭ನೇ ತಾರೀಖು ಪುನಃ ಬೆಂಗಳೂರಿಗೆ ಧರಣಿ ಮಾಡಲು ಬರುತ್ತಿದ್ದಾರೆ. ಸ್ಟೈಫೆಂಡರಿ ಗ್ರಾಜುಯೇಟ್ ಏನು ಸರಕಾರದ ಜೀತದಾಳುಗಳು ಎಂದು ತಿಳಿದು ಕೊಂಡಿದ್ದೀರಾ ? ಬದುಕುವ ಅಪೇಕ್ಷೆ ನಿಮಗೆ ಇರುವ ಹಾಗೆ ಅವರಿಗೂ ಇಲ್ಲವೇ ? ಇವರ ಸಮಸ್ಯೆಯನ್ನು ಬಗೆಹರಿಸಬೇಡವೇ ನಿರುದ್ಯೋಗಿ ಯುವಕರ ಸಮಸ್ಯೆಯನ್ನು ನೀವು ಬಗೆಹರಿಸಲಿಲ್ಲ. ಅವರ ಬಗ್ಗೆ ನಿಮಗೆ ಕಳಕಳಿ ಇಲ್ಲ. ಇವರೇನು ಕೂಲಿ ಆಳುಗಳೇ ? ಕಳೆದ ೭-೮ ವರ್ಷಗಳಿಂದ ಇವರು ದುಡಿಯುತ್ತಿದ್ದಾರೆ. ಇದೇ ಸದನದಲ್ಲಿ ಇವರ ಸಮಸ್ಯೆಯನ್ನು ಬಗೆಹರಿಸುವುದಾಗಿ ಆಶ್ವಾಸನೆ ಕೊಟ್ಟಿದ್ದೀರಿ. ಆದರೆ ಇದುವರೆಗೆ ಬಗೆಹರಿಸಿಲ್ಲ. ಇದೇ ೨೭ನೇ ತಾರೀಖು ಪುನಃ ಅವರು ಧರಣಿ ಮಾಡುವುದಕ್ಕೆ ಬರುತ್ತಿದ್ದಾರೆ. ಇದಕ್ಕೆ ಖಚಿತವಾದ ಪರಿಹಾರ ಹುಡುಕಬೇಕು. ಸ್ಟೈಫೆಂಡರಿ ಗ್ರಾಜುಯೇಟ್ಸ್ ಸಮಸ್ಯೆಯನ್ನು ಕೂಡಲೇ ಪರಿಹರಿಸಬೇಕೆಂದು ಹೇಳುತ್ತೇನೆ.

ಇನ್ನು ಮಂಡಲ ಪಂಚಾಯಿತಿಗಳ ವಿಚಾರ ಹೇಳುತ್ತೇನೆ. ಅಧಿಕಾರ ವಿಕೇಂದ್ರೀಕರಣ ಮಾಡಿದ್ದೇವೆ ಎಂದು ಹೇಳಿದ್ದೀರಿ. ನಾನು ಅವತ್ತೇ ಹೇಳಿದೆ, ತಲೆ ನಿಮ್ಮದೆ, ಕತ್ತಿ ನಿಮ್ಮದೆ ಹೇಗೆ ಬೇಕಾದರೂ ಬೋಳಿಸಿಕೊಳ್ಳಿ ಎಂದು ಹೇಳುತ್ತೀರಿ ಎಂದು ಹೇಳಿದ್ದೆ. ಮಂಡಲ ಪಂಚಾಯಿತಿಗಳು ತಮ್ಮ ಆದಾಯದಲ್ಲಿ ೧೫ ಸಾವಿರಕ್ಕಿಂತ ಹೆಚ್ಚು ತಿಂಗಳಿಗೆ ಖರ್ಚು ಮಾಡುವಹಾಗಿಲ್ಲ ಎಂಬ ಆಜ್ಞೆಯನ್ನು ತಂದಿದ್ದೀರಿ. ಅವರ ದುಡ್ಡನ್ನೇ ಅವರು ಖರ್ಚು ಮಾಡುವಹಾಗೆ ಇಲ್ಲ. ೧೫ ಸಾವಿರಕ್ಕಿಂತ ಹೆಚ್ಚು ಖರ್ಚು ಮಾಡುವುದಕ್ಕೆ ಬರುವುದಿಲ್ಲ.

(ಮಾನ್ಯ ಅಧ್ಯಕ್ಷರು ಪೀಠದಲ್ಲಿ ಉಪಸ್ಥಿತರಾದರು)

ಅಧ್ಯಕ್ಷರು.—ಯಡಿಯೂರಪ್ಪನವರೇ, ೫೦ ಮಿನಿಟ್ ಆಯಿತು. ತಾವು ಬೇಕಾದಷ್ಟು ಸಮಯ ತೆಗೆದುಕೊಂಡಿದ್ದೀರಿ. ಬೇಗ ಮುಗಿಸಿ.

೩-೦೦ ಪಿ. ಎಂ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಕೊನೆಯದಾಗಿ ಒಂದು ಮಾತು ಹೇಳುವುದೇನೆಂದರೆ ಕಸಾಯಿಖಾನೆಯನ್ನು ಇವತ್ತು ತಾವು ಕಾಚರಕನಹಳ್ಳಿಯಲ್ಲಿ ಪ್ರಾರಂಭ ಮಾಡುವ ಬಗ್ಗೆ ಅನೇಕ ಕಡೆಯಿಂದ ವಿರೋಧ ಬಂದಿದೆ. ಯಡಿಯೂರಪ್ಪ ಒಬ್ಬ ಮಾತ್ರ ವಿರೋಧ ಮಾಡುತ್ತಿಲ್ಲ. ಎಲ್ಲಾ ವರ್ಗಗಳ ಕಡೆಯಿಂದ ಇದಕ್ಕೆ ವಿರೋಧ ವ್ಯಕ್ತವಾಗಿದೆ. ಈಬಗ್ಗೆ ಜೈನ ಮಠಾಧಿಪತಿಗಳಿಂದಲೂ ಸಹ ವಿರೋಧ ವ್ಯಕ್ತವಾಗಿದೆ. ಸಾವಿರಾರು ಜನ ಮುಖ್ಯ ಮಂತ್ರಿಗಳಿಗೆ ಈಬಗ್ಗೆ ಮನವಿಗಳನ್ನು ಕೊಟ್ಟಿದ್ದಾರೆ. ಮೊನ್ನೆಯ ದಿವಸ ಅನೇಕ ಪ್ರಮುಖರು ಒಂದು ಮನವಿಯನ್ನ ಮುಖ್ಯಮಂತ್ರಿಗಳಿಗೆ ಕೊಡಲು ಬಂದಾಗ ಕಬ್ಬನ್‌ಪಾರ್ಕ್ ಪೋಲೀಸ್‌ನವರು ಅವರನ್ನು ಅರೆಸ್ಟ್ ಮಾಡಿ ಕುಡಿಯಲು ನೀರು ಕೊಡದೇ ಕೆಟ್ಟ ರೀತಿಯಿಂದ ಟ್ರೀಟ್ ಮಾಡಿದ್ದಾರೆ. ಕುಡಿಯಲು ನೀರು ಕೊಡದೆ ಇರುವಂತಹ ರೀತಿಯಲ್ಲಿ ನೀವು ಇವತ್ತು ಆಡಳಿತ ವೈಕರಿಯನ್ನು ಈ ರಾಜ್ಯದಲ್ಲಿ ನಡೆಸುತ್ತಿದ್ದೀರಿ. ಇದು ಸರಿಯಲ್ಲ. ಸ್ವಾಮಿ ನಾನು ಹೆಚ್ಚಾಗಿ ಈ ರಾಜ್ಯದ ರೈತರ ಬಗ್ಗೆ ಮಾತನಾಡಿದ್ದೇನೆ ಅದು ತಮಗೆ ಪ್ರಿಯವಾಗಬಹುದು. ಇನ್ನು ಕೊನೆಯದಾಗಿ ನಾನು ನನ್ನ ಕ್ಷೇತ್ರವಾದ ಶಿಕಾರಿಪುರ ತಾಲ್ಲೂಕಿನಬಗ್ಗೆ ಒಂದು ಮಾತನ್ನು ಮಾತ್ರ ಪ್ರಸ್ತಾಪ ಮಾಡುತ್ತೇನೆ. ನನ್ನ ಕ್ಷೇತ್ರದ ಬಗ್ಗೆ ತಾವು ಪಕ್ಷಪಾತ ಧೋರಣೆಯನ್ನು ಅನುಸರಿಸುತ್ತಿದ್ದೀರಿ. ನನ್ನ ಕ್ಷೇತ್ರದಲ್ಲಿ ಯಾವುದೇ ಒಂದು ಡೆವಲಪ್‌ಮೆಂಟ್ ವರ್ಕ್ ಆಗದೆ ಇರುವಂತಹ ರೀತಿಯಲ್ಲಿ ನೋಡಿಕೊಳ್ಳುತ್ತಿದ್ದೀರಿ.....

ಅಧ್ಯಕ್ಷರು.—ಸಾಕು ಮುಗಿಸಿ. ನೀವು ಈಗಲೇ ೫೦ ನಿಮಿಷ ತೆಗೆದುಕೊಂಡಿದ್ದೀರಿ. ನಾನು ಪೀಠದಲ್ಲಿ ಇದ್ದಿದ್ದರೆ ಇಷ್ಟು ಸಮಯ ಕೊಡುತ್ತಿರಲಿಲ್ಲ. ಮೇಡಂ ಇದ್ದರು ಕೊಟ್ಟಿದ್ದಾರೆ. ಸಾಕು ಮುಗಿಸಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಎರಡು ನಿಮಿಷದಲ್ಲಿ ಮುಗಿಸುತ್ತೇನೆ. ಸ್ವಾಮಿ, ಶಿಕಾರಿಪುರ ತಾಲ್ಲೂಕಿನಲ್ಲಿ ಯಾವುದೇ ಡೆವಲಪ್‌ಮೆಂಟ್ ವರ್ಕ್ಸ್ ಮಾಡಲಿಕ್ಕೆ ನೀವು ಬಿಟ್ಟಿಲ್ಲ. ಕಾರಣ ನಾನು ಒಬ್ಬ ವಿರೋಧಪಕ್ಷದ ಸದಸ್ಯ ಎನ್ನುವ ಕಾರಣಕ್ಕೆ. ನನ್ನ ಕ್ಷೇತ್ರಕ್ಕೆ ಬಜೆಟ್‌ನಲ್ಲಿ ಸೇರಿಸಿದಲ್ಲಿ ಕೆಲಸಕಾರ್ಯಗಳು ಸಹ ಆಗಲಿಲ್ಲ. ಒಂದು ೫ ಕಿಲೋಮೀಟರ್ ರಸ್ತೆಯನ್ನು ಸಹ ಮಾಡಿಸಲಿಕ್ಕೆ ನಿಮಗೆ ಆಗಲಿಲ್ಲ. ಮತ್ತು ಒಂದು ಪ್ರಥಮದರ್ಜೆ ಕಾಲೇಜು ಆಗಬೇಕೆಂದು ಹೇಳಿ ಸಾರ್ವಜನಿಕರಿಂದ ಹಣ ವಸೂಲಿ ಮಾಡಿ ಸರ್ಕಾರಕ್ಕೆ ಕೊಟ್ಟೆ. ಆದರೆ ಅಲ್ಲಿ ಇದುವರೆಗೂ ಪ್ರಥಮದರ್ಜೆ ಕಾಲೇಜು ಪ್ರಾರಂಭವಾಗಲಿಲ್ಲ. ಕಳೆದ ಸಾರಿ ಸನ್ಮಾನ್ಯ ಮುಖ್ಯಮಂತ್ರಿಗಳು ಶಿಕಾರಿಪುರಕ್ಕೆ ಬಂದಿದ್ದಾಗ ಪ್ರಥಮದರ್ಜೆ ಕಾಲೇಜು ಪ್ರಾರಂಭ ಮಾಡುವ ಬಗ್ಗೆ ಆಶ್ವಾಸನೆ ಕೊಟ್ಟರು ಆದರೂ ಸಹ ಇದುವರೆಗೂ ಆಗಲಿಲ್ಲ. ನನ್ನ ಕ್ಷೇತ್ರಕ್ಕೆ ತಾವು ಅನ್ಯಾಯ ಮಾಡುತ್ತಿದ್ದೀರಿ. ಬಜೆಟ್‌ನಲ್ಲಿ ಮಂಜೂರಾದ ಕೆಲಸಕಾರ್ಯಗಳನ್ನು ಸಹ ಪೂರೈಸಲಿಲ್ಲ. ಕಾರಣ ನಾನು ವಿರೋಧಪಕ್ಷದಲ್ಲಿದ್ದೇನೆ. ಆ ಕ್ಷೇತ್ರದಿಂದ ಮತ್ತೆ ಚುನಾಯಿಸಿ ಬರಬಾರದು ಎನ್ನುವ ದುರುದ್ದೇಶವನ್ನು ಈಗಿನ ಸರ್ಕಾರ ಇಟ್ಟುಕೊಂಡು ಶಿಕಾರಿಪುರದಲ್ಲಿ ಯಾವುದೇ ರೀತಿಯ ಡೆವಲಪ್‌ಮೆಂಟ್ ವರ್ಕ್ಸ್ ಮಾಡಿಸಿಲ್ಲ. ನನ್ನ ತಾಲ್ಲೂಕಿನ ಜನ ನಿಮ್ಮನ್ನು ಕ್ಷಮಿಸುವುದಿಲ್ಲ. ಆದ್ದರಿಂದ ನಮ್ಮ ತಾಲ್ಲೂಕಿನಲ್ಲಿ ಡೆವಲಪ್‌ಮೆಂಟ್ ವರ್ಕ್ಸ್ ತೆಗೆದುಕೊಳ್ಳಲು ಪ್ರಯತ್ನ ಮಾಡಿ. ನಮಗೂ ಕಾಲ ಬರುತ್ತದೆ. ಆಗ ನಾನು ತಮಗೆ ತಕ್ಕ ಉತ್ತರ ಕೊಡುತ್ತೇನೆ. ನಾನು ವಿರೋಧಪಕ್ಷದಲ್ಲಿ ಒಬ್ಬನೇ ಇದ್ದೇನೆ ಎಂದು ನನ್ನ ಕ್ಷೇತ್ರದಲ್ಲಿ ನನ್ನನ್ನು ತುಳಿಯಲು ಪ್ರಯತ್ನ ಮಾಡುತ್ತಿದ್ದೀರಿ. ಇದು ಆಗುವುದಿಲ್ಲ ದಯಮಾಡಿ ನನ್ನ ಕ್ಷೇತ್ರದಲ್ಲಿ ಡೆವಲಪ್‌ಮೆಂಟ್ ವರ್ಕ್ಸ್ ತೆಗೆದುಕೊಳ್ಳಿ ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅವರು ಹೇಳಿದ ಮೇಲಾದರೂ ಮಾಡಿ. ಮುಂದೆ ಚುನಾವಣೆಯಲ್ಲಿ ಅವರು ಗೆದ್ದು ಬರಲಿ.

ಶ್ರೀ ಬಿ ಎಸ್ ಯಡಿಯೂರಪ್ಪ.—ನಾನು ಚುನಾವಣೆಯಲ್ಲಿ ಗೆದ್ದು ಬರುವುದಕ್ಕೆ ತೊಂದರೆ ಏನು ಇಲ್ಲ.

ಅಧ್ಯಕ್ಷರು. ಈಗ ನಾನು ಎಂ. ಡಿ. ಸೀಟ್ ಬಗ್ಗೆ ಹೇಳುವುದಾದರೆ, ಹಿಂದೆ ನಾನು ಅದನ್ನು ಗಮನ ಸೆಳೆಯುವ ಸೂಚನೆಗೆ ಕನ್‌ವರ್ಟ್ ಮಾಡಿದ್ದೆ, ಅದನ್ನು ತಾವು ಪುನರ್‌ಪರಿಶೀಲನೆ ಮಾಡಿ ಎಂದು ಹೇಳಿದಾಗ ಮುಖ್ಯಮಂತ್ರಿಗಳನ್ನು ಕೇಳಿದ್ದೇನೆ. ಆ ಕಡೆ ಈ ಕಡೆ ಎಲ್ಲಾ ಸದಸ್ಯರನ್ನು

ಕೇಳಿದ್ದೇನೆ. ಎಲ್ಲರ ಅಭಿಪ್ರಾಯ ಪಡೆದಮೇಲೆ ನಿಯಮ ೬೮ರ ಪ್ರಕಾರ ಚರ್ಚೆಮಾಡುವುದಕ್ಕೆ ಮುಖ್ಯಮಂತ್ರಿಗಳು ಒಪ್ಪಿದ್ದಾರೆ. ಇದನ್ನು ಮಂಗಳವಾರ ತೆಗೆದುಕೊಳ್ಳೋಣ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಕೋ ಆಪರೇಟಿವ್‌ದು ಯಾವಾಗ ?

ಅಧ್ಯಕ್ಷರು.—ನಾನು ಈಗಾಗಲೇ ಹೇಳಿದ್ದೇನೆ. ಎರಡು ವಿಷಯಗಳನ್ನು ಒಮ್ಮೆಗೆ ಹಾಕೋಣ. ನಾನು ಆ ಬಗ್ಗೆ ರೂಲಿಂಗ್ ಕೊಟ್ಟಿದ್ದೇನೆ.

ಶ್ರೀ ಎಂ. ಎಸ್. ನಾರಾಯಣರಾವ್,—ಎರಡು ಒಟ್ಟಿಗೆ ತೆಗೆದುಕೊಂಡರೆ ಮಾತನಾಡಲು ಕಷ್ಟವಾಗುತ್ತದೆ.

ಅಧ್ಯಕ್ಷರು.—ಇಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ವಿದ್ಯುತ್‌ಶ್ಚಕ್ತಿ ಸಲುವಾಗಿ ಒಂದು ಸಮಿತಿ ನೇಮಕಮಾಡಿ, ಅವರು ಒಂದು ತಿಂಗಳಲ್ಲಿ ವರದಿ ಕೊಡಬೇಕೆಂದು ತಾವು ಸೂಚಿಸಬೇಕು.

ಅಧ್ಯಕ್ಷರು.—ಸುಮಾರು ೧೪ ಜನ ಸದಸ್ಯರುಳ್ಳ ಒಂದು ಸಮಿತಿ ಮಾಡೋಣ ಅದರಲ್ಲಿ ಮಂತ್ರಿಗಳು ಇರುತ್ತಾರೆ. ಆ ಸಮಿತಿಯಲ್ಲಿ ಆ ಕಡೆಯವರು ಈ ಕಡೆಯವರು, ನೀವು ಸಹ ಇದ್ದೀರಿ. ಇವತ್ತು ಅನೌನ್ಸ್ ಮಾಡುತ್ತೇನೆ. ಮಾನ್ಯ ಧರ್ಮಸಿಂಗ್‌ರವರೇ ಆತಾವು ಯಾವ್ಯಯವ ಮೇಲೆ ಮಾತನಾಡಿ

† ಶ್ರೀ ಧರ್ಮಸಿಂಗ್ (ಜೇವರ್ಗಿ).—ಮಾನ್ಯ ಅಧ್ಯಕ್ಷರೇ, ೧೯೮೯-೯೦ನೇ ಸಾಲಿನ ಬಜೆಟ್‌ನ್ನು ಮಾನ್ಯ ಮುಖ್ಯ ಮಂತ್ರಿಗಳು ಈ ಸದನದಲ್ಲಿ ಇಟ್ಟಿದ್ದಾರೆ. ಇದರಲ್ಲಿ ಬಹಳಷ್ಟು ಆಶ್ವಾಸನೆಗಳನ್ನು ಹೆಚ್ಚಿನ ರೀತಿಯಲ್ಲಿ ಕೊಟ್ಟಿದ್ದಾರೆ. ಈ ಒಂದು ವರ್ಷವಾದ ಮೇಲೆ ಎಲೆಕ್ಷನ್‌ಗೆ ಹೋಗುವ ದೃಷ್ಟಿಯಿಂದ, ಜನರಿಗೆ ಹೆಚ್ಚಿನ ರೀತಿಯಲ್ಲಿ ಸರ್ಕಾರ ಕೆಲಸ ಮಾಡಿದೆಯೆಂದು ಜನರ ಮನಸ್ಸಿನಲ್ಲಿ ಬರಬೇಕೆಂದು ಬಹಳಷ್ಟು ಘೋಷಣೆಗಳನ್ನು ಮಾಡಿದ್ದಾರೆ. ಅಧ್ಯಕ್ಷರೇ ಅದರ ಜೊತೆಗೆ ಮುಖ್ಯಮಂತ್ರಿಗಳು, ನಮಗೆ ಕೇಂದ್ರ ಸರ್ಕಾರದಿಂದ ಎಷ್ಟು ಹಣ ಬರಬೇಕಾಗಿತ್ತೋ ಅಷ್ಟು ಬಂದಿಲ್ಲ. ಅದಕ್ಕೆ ಹೆಚ್ಚಿನ ರೀತಿಯಲ್ಲಿ ಪರಿಣಾಮಕಾರಿಯಾಗಿ, ಪ್ರಗತಿ ಪರವಾಗಿ ಕೆಲಸಗಳನ್ನು ಮಾಡಲಿಕ್ಕೆ ಆಗಿಲ್ಲ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಬರಗಾಲ ಪರಿಸ್ಥಿತಿಯ ಬಗ್ಗೆ ಹೇಳಿ ಇದರ ಸಲುವಾಗಿ ನಾವು ಕೇಂದ್ರ ಸರ್ಕಾರಕ್ಕೆ ಹೆಚ್ಚಿನ ರೀತಿಯಲ್ಲಿ ಹಣವನ್ನು ಕೇಳಿದ್ದೆವು ಆದರೆ ಕೇಂದ್ರ ಸರ್ಕಾರದಿಂದ ಹೆಚ್ಚಿನ ರೀತಿಯಲ್ಲಿ ಗ್ರ್ಯಾಂಟ್ ಬರಲಿಲ್ಲ. ಅದಕ್ಕೆ ನಮಗೆ ಬಹಳ ತೊಂದರೆಯಾಗಿದೆ ಆದರೂ ಬರಗಾಲದಲ್ಲಿ ನಮ್ಮ ರಾಜ್ಯ ಸರ್ಕಾರದ ಬೊಕ್ಕಸದಲ್ಲಿರತಕ್ಕ ಹಣದಲ್ಲಿ ಆದಷ್ಟು ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಜನರ ನಿರೀಕ್ಷಣೆ ಮೇರೆಗೆ ಹಣ ಖರ್ಚು ಮಾಡಿದ್ದೇವೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಇವತ್ತು ನಾವು ವಿಧಾನ ಸೌಧದಲ್ಲಿ ಕುಳಿತು ಸಮಾಲೋಚನೆ ಮಾಡುತ್ತಿದ್ದೇವೆ. ತಾವು ಅಧ್ಯಕ್ಷ ಸ್ಥಾನದಲ್ಲಿದ್ದೀರಿ. ಇವತ್ತು ನಾವು ಏನು ಚರ್ಚೆ ಮಾಡುತ್ತೇವೆ, ಅದರ ಬಗ್ಗೆ ಜನರು ಏನು ನಿರೀಕ್ಷಣೆಮಾಡುತ್ತಾರೆ. ಎಂಬುದನ್ನು ತಿಳಿದುಕೊಳ್ಳಬೇಕು. ಈಗಾಗಲೇ ಮಾನ್ಯ ಯಡಿಯೂರಪ್ಪನವರು ಸಾಕಷ್ಟು ಕೂಲಂಕುಷವಾಗಿ ಹೇಳಿದ್ದಾರೆ, ಮಾನ್ಯ ಬಸವಲಿಂಗಪ್ಪನವರು, ಮಾನ್ಯ ವೀರಪ್ಪಮೊಯಿಲಿಯವರೂ ಸಹ ಹೇಳಿದ್ದಾರೆ. ಬಜೆಟ್ ಮುಖಾಂತರ ಒಂದು ವರ್ಷದ ಅವಧಿಯಲ್ಲಿ ಜನರಿಗೆ ಯಾವ ರೀತಿ ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಂಡಿದೆ ಎನ್ನತಕ್ಕ ರೀತಿಯಲ್ಲಿ ಪ್ರಸ್ತಾಪ ಮಾಡಿದಾಗ, ಹಳ್ಳಿಮಟ್ಟದಲ್ಲಿರತಕ್ಕಂತ ಜನರಿಗೆ ಮೆಚ್ಚುಗೆಯಾಗತಕ್ಕಂತ ರೀತಿಯಲ್ಲಿ ಕೆಲಸಗಳು ಆಗಿಲ್ಲ. ಇದರ ಬಗ್ಗೆ ಮಾನ್ಯ ಮಲ್ಲಿಕಾರ್ಜುನಖರ್ಗೆಯವರು ಪ್ರಸ್ತಾಪಮಾಡಿದ್ದಾರೆ. ಗುಲ್ಬರ್ಗಾ ಜಿಲ್ಲೆಯಲ್ಲಿರುವ ಹೆಚ್ಚಿನ ಜನರು ಇವತ್ತಿನ ದಿವಸ ಕೆಲಸಕ್ಕಾಗಿ ಬೊಂಬಾಯಿಗೆ ಮತ್ತು ಬೇರೆ ಬೇರೆ ಕಡೆ ಹೋಗಿದ್ದಾರೆ. ಗುಲ್ಬರ್ಗಾ ಜಿಲ್ಲೆ ಒಂದರಲ್ಲೇ ಅಲ್ಲ, ಕರ್ನಾಟಕ ರಾಜ್ಯದ ಬಿಜಾಪುರ, ಬೀದರ್, ರಾಯಚೂರು ಜಿಲ್ಲೆಗಳ ಜನರು ಇವತ್ತಿನ ದಿವಸ ಬೆಂಗಳೂರಿಗೆ ವಲಸೆ ಬಂದಿದ್ದಾರೆ. ಸುಮಾರು ಒಂದು ಲಕ್ಷ ಜನ ಆ ಜಿಲ್ಲೆಗಳಿಂದ ಬೆಂಗಳೂರಿಗೆ ಬಂದಿದ್ದಾರೆ. ಇವರು ಅಧಿಕಾರಕ್ಕೆ ಬಂದ ೧೯೮೩ನೇ ಇಸವಿಯಿಂದಲೂ ಕರ್ನಾಟಕದಲ್ಲಿ ಬರಗಾಲ ಬಂದು ಜನರು ಬಹಳ ಕಷ್ಟ ಅನುಭವಿಸಿದ್ದಾರೆ. ಜನರ ಕಷ್ಟವನ್ನು ತಪ್ಪಿಸಲು ಶಾಶ್ವತವಾದ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳಬೇಕೆಂದು ಪದೇ ಪದೇ ಈ ಸದನದಲ್ಲಿ ನಾವು ಪ್ರಸ್ತಾಪ ಮಾಡಿದ್ದೇವೆ. ಇದರ ಬಗ್ಗೆ ಸರ್ಕಾರ ಏನೂ ಕ್ರಮ ತೆಗೆದುಕೊಂಡಿಲ್ಲ. ಮೊನ್ನೆ ತಾನೆ ಮಾನ್ಯ ಸಚಿವರಾದ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ದೇಶಪಾಂಡೆಯವರು ಒಂದು ಹೇಳಿಕೆಯನ್ನು ಕೊಟ್ಟು, ಬರಗಾಲದಿಂದ ಯಾವ ಯಾವ ರಾಜ್ಯಗಳಲ್ಲಿ ಜನರು ತೊಂದರೆಗೆ ಸಿಕ್ಕಿದ್ದಾರೋ ಅವರುಗಳಿಗೆ ಪರಿಹಾರ ಒದಗಿಸುವುದಕ್ಕಾಗಿ ೩೬ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದರು. ಈ ಹಣದಲ್ಲಿ ಕೇವಲ ೨೧ ಲಕ್ಷ ರೂಪಾಯಿಗಳು ಮಾತ್ರ ನಮ್ಮ ಗುಲ್ಬರ್ಗಾ ಜಿಲ್ಲೆಗೆ ಹೋಗಿದೆ. ಇವತ್ತು ಇವರು ಮಂಡಿಸಿರತಕ್ಕ ೧೪ ಪುಟದ ಬಜೆಟ್ ಭಾಷಣದ ಪುಸ್ತಕವನ್ನು ಓದಿದರೆ, ಎಲ್ಲಾ ಕಡೆಯೂ ಕೇಂದ್ರ ಸರ್ಕಾರದಿಂದ ನಮ್ಮ ರಾಜ್ಯ ಸರ್ಕಾರಕ್ಕೆ ಹಣ ಬಂದಿಲ್ಲವೆಂದು ಪ್ರಸ್ತಾಪ ಮಾಡಿದ್ದಾರೆ. ಇವತ್ತು ನಾನು ಒಂದೇ ಒಂದು ಉದಾಹರಣೆ ಕೊಡಬೇಕಾದರೆ, ಪಾರ್ಲಿಮೆಂಟಿನಲ್ಲಿ ಈಗ ಒಂದು ಅಮೆಂಡ್‌ಮೆಂಟ್ ಆಗಿದೆ. ಅದೇನೆಂದರೆ, ಸೇಲ್ಸ್ ಟ್ಯಾಕ್ಸ್‌ನ್ನು ಎಷ್ಟು ವಸೂಲಿ ಮಾಡಲಾಗುತ್ತದೋ ಅದರಲ್ಲಿ ರಾಜ್ಯ ಸರ್ಕಾರಕ್ಕೆ ಸಲ್ಲಬೇಕಾದಷ್ಟು ಹಣವನ್ನು ಕೊಡಬೇಕೆಂದು ತಿದ್ದುಪಡಿ ಮಾಡಲಾಗಿದೆ. ಆಮೇಲೆ ರೋಡ್ ಫಂಡ್ಸ್‌ನಲ್ಲಿ ೧೯೮೭-೮೮ರಲ್ಲಿ ನಮ್ಮ ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರದಿಂದ ೭೫ ಲಕ್ಷ ರೂಪಾಯಿ ಬಂದಿದ್ದರೆ, ಇವತ್ತು ೧೯೮೯-೯೦ರಲ್ಲಿ ೧೫ ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ. ಇಷ್ಟು ಹಣವನ್ನು ರಾಜ್ಯ ಸರ್ಕಾರದವರು ಪಡೆದು ಯಾವ ಯಾವ ಕಾರ್ಯಕ್ರಮಕ್ಕೆ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದಾರೆಂದು ನಾನು ಕೇಳಬೇಕಾಗುತ್ತದೆ. ಮತ್ತು ವಿಶೇಷವಾಗಿ ಇವರು ಏನು ಬಜೆಟ್ ಪ್ರಸೆಂಟ್ ಮಾಡಿದ್ದಾರೆ. ಇದರಲ್ಲಿ ಯಾವಾಗಲೂ ಡೆಫಿಸಿಟ್ ಇರುತ್ತದೆ ೧೯೮೬-೮೭ರಲ್ಲಿ ೧೨೫ ಕೋಟಿ ರೂಪಾಯಿ ಡೆಫಿಸಿಟ್, ೧೯೮೭-೮೮ರಲ್ಲಿ ೨೦೦ ಕೋಟಿ ರೂಪಾಯಿ ಡೆಫಿಸಿಟ್, ೧೯೮೮-೮೯ರಲ್ಲಿ ೨೩೬ ಕೋಟಿ ಡೆಫಿಸಿಟ್, ೧೯೮೯-೯೦ರಲ್ಲಿ ೨೬೭ ಕೋಟಿ ರೂಪಾಯಿ ಡೆಫಿಸಿಟ್ ಆಗಿದೆ. ಇವೊತ್ತು ಸೆಂಟ್ರಲ್ ಸೆರಬಲ್ ಟ್ಯಾಕ್ಸ್‌ನಿಂದ ನಮಗೆ ಬರಬೇಕಾದ ೧೩ ಕೋಟಿ ರೂಪಾಯಿಗಳು ಬರುತ್ತಾ ಇದೆ ಎಕ್ಸೈಸ್ ಡ್ಯೂಟಿಯಿಂದ ೩೪ ಕೋಟಿ ರೂಪಾಯಿಗಳು ಬರುತ್ತಾ ಇದೆ. ಅದೇ ರೀತಿಯಲ್ಲಿ ಅಡ್ವಾನ್ಸ್ ರಿಸಿಪ್ಟ್ಸ್ ಏನಿದೆ ಅದರಲ್ಲಿ ನಾನ್‌ಪ್ಲಾನ್‌ನಲ್ಲಿ ೪೧೨.೧೯ ಕೋಟಿ ರೂಪಾಯಿಗಳು ಬಂದಿವೆ. ೧೯೭೫-೭೬ರಲ್ಲಿ ೮೬ ಕೋಟಿ ರೂಪಾಯಿಗಳು ಬರುತ್ತಿದ್ದುದು ಈಗ ೧೯೮೮-೮೯ರಲ್ಲಿ ೪೯೦ ಕೋಟಿ ರೂಪಾಯಿಗಳವರೆಗೆ ಬಂದಿದೆ. ಈ ಹಣವೆಲ್ಲಾ ಎಲ್ಲಿದೆ ? ಮಾತು ಮಾತಿಗೆ ಕೇಂದ್ರದಿಂದ ಹಣವೇ ಬಂದಿಲ್ಲ. ಎಂದು ಹೇಳುತ್ತಾ ಇರುತ್ತೀರಿ ? ನಾನು ಬೇರೆ ಯಾವ ಅಂಕಿ ಅಂಶಗಳನ್ನು ಉದ್ಧರಿಸಿ ಹೇಳುತ್ತಾ ಇಲ್ಲ, ನೀವೇ ಒದಗಿಸಿದ ಎಕಾನಮಿಕ್ ಸರ್ವೆ ಪುಸ್ತಕದಿಂದ ಅದರ ಆಧಾರದ ಮೇಲೆ ಹೇಳುತ್ತಾ ಇದ್ದೇನೆ. ರೋಡ್‌ಫಂಡ್ಸ್‌ನಲ್ಲಿ ಕೂಡ ನಮಗೆ ಕೇಂದ್ರದಿಂದ ಹೆಚ್ಚಿನ ರೀತಿಯಲ್ಲಿ ಹಣ ಬಂದಿದೆ. ಇದೆಲ್ಲಾ ಇದ್ದರೂ ಕೂಡ ನಿಮ್ಮ ಆರ್ಥಿಕ ಪರಿಸ್ಥಿತಿಯು ಇವೊತ್ತು ಹದಗೆಟ್ಟಿದೆ, ವ್ಯವಸ್ಥಿತವಾಗಿ ಯಾವುದೂ ನಡೆಯುತ್ತಾ ಇಲ್ಲ. ನಿಮ್ಮ ಎಕಾಮಿಕ್ ಸರ್ವೆ ಪ್ರಕಾರ ನೋಡಿದರೆ, ಪ್ಲಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್‌ಗಿಂತ ನಾನ್‌ಪ್ಲಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ ಜಾಸ್ತಿಯಾಗಿದೆ. ಆದರ ಪ್ರಕಾರ ೧೯೭೫-೭೬ರಲ್ಲಿ ಡವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ ಶೇಕಡ ೭೨.೧ ಆದರೆ, ನಾನ್‌ಡವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ ಶೇಕಡ ೨೭.೯ ಆಗಿದೆ. ೧೯೮೦-೮೧ರಲ್ಲಿ ೬೮.೫ ಪ್ಲಾನ್ ಎಕ್ಸ್‌ಪೆಂಡೀಚರ್ ಆಗಿದ್ದರೆ ೩೧.೫ ನಾನ್ ಪ್ಲಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ ಆಗಿದೆ. ೧೯೮೧-೮೨ನೇ ಇಸವಿಯಲ್ಲಿ ಪ್ಲಾನ್‌ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ ೭೧.೮೨ ಇದ್ದರೆ ನಾನ್‌ಪ್ಲಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ ೨೮.೨ ಆಗಿದೆ. ೧೯೮೨-೮೩ರಲ್ಲಿ ಪ್ಲಾನ್‌ಡವಲಪ್‌ಮೆಂಟ್‌ಗೆ ೭೦.೯ ಇದ್ದರೆ, ೨೯ ಪರ್ಸೆಂಟ್ ನಾನ್‌ಪ್ಲಾನ್‌ಡವಲಪ್‌ಮೆಂಟ್‌ಗಾಗಿ ೧೯೮೩-೮೪ರಲ್ಲಿ ೬೯.೨ ಡೆವಲಪ್‌ಮೆಂಟ್‌ಗಾಗಿ ಇದ್ದರೆ ನಾನ್‌ಡೆವಲಪ್‌ಮೆಂಟ್ ೩೧ ಪರ್ಸೆಂಟ್ ಆಗಿದೆ. ೧೯೮೪-೮೫ರಲ್ಲಿ ಪ್ಲಾನ್‌ಡವಲಪ್‌ಮೆಂಟ್‌ಗಾಗಿ ೬೪ ಪರ್ಸೆಂಟ್‌ನಷ್ಟು ಆದರೆ, ನಾನ್‌ಡವಲಪ್‌ಮೆಂಟ್‌ಗಾಗಿ ೩೬ ಪರ್ಸೆಂಟ್‌ನಷ್ಟು ಆಗಿದೆ. ೧೯೮೬-೮೭ರಲ್ಲಿ ೭೨ಪರ್ಸೆಂಟ್ ಡೆವಲಪ್‌ಮೆಂಟ್‌ಗಾಗಿ ಆಗಿದ್ದರೆ, ನಾನ್‌ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್‌ಗಾಗಿ ೨೭.೮ರಷ್ಟು ಆಗಿದೆ. ೧೯೮೭-೮೮ರಲ್ಲಿ ಪ್ಲಾನ್‌ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್‌ಗೆ ೭೫.೦೬ ಆಗಿದ್ದರೆ ನಾನ್‌ಪ್ಲಾನ್‌ಗೆ ೨೯.೪ರಷ್ಟು ಆಗಿದೆ. ೧೯೮೮-೮೯ರಲ್ಲಿ ೬೭.೮ ಪ್ಲಾನ್ ಡೆವಲಪ್‌ಮೆಂಟ್‌ಗೆ ಆಗಿದ್ದರೆ, ನಾನ್‌ಪ್ಲಾನ್ ಡೆವಲಪ್‌ಮೆಂಟ್‌ಗಾಗಿ ೩೨.೨ ಪರ್ಸೆಂಟ್‌ನಷ್ಟು ಆಗಿದೆ. ಹೀಗೆ ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್‌ಗೆ ಹೆಚ್ಚು ಖರ್ಚು ಮಾಡಿದ್ದೀರಿ. ಎಲ್ಲಾ ಕಡೆಗಳಲ್ಲಿ ಬೋರ್ಡ್ ಮಾಡಿ, ಚೇರ್ಮನ್‌ಗಳನ್ನು ನೇಮಕ ಮಾಡಿದ್ದೀರಿ. ಇನ್ನೂ ಬೇಕಾದಷ್ಟು ಖರ್ಚುಗಳು ಆಗಿವೆ. ಹೀಗೆ ಪ್ಲಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್‌ಗೂ ನಾನ್ ಪ್ಲಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್‌ಗೂ ಹೋಲಿಕೆ ಮಾಡಿದರೆ ೧೯೮೩ರಿಂದ ಈಗಿನ ಸರಕಾರ ನಾನ್‌ಪ್ಲಾನ್ ಡೆವಲಪ್‌ಮೆಂಟ್‌ಗಾಗಿ ಹೆಚ್ಚಿನ ರೀತಿಯಲ್ಲಿ ಖರ್ಚು ಮಾಡಿದ್ದನ್ನು ಮನಗಾಣಬಹುದು ಬಡವರಿಗಾಗಿ ನಿಮ್ಮಿಂದ

ಸಾಕಷ್ಟು ಕೆಲಸಗಳು ಆಗಬೇಕಾಗಿದೆ. ಬಡಜನರು ಅದನ್ನು ನಿಮ್ಮಿಂದ ನಿರೀಕ್ಷಿಸುತ್ತಿದ್ದಾರೆ, ಸೈಟ್ ಇಲ್ಲದವರಿಗೆ ಸೈಟ್‌ಗಳ ಹಂಚಿಕೆಯಾಗಬೇಕಾಗಿದೆ, ಮನೆಗಳನ್ನು ಬಡವರಿಗಾಗಿ ಕಟ್ಟಿಸಿಕೊಡಬೇಕಾಗಿದೆ. ಎನ್‌ಆರ್‌ಇಪಿಯಲ್ಲಿ ನಮ್ಮ ಶೇರು ಹಣ ಕೊಡತಕ್ಕಂಥದ್ದು ಆಗಿಲ್ಲ, ಇವೊತ್ತು ಎನ್‌ಆರ್‌ಇಪಿಯಲ್ಲಿ ೫೦ ಪರ್‌ಸೆಂಟ್ ಸೆಂಟ್ರಲ್‌ಗವರ್ನಮೆಂಟ್ ಮತ್ತು ೫೦ ಪರ್‌ಸೆಂಟ್ ಸ್ಟೇಟ್ ಗವರ್ನ್‌ಮೆಂಟ್ ಆದರೆ ಈಗ ಕೇಂದ್ರದವರು ೭೫ ಪರ್‌ಸೆಂಟ್‌ನಷ್ಟು ಹಣ ಕೊಡುತ್ತಾ ಇದ್ದಾರೆ. ಇದರಿಂದ ಅನುಕೂಲವಾಗಿದೆ ಅದೇರೀತಿಯಲ್ಲಿ ಎನ್‌ಆರ್‌ಇಪಿ. ಆರ್‌ಎಲ್‌ಇಜಿಪಿಯಿಂದ ಕೂಡ ೧೦೦ ಪರ್‌ಸೆಂಟ್‌ನಷ್ಟು ಹಣ ಬರುತ್ತಾ ಇದೆ. ಆದಕ್ಕಾಗಿ ಅಲ್ಲಿ ಒಂದು ರಿವ್ಯೂ ಸಮಿತಿ ಇದೆ. ಮುಖ್ಯಮಂತ್ರಿಗಳು ಅಲ್ಲಿ ಮೂರು ತಿಂಗಳಿಗೊಮ್ಮೆ ರಿವ್ಯೂ ಮಾಡಬೇಕೆಂದು ನಿಯಮ ಇದೆ. ಇವರು ಎಷ್ಟು ಭಾರಿ ರಿವ್ಯೂ ಮಾಡಿದ್ದಾರೆ ? ಈ ಕಾರ್ಯಕ್ರಮಗಳು ಎಷ್ಟರಮಟ್ಟಿಗೆ ಕಾರ್ಯಗತವಾಗಿದೆ ಎಂಬ ಬಗ್ಗೆ ಅಲ್ಲಿ ರಿವ್ಯೂ ಮಾಡಬೇಕಾಗುತ್ತದೆ, ಅದನ್ನು ಇವರು ಸರಿಯಾಗಿ ಮಾಡುತ್ತಾ ಇಲ್ಲ. ಎಂದು ಹೇಳಬೇಕಾಗುತ್ತದೆ. ಇವೊತ್ತು ನಮ್ಮ ಡೆವಲಪ್‌ಮೆಂಟ್ ಕಮಿಶನರ್ ಆಗಲಿ ರೂರಲ್ ಡೆವಲಪ್‌ಮೆಂಟ್ ಇಲಾಖೆಗೆ ಸಂಬಂಧಪಟ್ಟ ಮಂತ್ರಿಗಳೇ ಆಗಿರಲಿ, ಜಿಲ್ಲಾ ಪರಿಷತ್ತಿಗೆ ಕೇಂದ್ರದ ಹಣ ಏನು ಬರುತ್ತದೆ ಅದನ್ನು ಖರ್ಚು ಮಾಡಿದರೆ ಅದರಿಂದ ಸಾಕಷ್ಟು ಜನರಿಗೆ ಕೆಲಸ ಸಿಗುತ್ತದೆ. ಆದ್ದರಿಂದ ಸಹಾಯ ಆಗುತ್ತದೆ. ಇಂಥ ಹಣವನ್ನು ಸೂಕ್ತವಾಗಿ ಉಪಯೋಗಿಸಿಲ್ಲವಾದ ಕಾರಣ ಜನರಂ ತೊಂದರೆಗೆ ಒಳಗಾಗಿದ್ದಾರಲ್ಲದೆ ಆ ಹಣವೂ ಕೂಡ ಲ್ಯಾಪ್ಸ್ ಆಗಿದೆ. ಗುಲ್ಬರ್ಗ ಜಿಲ್ಲೆಯಲ್ಲಿ ಎನ್‌ಆರ್‌ಇಪಿ, ಆರ್‌ಎಲ್‌ಇಜಿಪಿ ಸಂಬಂತಾದವುಗಳಿಗೆ ಮೂರುವರೆಕೋಟಿಗಿಂತಲೂ ಹೆಚ್ಚು ಖರ್ಚು ಮಾಡತಕ್ಕಂಥಾದ್ದರಲ್ಲಿ ೧.೬೭ ಲಕ್ಷ ರೂಪಾಯಿಗಳು ಲ್ಯಾಪ್ಸ್ ಆಗಿವೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಲಕ್ಷ್ಮೀಸಾಗರ್‌ರವರಿಗೆ ಈ ಕಡೆ ಗಮನವೇ ಇಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಹೇಳಿ ಸ್ವಾಮಿ, ಶ್ರೀಮಾನ್ ಧರ್ಮಸಿಂಗ್‌ರವರು ಮೊತ್ತಮೊದಲ ಬಾರಿಗೆ ಬಜೆಟ್ ಮೇಲೆ ಮಾತಾಡುತ್ತಿದ್ದಾರೆ.

ಶ್ರೀ ಧರ್ಮಸಿಂಗ್.—ಇರಬಹುದು, ಬಜೆಟ್ ಮೇಲೆ ಇದೇ ಪ್ರಥಮ ಬಾರಿ ಮಾತನಾಡುತಿದ್ದೇನೆ ಅದಕ್ಕೇ ನಾನು ಅಂಕಿಅಂಶಗಳನ್ನು ಉಲ್ಲೇಖಮಾಡಿ ಹೇಳುತ್ತಿದ್ದೇನೆ, ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ ಏನಿದೆ ಅದಕ್ಕಿಂತ ನಾನ್‌ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರೇ ಜಾಸ್ತಿಯಾಗಿದೆ. ಕೇಂದ್ರದಿಂದ ಏನು ಹಣ ಬಂದಿದೆ ಅದರ ಬಗ್ಗೆ ಮಾನ್ಯ ಆರ್ಥಿಕ ಮಂತ್ರಿಗಳೂ ಆಗಿರುವ ಮುಖ್ಯಮಂತ್ರಿಗಳು ರಾಜ್ಯದ ಆರ್ಥಿಕ ವ್ಯವಸ್ಥೆಯನ್ನು ಹತೋಟಿಯಲ್ಲಿಟುಕೊಂಡು ಜನರ ಕಲ್ಯಾಣ ಕಾರ್ಯಕ್ರಮಗಳ ಕೆಲಸ ಮಾಡುವ ಯೋಚನೆ ಮಾಡಬೇಕಾಗುತ್ತದೆ. ಆದರೆ ಇದರಲ್ಲಿ ಅವರು ವಿಫಲರಾಗಿದ್ದಾರೆ ಅವರಿಗೆ ಇದಕ್ಕೆಲ್ಲ ಸಮಯವೇ ಸಿಗುತ್ತಿಲ್ಲ, ಕಳೆದ ೬ ವರ್ಷಗಳಲ್ಲಿ ಏನು ಪ್ರಗತಿಯಾಗಬೇಕಾಗಿತ್ತೋ ಅದು ಆಗಿಲ್ಲ. ಹೌಸಿಂಗ್ ಮತ್ತು ಅರ್ಬನ್ ಇಲಾಖೆಗಳ ಬೇಡಿಕೆಗಳು ಬಂದಾಗ ವಿವರವಾಗಿ ಹೇಳುವೆನು. ಇಲ್ಲಿ ನಸೀರ್ ಅವಾಸ್ ಯೋಜನೆ ಉಲ್ಲೇಖಮಾಡಿದ್ದಾರೆ. ಪ್ರತಿ ತಾಲ್ಲೂಕಿನಲ್ಲಿ ೧೦೦ ಮನೆಗಳನ್ನು ಕಟ್ಟಿಸುತ್ತೇವೆಂದಿದ್ದಾರೆ, ನನಗನ್ನಿಸುತ್ತದೆ, ಒಂದೊಂದು ತಾಲ್ಲೂಕಿನಲ್ಲಿ ೧೦೦ ಹಳ್ಳಿಗಳಿವೆ, ಅಂಥಾ ಕಡೆ ೧೦೦ ಮನೆಗಳು ಸಾಕೇ ? ನಾನು ವಸತಿಖಾತೆಯ ಮಂತ್ರಿಯಾಗಿದ್ದಾಗ ೮೨-೮೫ ರಲ್ಲಿ ೧೦೦೦೦ ಮನೆಗಳನ್ನು ಕಟ್ಟಿಸಿದ್ದೆವು. ಹುಡ್ಕೊ ಸಂಸ್ಥೆಗೆ ಮನೆ ಕಟ್ಟಿದ ಹಣ ಕೊಡಲು ಇಲ್ಲದಿದ್ದಾಗ ಕಂಟೆನ್‌ಜೆನ್ಸಿ ಫಂಡಿನಿಂದ ಹಣ ಕಟ್ಟಿದ್ದೇವೆ. ಸೈಟ್‌ಲೆಸ್ ಜನರಿಗೆ ೪೫ ಸಾವಿರ ನಿವೇಶನ ಕೊಡುತ್ತೇವೆಂದು ಹೇಳಿದ್ದಾರೆ. You have not conducted the demand survey. ತಮ್ಮ ಸರ್ಕಾರ ಅಧಿಕಾರಕ್ಕೆ ಬರುವ ಮುಂಚೆ ೧೧,೫೫,೦೦೦ ಸೈಟುಗಳನ್ನು ನಾವು ಕೊಟ್ಟಿದ್ದೆವು. ಆದರೆ ತಾವು ಇಡೀ ೬ ವರ್ಷಗಳ ಅವಧಿಯಲ್ಲಿ ಬರೀ ೨ ಲಕ್ಷ ಸೈಟ್ ಕೊಟ್ಟಿದ್ದೀರಿ. ಇದರಲ್ಲಿ ನೀವು ಏಕೆ ವಿಫಲರಾದಿರಿ ಎಂದರೆ ಬಡವರ ಬಗ್ಗೆ ನಿರ್ಗತಿಕರ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳಲು ನಿಮಗೆ ಕಮಿಟ್‌ಮೆಂಟ್ ಬೇಕಾಗುತ್ತದೆ, ಆ ಮನೋಭಾವನೆ ಬೇಕಾಗುತ್ತದೆ. ಅಧಿಕಾರಿಗಳಿಂದ ಕೆಲಸ ತೆಗೆಯುವ ಮನಸ್ಸು ನಿಮಗೆ ಬೇಕಾಗುತ್ತದೆ ನೀವು ಅವರ ಬಗ್ಗೆ ಹೆಚ್ಚಿನ ಗಮನಕೊಟ್ಟಿಲ್ಲ. ನೀವು ಎಷ್ಟು ಸೈಟ್ಸ್ ಮನೆಗಳನ್ನು ಕಟ್ಟಿಸಿಕೊಟ್ಟಿದ್ದೀರಿ ಹಾಗೇಯೇ ಹಿಂದಿನ ಸಾಧನೆಯನ್ನೂ ಸಭೆ ಮುಂದೆ ಇಡಿ, ಇವೆಲ್ಲದರ ಬಗ್ಗೆ ಒಂದು ವೈಟ್‌ಪೇಪರ್ ಹೊರಡಿಸಿ. ನಿಮ್ಮ ಮಾಜಿ ಮುಖ್ಯಮಂತ್ರಿಗಳು ಈ ಬಗ್ಗೆ ಇಡೀ ದೇಶದಲ್ಲಿ ಕರ್ನಾಟಕ ಒಂದನೇ ಸ್ಥಾನದಲ್ಲಿ ಇದೆ ಎಂದು ಹೇಳಿಕೊಂಡಿರುವುದು ಸತ್ಯಕ್ಕೆ ದೂರವಾದ ಮಾತು. ಸರ್ಕಾರಕ್ಕೆ ಕಾಳಜಿ ಇಲ್ಲ ಎಂದು ನಾನು ಹೇಳಬೇಕಾಗಿದೆ. ಕೊನೆಯದಾಗಿ ಒಂದು ಮಹತ್ವದ ವಿಚಾರವೇನೆಂದರೆ ಡಾ॥ ಪುಷ್ಪಾವತಿಯವರು ನಮ್ಮ ರಾಯಚೂರು ಜಿಲ್ಲೆಯಿಂದ ಬಂದವರು ರಾಯಚೂರು ಗುಲ್ಬರ್ಗ ಬಳ್ಳಾರಿ ಮತ್ತು ಬೀದರ್ ಸೇರಿಸಿ ಒಂದು ಡೆವಲಪ್‌ಮೆಂಟ್ ಬೋರ್ಡ್ ಸ್ಥಾಪನೆ ಮಾಡು

ತ್ತೇವೆಂದಿದ್ದೀರಿ. ನಮ್ಮ ಭಾಗವೆಲ್ಲ ೧೯೫೬ ರಲ್ಲಿ ಕರ್ನಾಟಕಕ್ಕೆ ಸೇರಿಕೊಂಡಿತು. ಮತ್ತು ಮದ್ರಾಸ್ ಪಕ್ಕದಲ್ಲಿರುವ ಬಳ್ಳಾರಿ ಪ್ರದೇಶ ಏನಿದೆ, ಆ ಭಾಗದ ಜನರಿಗೆ ವಿಶೇಷವಾಗಿ ವ್ಯವಸ್ಥೆ ಮಾಡಿಕೊಡಬೇಕೆಂಬ ದೃಷ್ಟಿಯಿಂದ ೧೯೮೦ರಲ್ಲಿ ಲೋಕಸಭಾ ಚುನಾವಣೆ ನಡೆದಂತಹ ಹೊತ್ತಿನಲ್ಲಿ ಆ ಭಾಗದ ಜನರಿಗೆ ಆಶ್ವಾಸನೆಯನ್ನು ಕೊಟ್ಟಿದ್ದೆವು. ಗುಂಡೂರಾವ್‌ರವರು ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದು ನಾನು ಮತ್ತು ಖರ್ಗೆಯವರು, ಮಾಣಿಕ್‌ರಾವ್ ಪಾಟೀಲ್, ಕಸಬೆಯವರು ಆಗ ಮಂತ್ರಿಗಳಾಗಿ ಇದ್ದೆವು. ಆಗ ಆ ಪ್ರದೇಶದಲ್ಲಿರತಕ್ಕಂತಹ ಶಾಸಕರು ಮತ್ತು ನಾವು ಎಲ್ಲರೂ ಒಟ್ಟಿಗೆ ಸೇರಿ ತೆಲಂಗಾಣಾ ಡೆವಲಪ್‌ಮೆಂಟ್ ಬೋರ್ಡ್ ರೀತಿಯಲ್ಲಿ ನಮ್ಮಲ್ಲಿ ಡೆವಲಪ್‌ಮೆಂಟ್ ಬೋರ್ಡ್ ಒಂದನ್ನು ವೈಜ್ಞಾನಿಕವಾಗಿ ರಚನೆ ಮಾಡಬೇಕೆಂದು ಪ್ರಯತ್ನ ಮಾಡಿದೆವು. ಚುನಾವಣೆ ಬಂದಿದೆ ಎಂದು ಅದನ್ನು ಮಾಡಲಿಲ್ಲ. ವೈಜ್ಞಾನಿಕವಾದಂತಹ ವರದಿಯನ್ನು ಸರಕಾರಕ್ಕೆ ಸಲ್ಲಿಸಬೇಕೆಂದು ನನ್ನ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿ ಎಲ್ಲ ವಿವರವಾದಂತಹ ಅಂಕಿ ಅಂಶವನ್ನು ಕೊಡಬೇಕೆಂಬ ದೃಷ್ಟಿಯಿಂದ ವಿವರವಾದ ವರದಿಯನ್ನು ಕೊಟ್ಟೆವು. ಅದರ ಪ್ರತಿ ವಾಚನಾಲಯದಲ್ಲಿ ಸರಕಾರದಲ್ಲಿ, ಮತ್ತು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೂಡ ಇದೆ. ೧೯೮೦ರಲ್ಲಿ ಎಲ್ಲಾ ಶಾಸಕರನ್ನು ಒಡಗೂಡಿದ ಸಮಿತಿಯನ್ನು ಅಂದರೆ ವಿಶೇಷವಾದಂತಹ ಸಮಿತಿಯನ್ನ ರಚಿಸಿದ ನಂತರ ತೆಲಂಗಾಣಾ ಡೆವಲಪ್‌ಮೆಂಟ್ ಬೋರ್ಡ್ ಯಾವ ಮಾದರಿಯಲ್ಲಿ ಆಯಿತು ಎಂಬುದರ ಬಗ್ಗೆ ವಿಚಾರ ಮಾಡಲು ನಾವು ಅಲ್ಲಿಗೆ ಭೇಟಿ ಕೊಟ್ಟೆವು. ಅವರಿಗೆ ಕೇಂದ್ರ ಸರಕಾರದಿಂದ ನೂರು ಕೋಟಿ ರೂಪಾಯಿ ಸಿಕ್ಕಿದೆಲ್ಲಾ ಡಾ॥ಚನ್ನಾರೆಡ್ಡಿಯವರು ಆಗಿನ ಮುಖ್ಯ ಮಂತ್ರಿಗಳಾಗಿದ್ದು ಅದರ ಬಗ್ಗೆ ಹೆಚ್ಚಿನ ರೀತಿಯಲ್ಲಿ ಗಮನಹರಿಸಿ ಆಭಾಗದ ಜನರಿಗೆ ಅನ್ಯಾಯವಾಗಿದೆ. ಅದನ್ನು ಸರಿಪಡಿಸಬೇಕೆಂಬ ದೃಷ್ಟಿಯಿಂದ ಮಾಡಿದರು ತೆಲಂಗಾಣಾ ಮೂವ್‌ಮೆಂಟ್ ಆರು ತಿಂಗಳವರೆಗೆ ನಡೆಯಿತು. ಮಹಾರಾಷ್ಟ್ರದಲ್ಲಿ ವಿದರ್ಭ ಡೆವಲಪ್‌ಮೆಂಟ್ ಬೋರ್ಡ್ ಎಂದು ಇದೆ, ವೆಸ್ಟ್ ಬೆಂಗಾಲ್‌ನಲ್ಲಿ ಸುಬರ್‌ಬನ್ ಡೆವಲಪ್‌ಮೆಂಟ್ ಬೋರ್ಡ್ ಎಂದು ಇದೆ. ನಮ್ಮಲ್ಲಿ ವಿಶೇಷ ಸಮಿತಿಯೊಂದು ಏನು ರಚನೆಯಾಗಿತ್ತು ಅದರಲ್ಲಿ ನಾವೆಲ್ಲಾ ಅಂದರೆ ಖರ್ಗೆಯವರೂ ಸೇರಿದಂತೆ ೯ ಜನರ ಸಮಿತಿಯು ಈ ಎಲ್ಲಾ ಪ್ರದೇಶಕ್ಕೆ ಭೇಟಿ ಕೊಟ್ಟೆವು. ಆಗ ಆಂಧ್ರದಲ್ಲಿ ಅಂಜಯ್ಯನವರು ಮುಖ್ಯ ಮಂತ್ರಿಗಳಾಗಿದ್ದರು ಅವರ ಜೊತೆಯಲ್ಲಿ ಮತ್ತು ಅಲ್ಲಿನ ಪ್ಲಾನಿಂಗ್ ಕಾರ್ಯದರ್ಶಿಯವರ ಜೊತೆಯಲ್ಲಿ ಸಮಾಲೋಚನೆ ಮಾಡಿ ಯಾವ ಆಧಾರದ ಮೇಲೆ ತೆಲಂಗಾಣಾ ಡೆವಲಪ್‌ಮೆಂಟ್ ಬೋರ್ಡ್ ಅನ್ನು ಮಾಡಿದ್ದೀರಿ ಅದಕ್ಕೆ ಎಷ್ಟು ಹಣವನ್ನು ಇಟ್ಟಿದ್ದೀರಿ ಜನರಿಗೆ ಲಾಭದಾಯಕವಾಗುವಂತಹ ಯಾವ್ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ ಎಂಬುದರ ಬಗ್ಗೆ ಅವರಿಂದ ನಾವು ಮಾಹಿತಿಯನ್ನು ಪಡೆದೆವು. ನಂತರ ವೆಸ್ಟ್‌ಬೆಂಗಾಲ್‌ಗೆ ಹೋಗಿ ಅಲ್ಲಿ ಆಗ ಮಂತ್ರಿಗಳಾಗಿದ್ದಂತಹ ಚೌದರಿಯವರ ಜೊತೆಯಲ್ಲಿ ಮತ್ತು ಪ್ಲಾನಿಂಗ್ ಕಮೀಷನರ್‌ರವರ ಜೊತೆಯಲ್ಲಿ ಹಾಗೂ ಅಲ್ಲಿನ ಬೋರ್ಡಿನ ಸದಸ್ಯರ ಜೊತೆಯಲ್ಲಿ ಸಮಾಲೋಚನೆ ಮಾಡಿದೆವು. ಎಸ್. ಬಿ. ಚವಾಣ್‌ರವರು ಆಗ ಪ್ಲಾನಿಂಗ್ ಮಂತ್ರಿಗಳಾಗಿದ್ದರು. ಅವರ ಜೊತೆಯಲ್ಲಿ ಮತ್ತು ಪ್ರಧಾನ ಮಂತ್ರಿಗಳ ಜೊತೆಯಲ್ಲಿ ಕೂಡ ಸಮಾಲೋಚನೆ ಮಾಡಿ ಪೂರ್ಣವಾದಂತಹ ವರದಿಯನ್ನು ಪುಸ್ತಕದಲ್ಲಿ ಪ್ರಿಂಟ್ ಮಾಡಿಸಿದ್ದೇವೆ. ಬಸವನಗೌಡ ಅವರು ಆಗ ಜಂಟಿ ಕಾರ್ಯದರ್ಶಿಯಾಗಿದ್ದು ಬಾಲಸುಬ್ರಮಣ್ಯಂ ಅವರು ನಮ್ಮ ಕಮಿಟಿಯ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದಾರೆ. ಹೈದರಾಬಾದ್ ಕರ್ನಾಟಕಕ್ಕೆ ಸಂಬಂಧಪಟ್ಟಂತೆ ಯಾವ ಯಾವ ಮಾದರಿಯಲ್ಲಿ ಡೆವಲಪ್‌ಮೆಂಟ್ ಬೋರ್ಡ್ ಅನ್ನು ಮಾಡಬೇಕೆಂದು ವಿಚಾರ ಮಾಡಿ ಆ ವರದಿಯಲ್ಲಿ ಸೇರಿಸಿದ್ದೇವೆ ೧೯೮೨ ರಲ್ಲಿ ಗುಲಬರ್ಗಾದಲ್ಲಿ ಮಂತ್ರಿಮಂಡಲದ ಸಭೆ ಸೇರಿದಾಗ ಆಗಿನ ಅರ್ಥ ಮಂತ್ರಿಗಳಾಗಿದ್ದ ಶ್ರೀ ಮೊಯಿಲಿಯವರು ಕೂಡ ಆ ಭಾಗದ ಜನರಿಗೆ ಅನುಕೂಲ ಮಾಡುವ ಸಲುವಾಗಿ ಡೆವಲಪ್‌ಮೆಂಟ್ ಬೋರ್ಡ್ ಆಗಬೇಕೆಂದು ಹೇಳಿದರು. ೩೫೦ಕೋಟಿ ರೂಪಾಯಿಯ ಪ್ಲಾನ್ ತಯಾರಾಗಿದೆ. ಈ ಭಾಗಕ್ಕೆ ಸರಿಸಮವಾಗಿ ಆ ಭಾಗ ಬರಬೇಕಾದರೆ ಹತ್ತು ವರ್ಷದ ಅವಧಿಯಲ್ಲಿ ೩೫೦ ಕೋಟಿ ರೂಪಾಯಿಯನ್ನು ಆ ಭಾಗಕ್ಕೆ ಖರ್ಚು ಮಾಡಬೇಕೆಂದು ಆಗ ನಾವು ಒತ್ತಾಯವನ್ನು ಮಾಡಿದ್ದೆವು. ಆ ಸರಕಾರ ಮಾಡಿದ್ದು ಅದನ್ನು ಹಾಗೇ ಕಸದ ಬುಟ್ಟಿಗೆ ಹಾಕಬೇಕೆಂದುಅಲ್ಲ. ಪ್ರಜಾಪ್ರಭುತ್ವದಲ್ಲಿ ಆಗಿನ ಪಾಪ್ಯುಲರ್ ಸರಕಾರ ಆರಿಸಿ ಬಂದು ಆ ಭಾಗದ ಜನರಿಗೆ ಅನುಕೂಲ ಮಾಡಬೇಕೆನ್ನುವ ದೃಷ್ಟಿಯಿಂದ ಇಂತಹ ಒಂದು ನಿರ್ಣಯವನ್ನು ತೆಗೆದುಕೊಂಡಿದೆ. ಅದನ್ನು ನಿಮ್ಮ ಸರಕಾರ ಜಾರಿಗೆ ತರಬೇಕು. ೧೯೮೨ರಲ್ಲಿ ಮಾನ್ಯ ಮೊಯಿಲಿಯವರು ಇದಕ್ಕೆ ಹತ್ತು ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಿದ್ದಾರೆ. ಆ ಭಾಗಕ್ಕೆ ಡೆವಲಪ್‌ಮೆಂಟ್ ಬೋರ್ಡ್ ಅನ್ನು ಮಾಡಬೇಕು ವೈಜ್ಞಾನಿಕವಾದಂತಹ ಕಾರ್ಯಕ್ರಮವನ್ನು ಜಾರಿಗೆ ತರಬೇಕು ಎಂದು ನಾವು ಏನು ಹಿಂದೆ ವರದಿಯನ್ನು ಕೊಟ್ಟಿದ್ದೇವೆ, ಆ ವರದಿಯ ಪ್ರಕಾರ ಬೋರ್ಡ್ ಅನ್ನು ರಚನೆ ಮಾಡಬೇಕು. ಸುಮ್ಮನೆ ೨ ಕೋಟಿಯನ್ನು ಕೊಟ್ಟರೆ ಏನಾಗುತ್ತದೆ. ಕರ್ನಾಟಕ ರಾಜ್ಯದ ಆ ಭಾಗದಲ್ಲಿರತಕ್ಕಂತಹ

ಳ ಜಿಲ್ಲೆಗಳಿಗೆ ಅದು ಏನೂ ಸಾಕಾಗುವುದಿಲ್ಲ. ಈಗಿನ ಮುಖ್ಯಮಂತ್ರಿಗಳು ಪ್ಲಾನಿಂಗ್ ಮತ್ತು ರೆವಿನ್ಯೂ ಮಂತ್ರಿಗಳಾಗಿದ್ದಾಗ ಎಲ್ಲಾ ಶಾಸಕರು ಕೂಡಿ ಇದರ ಬಗ್ಗೆ ಅವರನ್ನು ಭೇಟಿ ಮಾಡಿದಾಗ ಮಾಡುತ್ತೇನೆಂದು ಆಶ್ವಾಸನೆಯನ್ನು ಕೊಟ್ಟಿದ್ದರು. ನಾವು ಕೊಟ್ಟಂತಹ ವರದಿಯ ಮೇಲೆ ಡೆವಲಪ್‌ಮೆಂಟ್ ಬೋರ್ಡ್ ಆಗತಕ್ಕಂಥಾದ್ದು ಅತ್ಯಗತ್ಯ ಅವಶ್ಯಕತೆ ಇದೆ. ಅವರು ಕೂಡ ರೆಕಮಂಡ್ ಮಾಡಿದ್ದಾರೆ. ಬ್ಯಾಕ್‌ವರ್ಡ್ ಏರಿಯಾವನ್ನು ಡೆವಲಪ್‌ಮೆಂಟ್ ಮಾಡಲು ನಾವು ವರದಿ ಕೊಟ್ಟಿದ್ದೇವೆ. ೩೫೦ ಕೋಟಿ ರೂಪಾಯಿಯ ಪ್ಲಾನ್ ಇದೆ. ಇದಕ್ಕೆ ವರ್ಷಕ್ಕೆ ಇಷ್ಟಿಷ್ಟು ದುಡ್ಡನ್ನು ಕೊಡುತ್ತೇವೆಂದು ಉಲ್ಲೇಖವನ್ನಾದರೂ ಕೂಡ ಮಾಡಬೇಕು. ಅದರ ಆಧಾರದ ಮೇಲೆ ಇವತ್ತು ಕೆಲಸಕಾರ್ಯಗಳು ಆಗಬೇಕಾಗುತ್ತದೆ ಆದರೆ ಇದು ಆರೇಳು ವರ್ಷಗಳ ಹಿಂದೆ ಕೊಟ್ಟಂಥ ಒಂದು ವರದಿ, ಇವತ್ತು ಆ ಭಾಗದ ಜನರಿಗೆ ಡೆವಲಪ್‌ಮೆಂಟ್ ಬೋರ್ಡ್ ಆಗಬೇಕಾದರೆ ಈ ಹೌಸ್‌ನಲ್ಲಿ ಬಿಲ್ ತರಬೇಕಾಗುತ್ತದೆ. ಆ ಬಿಲ್ ಪಾಸ್ ಆಗಬೇಕಾಗುತ್ತದೆ. ಅದರ ಆಧಾರದ ಮೇಲೆ ಕನಿಷ್ಟ ಪಕ್ಷ ಹತ್ತು ವರ್ಷಕ್ಕೆ ಆರು ನೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಇವತ್ತು ಆ ಭಾಗಕ್ಕೆ ಒಳ್ಳೆಯ ಕೆಲಸ ಕಾರ್ಯಗಳು ಆಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು.—ಆಯಿತು ಮುಗಿಸಿ. ನಿಮಗೆ ೧೦ ನಿಮಿಷ ಅವಕಾಶವನ್ನು ಕೊಟ್ಟಿದ್ದೇನೆ.

ಶ್ರೀ ಧರ್ಮಸಿಂಗ್.—ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಜೆಟ್ ಭಾಷಣದ ಬಗ್ಗೆ ಉತ್ತರವನ್ನು ಕೊಡುವ ಕಾಲಕ್ಕೆ ಡೆವಲಪ್‌ಮೆಂಟ್ ಬೋರ್ಡ್ ಆಗಬೇಕು ಎನ್ನುವ ಬಗ್ಗೆ he said, we are going to set up. We have not decided, ಎಂದು ಹೇಳಲಿ. ಇದನ್ನು ಸನ್ಮಾನ್ಯ ಲಕ್ಷ್ಮೀಸಾಗರ್‌ರವರೇ ಈ ಪದವನ್ನು ಬಳಸಿರಬಹುದು. ಇದನ್ನು ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿ. ಇದನ್ನು ಯಾವ ರೀತಿಯಾಗಿ ಕಾರ್ಯಗತ ಮಾಡುತ್ತೇವೆ ಎನ್ನತಕ್ಕಂಥದನ್ನು ಈ ಸಭೆಗೆ ಅವರು ವಿವರವಾಗಿ ಹೇಳಬೇಕು ಎಂದು ತಮ್ಮ ಮುಖಾಂತರ ಅವರಿಗೆ ತಿಳಿಸುತ್ತೇನೆ. ಇಷ್ಟು ಕಾಲಾವಕಾಶವನ್ನು ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಕೆ. ಕುಮಾರಸ್ವಾಮಿ (ಬೇಲೂರು).—ಮಾನ್ಯ ಅಧ್ಯಕ್ಷರೇ, ಈ ಬಜೆಟ್ ಮೇಲೆ ಭಾಷಣವನ್ನು ಮಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ತಾವು ಈ ಮೊದಲು ಒಂದು ಮಾತನ್ನು ಹೇಳಿದ್ದೀರಿ. ಹೊಸಬರು ಮತ್ತು ಯುವಕರಿಗೆ ಹೆಚ್ಚು ಅವಕಾಶವನ್ನು ಕೊಡುತ್ತೇನೆ ಎಂದು ತಾವು ಹೇಳಿದ್ದೀರಿ. ಯಾವುದೇ ವಿಷಯದ ಬಗ್ಗೆ ಇಲ್ಲಿ ಚರ್ಚೆಗೆ ಬಂದಾಗ ತಮ್ಮ ಕಣ್ಣು ಮುಂದೆ ಕುಳಿತಿರುವವರ ಮೇಲೆಯೇ ಹೆಚ್ಚಿನ ಗಮನ ವಿರುತ್ತದೆ ಎಂದು ಕಾಣಿಸುತ್ತದೆ. ನಿಮಗೆ ಹೊಸಬರು ಮತ್ತು ಯುವಕರಲ್ಲಿ ವಿಶ್ವಾಸ ಇಲ್ಲ ಎಂದು ಕಾಣುತ್ತದೆ.

ಅಧ್ಯಕ್ಷರು.—ಇದರಲ್ಲಿ ವಿಶ್ವಾಸ ಇಲ್ಲ ಎನ್ನುವುದೇನೂ ಇಲ್ಲ. ನಿಮ್ಮ ಮುಖಂಡರುಗಳ ಹತ್ತಿರ ಅವಕಾಶವನ್ನು ಕೊಡಿ ಎಂದು ಕೇಳಿಕೊಳ್ಳಿ. ನೀವು ಪಾರ್ಟಿ ಮುಖಂಡರನ್ನು ಮುಂದೆ ಬಿಟ್ಟು ಹಿಂದೆ ಕುಳಿತಿರುತ್ತೀರಿ. ನಿಮ್ಮ ಲೆಜಿಸ್ಲೇಚರ್ ಪಾರ್ಟಿಯಲ್ಲಿ ನಾವು ಜೂನಿಯರ್ ಇದ್ದೇವೆ. ನಮಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ, ತಾವುಗಳು ಸೀನಿಯರ್ ಇದ್ದೀರಿ, ನಮಗೆ ಹೆಚ್ಚು ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು ನೀವು ಅಲ್ಲಿ ಕೇಳಿಕೊಳ್ಳಿ.

ಶ್ರೀ ಹೆಚ್. ಕೆ. ಕುಮಾರಸ್ವಾಮಿ.—ಬಹಳ ಅಪರೂಪಕ್ಕೆ ನನಗೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈ ಬಜೆಟ್ ಮೇಲೆ ನಾನು ಕೆಲವು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರತಕ್ಕಂಥ ಬಜೆಟ್ ಒಂದು ಸಾಂಪ್ರದಾಯಿಕವಾಗಿರುವ ಆಯವ್ಯಯ ಎಂದು ನಾನು ಅಭಿಪ್ರಾಯಪಡುತ್ತೇನೆ. ಇದು ಚುನಾವಣಾ ವರ್ಷ ಕೂಡಾ ಆಗಿರುವುದರಿಂದ ಜನಸಾಮಾನ್ಯರು ಮತ್ತು ರೈತರು ಅನೇಕ ರೀತಿಯಲ್ಲಿ ಒಂದು ನಿರೀಕ್ಷಣೆಯನ್ನು ಮಾಡಿದ್ದರು, ಇದು ಒಳ್ಳೆಯ ರೀತಿಯ ಕಾರ್ಯಕ್ರಮಗಳನ್ನು ಹೊಂದಿರತಕ್ಕಂಥ ಪ್ರಗತಿಪರ ರೀತಿಯಲ್ಲಿ ಈ ಬಜೆಟ್ ಇರುತ್ತದೆ ಎಂದು ಭಾವಿಸಿದ್ದರು. ಆ ನಿಟ್ಟಿನಲ್ಲಿ ಇದು ಹೆಚ್ಚಾಗಿ ಪ್ರಗತಿಪರವಾಗಿಲ್ಲ ಎಂದು ನಾನು ಅಭಿಪ್ರಾಯಪಡುತ್ತೇನೆ. ಈ ರೀತಿಯಲ್ಲಿ ಬಜೆಟನ್ನು ಮಂಡಿಸುವಾಗ ಮಾನ್ಯ ಮುಖ್ಯಮಂತ್ರಿಗಳು ಕೆಲವು ವಿಷಯಗಳನ್ನು ಇದರಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ಕೆಲವು ಸ್ವಾಗತಾರ್ಹವಾದಂಥ ವಿಷಯಗಳು ಕೂಡಾ ಇವೆ. ಇಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ಆಡಳಿತವನ್ನು ನಡೆಸತಕ್ಕಂಥ ಪಕ್ಷದವರು ಎಲ್ಲಿ ಎಡವುತ್ತಾರೆ ಎಂದರೆ

ಈ ಕಾರ್ಯಕ್ರಮಗಳನ್ನು ಮಾಡುವಾಗ ನಾವು ಅದನ್ನು ಜಾರಿಗೆ ತರುತ್ತೇವೆ ಎಂದು ಹೇಳುತ್ತಾರೆ ಅಷ್ಟೆ. ಆದರೆ ನಿಜವಾಗಿಯೂ ಕೂಡಾ ಈ ಕಾರ್ಯಕ್ರಮಗಳನ್ನು ಜಾರಿಗೆ ತರುವುದರಲ್ಲಿ ಹೆಚ್ಚಾಗಿ ವಿಫಲರಾಗುತ್ತೇವೆ. ಈ ಕಾರ್ಯಕ್ರಮಗಳನ್ನು ಮಾಡುವ ಲಕ್ಷ್ಯ ಇದ್ದರೂ ಕೂಡ ಅದನ್ನು ನಾವು ಜಾರಿ ಮಾಡುವುದರಲ್ಲಿ ಹಿಂಜರಿಯುತ್ತೇವೆ. ಇವತ್ತು ಏನು ಅನೇಕ ಕಾರ್ಯಕ್ರಮಗಳನ್ನು ಜಾರಿ ಮಾಡುತ್ತೇವೆ ಎಂದು ನೀವು ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿದ್ದೀರಿ, ಅವರಲ್ಲಿ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸುವತ್ತ, ಮೀಸಲಾತಿ ಇರತಕ್ಕಂಥ ವ್ಯವಸ್ಥೆಯನ್ನು ಕಡ್ಡಾಯವಾಗಿ ಜಾರಿ ಮಾಡಬೇಕು ಎನ್ನುವ ಬಗ್ಗೆ, ಮಹಿಳೆಯರಿಗೆ ಉದ್ಯೋಗದಲ್ಲಿ ಮೀಸಲಾತಿಯನ್ನು ಕೊಡಬೇಕು ಎನ್ನುವ ಬಗ್ಗೆ, ಅಬಕಾರಿಯಲ್ಲಿ ಸಂಬಂಧಪಟ್ಟ ಹಾಗೆ ಸುಮಾರು ಎರಡು ಜಿಲ್ಲೆಯಲ್ಲಿ ಅದನ್ನು ವಿಸ್ತರಿಸುತ್ತೇವೆ ಎಂದು ಹೇಳತಕ್ಕಂಥದ್ದರ ಬಗ್ಗೆ, ಮತ್ತು ಹೈದರಬಾದ್ ಏರಿಯಾದಲ್ಲಿ ಮಂಡಳಿಯನ್ನು ರಚಿಸಬೇಕು ಎನ್ನತಕ್ಕಂಥದ್ದರ ಬಗ್ಗೆ ಹೀಗೆ ಹಲವಾರು ವಿಷಯಗಳನ್ನು ತಾವು ಪ್ರಸ್ತಾಪ ಮಾಡಿದ್ದೀರಿ. ಆದರೆ ಈ ಪ್ರಸ್ತಾಪಗಳು ಜಾರಿಗೆ ಬಂದಾಗ ಮಾತ್ರ ಇದು ಸರಿ ಎಂದು ನಾವು ಭಾವಿಸುತ್ತೇವೆ. ಮಾನ್ಯ ಯಡಿಯೂರಪ್ಪನವರು ಒಂದು ಮಾತನ್ನು ಹೇಳಿದರು, ''ತಾಳಿ ಭಾಗ್ಯ'' ಯೋಜನೆಯನ್ನು ನಾವು ರದ್ದು ಮಾಡುತ್ತೇವೆ. ಅದರ ಬದಲಿಗೆ ಹೊಸ ಯೋಜನೆಯನ್ನು ನಾವು ತರುತ್ತೇವೆ ಎಂದು ಮಾನ್ಯ ಮಾಜಿ ಮುಖ್ಯಮಂತ್ರಿಗಳು ಈ ಮಾತನ್ನು ಕಳೆದ ಸಾರಿಯ ಬಜೆಟ್‌ನಲ್ಲಿ ಆಡಿದ್ದರು. ಆದರೆ ಅದರ ಬಗ್ಗೆ ಪ್ರಸ್ತಾಪವೇ ಇಲ್ಲ. ಜೊತೆಗೆ ಅದು ಏನಾಯಿತು ಎನ್ನುವುದೂ ಕೂಡಾ ಗೊತ್ತಿಲ್ಲ. ಹಾಗೆಯೇ ಅದೇ ರೀತಿಯಲ್ಲಿ ಈ ಸಾರಿಯೂ ಕೂಡಾ ಈ ಬಜೆಟ್‌ನಲ್ಲಿ ಇದ್ದಂಥ ಪ್ರಸ್ತಾವಗಳು ಹಾಗೆ ಆಗಬಾರದು ಎಂದು ನಾನು ಸರ್ಕಾರದವರ ಗಮನಕ್ಕೆ ತರುತ್ತಿದ್ದೇನೆ. ಈ ರೀತಿ ಪ್ರಸ್ತಾಪ ಮಾಡುವಾಗ ಮಾನ್ಯ ಮುಖ್ಯಮಂತ್ರಿಗಳು ಒಂದನ್ನು ಮರೆತಿದ್ದಾರೆ. ನಾವು ಈ ಸಭೆಯಲ್ಲಿ ಅನೇಕ ಸಾರಿ ಈ ವಿಷಯವನ್ನು ಸದನದ ಗಮನಕ್ಕೆ ತಂದಿದ್ದೇವೆ, ಅದೇನೆಂದರೆ ನಮ್ಮ ಮಲೆನಾಡಿನ ಬಗ್ಗೆ, ಮಲೆನಾಡು ತುಂಬಾ ಹಿಂದುಳಿದಿರತಕ್ಕಂಥ ಪ್ರದೇಶ ಎಂದು ಮಲೆನಾಡಿನ ವಿಷಯದ ಬಗ್ಗೆ ಸಭೆಗೆ ಅನೇಕ ಸಾರಿ ಹೇಳಿದ್ದೇವೆ. ಮಾನ್ಯ ಅಧ್ಯಕ್ಷರೇ, ಮಲೆನಾಡು ಅಭಿವೃದ್ಧಿ ಬಗ್ಗೆ ಇವೊತ್ತು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದು, ಅದನ್ನು ಅಭಿವೃದ್ಧಿ ಪಡಿಸಿದ್ದು ಇದೆ. ಇವೊತ್ತು ಹಾಸನ ಜಿಲ್ಲೆಯಲ್ಲಿ ೮ ತಾಲ್ಲೂಕುಗಳು ಇದ್ದು, ನನ್ನ ಕ್ಷೇತ್ರವಾದ ಬೇಲೂರು, ಸಕಲೇಶಪುರ ಅರಕಲಗೂಡು ನಂತರ ಚಿಕ್ಕಮಗಳೂರು, ದಕ್ಷಿಣ ಕನ್ನಡ ಹೀಗೆ ೫–೬ ಜಿಲ್ಲೆಗಳಲ್ಲಿ ಮಲೆನಾಡು ಪ್ರಾಂತ್ಯದಲ್ಲಿ ಬರತಕ್ಕದ್ದು, ಇದ್ದು ಇದಕ್ಕಾಗಿ ಮಲೆನಾಡು ಅಭಿವೃದ್ಧಿ ಮಂಡಲಿಗಳನ್ನು ರಚಿಸಬೇಕಾಗಿದೆ. ಇವುಗಳನ್ನು ರಚಿಸಬೇಕಾದರೆ ಸದನದ ಒಂದು ಸಮಿತಿಯನ್ನು ತಾವು ಮಾಡಬೇಕಾದ ಪರಿಸ್ಥಿತಿ ಇದೆ, ಎಂದು ನಾನು ಭಾವಿಸುತ್ತೇನೆ. ಕಾರಣ ಇವೊತ್ತು ಕೂಡ ಅಲ್ಲಿ ಒಂದೇ ಒಂದು ರಸ್ತೆ ಕೂಡ ಸರಿಯಾಗಿಲ್ಲ. ನಮಗೆ ಸ್ವಾತಂತ್ರ್ಯ ಬಂದು ಸುಮಾರು ೪೦ ವರ್ಷಗಳಾದರೂ ಸಹ ರಸ್ತೆಗಳು ಹಲವಾರು ಕಡೆ ಸರಿಯಾಗಿಲ್ಲ. ಇವೊತ್ತು ಸೈಕಲ್ ಆಗಲೀ ಅಥವಾ ಎತ್ತಿನ ಗಾಡಿಗಳಾಗಲೀ ಹೋಗಲು ಸರಿಯಾದ ರಸ್ತೆಗಳು ಇಲ್ಲ. ಶ್ರೀಮಂತರು ತಮ್ಮ ಸ್ವಂತ ಖರ್ಚಿನಲ್ಲಿ ಬೇರೆ ರಸ್ತೆಗಳನ್ನು ಮಾಡಿಕೊಂಡಿದ್ದಾರೆ. ಸರ್ಕಾರದ ಖರ್ಚಿನಲ್ಲಿ ಮಾಡಿಲ್ಲ. ಈ ವಿಚಾರದಲ್ಲಿ ಸಂತೋಷಪಡತಕ್ಕ ಕೆಲಸ ಆಗದಿದ್ದರೂ ಸಹ ೧೯೮೩ರಲ್ಲಿ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಕೆಲಸಗಳು ನಡೆದಿದ್ದರೂ ಸಹ ರಸ್ತೆಗಳ ಕೆಲಸ ತೃಪ್ತಿಕರವಾಗಿಲ್ಲ. ಮಾನ್ಯ ಮಂತ್ರಿಗಳಲ್ಲಿ ನಾನು ಒತ್ತಾಯ ಮಾಡುತ್ತೇನೆ, ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಏನು ಒಂದ ಅಭಿವೃದ್ಧಿ ಮಂಡಲಿ ಎಂದು ಮಾಡಿದ್ದೀರಿ ಅದೇ ರೀತಿ ಅಭಿವೃದ್ಧಿ ಮಂಡಲಿಗಳನ್ನು ನಮಗೂ ಕೊಡುವತ್ತ ಗಮನ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ತಾವು ಹೇಳಿರತಕ್ಕ ವಿಷಯದಲ್ಲಿ ಹೇಳ ಬಯಸುತ್ತೇನೆ. ಇವೊತ್ತು ಪ್ರೈಮರಿ ಶಾಲೆಗಳ ಕಟ್ಟಡಗಳನ್ನು ಕೊಡತ್ತೇವೆ, ಉಪಾಧ್ಯಾಯರನ್ನು ನೇಮಿಸುತ್ತೇವೆಂದು ಹೇಳಿದ್ದಾರೆ. ಇವೊತ್ತು ನಮ್ಮ ಹಾಸನ ಜಿಲ್ಲಾ ಪರಿಷತ್ತು ಇಡೀ ರಾಜ್ಯಕ್ಕೆ ಮಾದರಿಯಾಗಿ ಕೆಲಸ ಮಾಡಿದೆ. ಮಾನ್ಯ ಮುಖ್ಯಮಂತ್ರಿಗಳು ಇಡೀ ರಾಜ್ಯಕ್ಕೆ ಮೂರು ಸಾವಿರ ಚಿಲ್ಲರೆ ಶಾಲಾ ಕಟ್ಟಡಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ನಾವು ೧೪೦೦ ಶಾಲಾ ಕಟ್ಟಡಗಳನ್ನು ಹಾಸನ ಜಿಲ್ಲಾ ಪರಿಷತ್‌ನಿಂದ ಕೊಟ್ಟಿದ್ದೇವೆ. ಮಾನ್ಯ ಮಂತ್ರಿಗಳು ಹೇಳಿದಂತೆ ಮೂರು ಸಾವಿರ ಚಿಲ್ಲರೆ ಶಾಲಾ ಕಟ್ಟಡಗಳನ್ನು ಕೊಡುತ್ತೇವೆಂದು ಹೇಳಿದರೆ ಇದರ ಅರ್ಥ ಒಂದೊಂದು ತಾಲ್ಲೂಕಿಗೆ ೨೦ ಕೂಡ ಶಾಲಾ ಕಟ್ಟಡಗಳು ಬರುವುದಿಲ್ಲ.

ಅಧ್ಯಕ್ಷರು.—ಬೇರೆ ಜಿಲ್ಲೆಯ ದುಡ್ಡು ಎಲ್ಲಾ ನಿಮ್ಮ ಜಿಲ್ಲೆಗೇ ಕೊಡಬೇಕಾಗುತ್ತದೆ.

ಶ್ರೀ ಬಿ. ರಾಚಯ್ಯ.—ಅಲ್ಲಿ ಶೆಡ್ಯೂಲ್ಡ್ ಕಾಸ್ಟ್ ಹಾಗೂ ಶೆಡ್ಯೂಲ್ಡ್ ಟ್ರೈಬ್ಸ್ ಹುಡುಗರಿಗೆ ಹೈಸ್ಕೂಲ್, ಕಟ್ಟಡವನ್ನು ಕಟ್ಟುವುದಕ್ಕೆ ಕೊಟ್ಟಿದ್ದ ಹಣವನ್ನು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ಗೆ ಉಪಯೋಗಿಸಿಕೊಂಡಿದ್ದಾರೆ, ಇದು ಸರಿಯೆ ?

ಶ್ರೀ ಸಿ. ಭೈರೇಗೌಡ.—ಇದಕ್ಕೆ ಉತ್ತರ ಯಾರು ಕೊಡಬೇಕು ಗೊತ್ತಿಲ್ಲ......ಸರ್ಕಾರದ ಪರವಾಗಿ ಯಾರೂ ಉತ್ತರಕೊಡುವುದಕ್ಕೆ ಇಲ್ಲವೆಂದು ಹೇಳಿದರೆ ನಾವು ಉತ್ತರ ಕೊಡುತ್ತೇವೆ......

ಅಧ್ಯಕ್ಷರು.—ಕುಮಾರಸ್ವಾಮಿಯವರು ಚೆನ್ನಾಗಿ ಮಾತನಾಡುತ್ತಿದ್ದಾರೆ......

ಶ್ರೀ ಬಿ. ರಾಚಯ್ಯ.—ಚೆನ್ನಾಗಿ ಕೆಲಸ ಮಾಡಿದ್ದಾರೆ ಎಂದು ಹೇಳಿದರು. ಅದಕ್ಕೋಸ್ಕರವಾಗಿ ಹೇಳಿದ್ದು.

ಶ್ರೀ ಸಿ. ಬೈರೇಗೌಡ.—ಸರ್ಕಾರಕ್ಕೆ ಅಧಿಕಾರ ಇದೆ. ಜಿಲ್ಲಾ ಪರಿಷತ್ ಇದೆ. ನಮಗೆ ಅಧಿಕಾರ ಇಲ್ಲ, ಸರ್ಕಾರ ಇಲ್ಲ ಎಂದು ಹೇಳಿದರೆ ಹೇಳಿಬಿಡಲಿ, ನಾವು ಉತ್ತರ ಕೊಡುತ್ತೇವೆ, ನಾವು ಏನು ಮಾಡಬೇಕು ಅದನ್ನು ಮಾಡುತ್ತೇವೆ.

ಶ್ರೀ ಹೆಚ್. ಕೆ. ಕುಮಾರಸ್ವಾಮಿ.—ಮಾನ್ಯ ಹಿರಿಯರಾದ ಸಚಿವರಾದ ರಾಚಯ್ಯನವರು ಒಂದು ಮಾತನ್ನು ಹೇಳಿದರು. ವಿಶೇಷ ಘಟಕ ಯೋಜನೆಯ ಹಣ ಬಳಸಿಲ್ಲವೆಂದು ಹೇಳುತ್ತೇನೆ. ನಾನು ಪ್ರತಿ ಮಾಸಿಕ ಸಭೆಯಲ್ಲಿ ಹಾಜರು ಇರುತ್ತೇನೆ. ಎನ್. ಆರ್. ಇ. ಜಿ. ಪಿ. ಹಣವನ್ನು ಬೇರೆ ಕಡೆಗೆ ಉಪಯೋಗಿಸಿದ್ದೇವೆ. ಹಾಗೆ ಕಟ್ಟಡಗಳಿಗೆ ಉಪಯೋಗಿಸಿದ್ದು ಕಡಿಮೆ. ರಾಜ್ಯ ಮಟ್ಟದಲ್ಲಿ ಕಟ್ಟಡಗಳಿಗೆ ಪ್ರಸ್ತಾವನೆಗಳು ಕಡಿಮೆ. ಇವು ಅತ್ಯಲ್ಪ. ಈ ಕಡೆ ಹೆಚ್ಚು ಕಟ್ಟಡಗಳನ್ನು ಕಟ್ಟುವಂತಹ ವ್ಯವಸ್ಥೆ ಮಾಡಬೇಕು. ಮೂರು ಸಾವಿರ ಚಿಲ್ಲರೆ ಶಾಲಾ ಕಟ್ಟಡಗಳನ್ನು ಕಟ್ಟುತ್ತೇವೆ, ಉಪಾಧ್ಯಾಯರನ್ನು ನೇಮಕ ಮಾಡಿಕೊಳ್ಳುತ್ತೇವೆ ಎನ್ನುವ ಯೋಜನೆ ಇದೆ. ಮಾನ್ಯ ರಘುಪತಿಯವರು, ಮಾನ್ಯ ಗೋವಿಂದೇಗೌಡರು, ಹಾಗೂ ಮಾನ್ಯ ಸೋಮಶೇಖರ್‌ರವರು ಹೀಗೆ ಮೂರು ಜನ ಶಿಕ್ಷಣ ಸಚಿವರುಗಳು ಒಂದೊಂದೇ ಹೇಳಿಕೊಂಡು ಬಂದರು. ಆರು ಸಾವಿರ ಶಾಲೆಗಳಲ್ಲಿ ಪ್ರೈಮರಿ ಶಿಕ್ಷಕರ ಹುದ್ದೆಗಳು ಖಾಲಿ ಇವೆ, ಅದನ್ನು ನಾವು ತುಂಬುತ್ತೇವೆ ಎಂದು ಹೇಳಿದರು. ಶ್ರೀ ಸೋಮಶೇಖರ್‌ರವರು ಹೋದ ಮೇಲೆ ಅದು ಜಾರಿಗೆ ಬಂತು. ಮೂರು ಜನ ಸ್ಥಾನವನ್ನು ಕಳೆದುಕೊಂಡ ಮೇಲೆ ಜಾರಿಗೆ ಬಂತು. ಈಗ ನಮ್ಮ ಹಾಸನ ಜಿಲ್ಲೆಯಲ್ಲಿ ೧೫೦ ಪೋಸ್ಟ್‌ಗಳನ್ನು ಮಾಡಿಕೊಂಡಿದ್ದಾರೆ. ಅಧಿಕಾರಿಗಳು ಈ ಬಗ್ಗೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆಂದು ನನಗೆ ಅನ್ನಿಸುತ್ತದೆ. ಇವತ್ತು ೬ ಸಾವಿರ ಹುದ್ದೆಗಳು ಮಾತ್ರ ಖಾಲಿ ಇವೆ ಎಂದು ಹೇಳುತ್ತಾರೆ. ೧೯೭೨ನೇ ಇಸವಿಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಎಷ್ಟು ಬೇಕು ಎಂಬ ಸಮೀಕ್ಷೆಯನ್ನು ಮಾಡಿದ್ದಾರೆ. ೧೯೭೨ರಲ್ಲಿ ಅದನ್ನು ಮಾಡಿದ ಮೇಲೆ ೧೭ ವರ್ಷಗಳನ್ನು ಕಳೆದಿದ್ದಾರೆ. ಜನತಾ ಸರ್ಕಾರ ಬಂದ ಮೇಲೆ ಇವರು ಕೊಟ್ಟಂಥ ಪುಸ್ತಕ ಮತ್ತು ಬಟ್ಟೆಗಳಿಂದ ಹುಡುಗರ ಸಂಖ್ಯೆ ಜಾಸ್ತಿಯಾಯಿತು. ೧೯೭೨ರ ಅಂಕಿ ಅಂಶಗಳನ್ನು ಅಧಿಕಾರಿಗಳು ಮಂತ್ರಿಗಳಿಗೆ ಕೊಟ್ಟು ಮಿಸ್‌ಗೈಡ್ ಮಾಡುತ್ತಾ ಇದ್ದಾರೆಂದು ನನಗನ್ನಿಸುತ್ತದೆ. ಇವತ್ತು ೧:೫೦ ಎಂದು ಹೇಳುತ್ತಾರೆ. ಅದರ ಪ್ರಕಾರ ೨೨ ಸಾವಿರ ಉಪಾಧ್ಯಾಯರು ಹೊಸದಾಗಿ ಬೇಕು. ಏಪ್ರಿಲ್ ೩೦ನೇ ತಾರೀಖು ೫-೬ ಸಾವಿರ ಉಪಾಧ್ಯಾಯರು ಹೋದರೂ ಇನ್ನೊಂದು ೬ ಸಾವಿರ ಅದಕ್ಕೆ ಸೇರಿಸಿಕೊಳ್ಳಬೇಕು. ಈ ತರಹ ಅಂಕಿಅಂಶಗಳು ಇರುವಾಗ ಕಡಿಮೆ ಅಂಕಿಅಂಶಗಳನ್ನು ಕೊಡಬಾರದು. ಅವನ್ನು ತುಂಬುವುದಕ್ಕೆ ಏನಾದರೂ ಮಾಡಿ. ಇವತ್ತು ಯುವಕರಲ್ಲಿ ನಿರುದ್ಯೋಗ ಸಮಸ್ಯೆ ಇದೆ. ಬಿ.ಎ. ಎಂ.ಎ. ಪಾಸ್ ಮಾಡಿರುವವರು ನಮಗೆ ಎರಡು ಸಾವಿರ ರೂಪಾಯಿ ಸಂಬಳ ಬೇಡ, ಕೇವಲ ೩೦೦ ರೂಪಾಯಿ ಸ್ಟೈಫಂಡ್ ಕೊಡಿ, ನಾವು ಪ್ರಾಮಾಣಿಕತೆಯಿಂದ ಶಾಲೆಗೆ ಹೋಗಿ ಕೆಲಸ ಮಾಡುತ್ತೇವೆ ಎಂದು ಹೇಳುತ್ತಾರೆ, ನೂರಾರು ಅರ್ಜಿಗಳನ್ನು ಕೊಟ್ಟಿದ್ದಾರೆ. ಆದರೆ ತಿಂಗಳಿಗೆ ೨ ಸಾವಿರ ೩ ಸಾವಿರ ರೂಪಾಯಿ ಸಂಬಳವನ್ನು ನಾವು ಅಧಿಕಾರಿಗಳಿಗೆ ಕೊಡುತ್ತೇವೆ, ಅವರು ನಿಷ್ಠೆಯಿಂದ ಕೆಲಸ ಮಾಡುತ್ತಿಲ್ಲ. ಅವರು ಖಾಯಂ ಹುದ್ದೆಯಲ್ಲಿರುವವರು. ಆದ್ದರಿಂದ ಯುವಕರಿಗೆ ಸ್ಟೈಪೆಂಡ್ ಕೊಟ್ಟು ಗುಮಾಸ್ತರನ್ನಾಗಿ ಅಥವಾ ಶಿಕ್ಷಕರನ್ನಾಗಿ ಏಕೆ ನೇಮಕಮಾಡಿ ಕೊಳ್ಳಬಾರದು. ಆದ್ದರಿಂದ ದಯಮಾಡಿ ಇದನ್ನು ಸರ್ಕಾರದವರು ಪರಿಶೀಲಿಸಬೇಕು ಎಂದು ತಮ್ಮಲ್ಲಿ ನಾನು ಕೋರಿಕೆ ಸಲ್ಲಿಸುತ್ತೇನೆ. ಈಗ ಬಜೆಟ್‌ನಲ್ಲಿ ೩೦೦ ರೂಪಾಯಿ ಸ್ಟೈಫಂಡ್ ಕೊಟ್ಟು ೨೦ ಸಾವಿರ ಯುವಕ-ಯುವತಿಯರಿಗೆ ತರಬೇತಿ ಕೊಡಲು ನೇಮಕಮಾಡಿಕೊಳ್ಳುತ್ತೇವೆ ಎಂದು ಹೇಳಿದಿರಿ. ಇದು ಜಾರಿಗೆ ಬಂದರೆ ಮೆಚ್ಚತಕ್ಕ ಸಂಗತಿ. ಇದರಲ್ಲಿ ಪರಿಶಿಷ್ಟ ಜಾತಿ-ಪರಿಶಿಷ್ಟ

ವರ್ಗದ ಯುವಕ–ಯುವತಿಯರಿಗೆ ಆದ್ಯತೆ ಕೊಡಬೇಕು ಎಂದು ಕೇಳುತ್ತಾ ಇದ್ದೇನೆ. ಮಾನ್ಯ ಸಿಂಧ್ಯರವರು ಒಂದು ಒಳ್ಳೆಯ ಸೂಚನೆಯನ್ನು ಪ್ರಸ್ತಾವನೆಯನ್ನು ಮಾಡಿದ್ದಾರೆ. ಅದು ಹಾಸ್ಟೆಲ್‌ಗಳಲ್ಲಿ ದರವನ್ನು ಹೆಚ್ಚಿಸತಕ್ಕ ವಿಷಯ. ಮಾನ್ಯ ಬಸವಣ್ಣಪ್ಪನವರು ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳಾಗಿದ್ದಾಗ ಈ ಬಗ್ಗೆ ಕೇಂದ್ರಕ್ಕೆ ಬರೆದಿದ್ದೇವೆ ಎಂದು ಹೇಳುತ್ತಿದ್ದುದು ತಂಬೂರಿ ರಾಗ ಇದ್ದಹಾಗೆ ಇತ್ತು. ಈಗ ಆ ವಿಷಯವನ್ನು ಮಾನ್ಯ ಮಂತ್ರಿಯವರು ಪ್ರಸ್ತಾಪ ಮಾಡಿದ್ದಾರೆ. ಅದು ಜಾರಿಗೆ ಬರಲಿ ಎಂದು ಹೇಳುತ್ತೇನೆ. ಈಗಿನವರು ಮಾಡುತ್ತಾರೆ ಎಂದು ನಾನು ಭಾವಿಸಿದ್ದೇನೆ. ಆದರೆ ಇದರಲ್ಲಿ ಒಂದು ತಪ್ಪಾಗಿದೆ ಎಂದು ಬಾವಿಸುತ್ತೇನೆ. ಏನು ತಪ್ಪಾಗಿದೆ ಎಂದರೆ, ಬೆಲೆ ಏರಿಕೆ ಸೂಚ್ಯಂಕ ಏನಿದೆ ಅದಕ್ಕೆ ತಕ್ಕಬಾಗಿಲ್ಲ. ಒಳ್ಳೆಯ ಊಟ ಕೊಡಬೇಕು. ಪೌಷ್ಟಿಕ ಆಹಾರ ಕೊಡಬೇಕು ಅಂದರೆ ದಿವಸಕ್ಕೆ ೨೫ ರೂಪಾಯಿಬೇಕು. ಆಸ್ಪತ್ರೆಗಳಲ್ಲಿ ಕೊಡತಕ್ಕಂಥ ಆಹಾರವನ್ನೂ ಕೂಡ ಇವತ್ತು ಹಾಸ್ಟೆಲ್‌ಗಳಲ್ಲಿ ಕೊಡುತ್ತಾ ಇಲ್ಲ. ಇವರು ಕೊಡುವ ಆಹಾರ ಹೇಗಿದೆಯೆಂದರೆ, ರೋಗಜಾಸ್ತಿಯಾದಾಗ ಇಂಜಕ್ಷನ್ ಕೊಟ್ಟು ಶಮನಮಾಡಿದಹಾಗೆ ಇದೆಯೆಷ್ಟೆ. ಅವರು ಪುನರ್‌ಪರಿಶೀಲನೆ ಮಾಡುವಾಗ ಬೆಲೆ ಸೂಚ್ಯಂಕಕ್ಕೆ ಅನುಗುಣವಾಗಿ ಒಂದೇ ಸಾರಿ ಹೆಚ್ಚು ಮಾಡುತ್ತಾರೆ ಎಂದು ನಾನು ಭಾವಿಸಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಮಾನ್ಯ ಮಂತ್ರಿಗಳು ಇದನ್ನು ಮಾಡುತ್ತಾರೆಂದು ನಾನು ನಂಬಿದ್ದೇನೆ. ಬಡ್ಜೆಟ್‌ನಲ್ಲಿ ಮಹಿಳೆಯರಿಗೆ ಮೀಸಲಾತಿ ಕೊಡುವುದಾಗಿ ಹೇಳಿದ್ದೀರಿ. ಇವತ್ತಿನದಿವಸ ಮಹಿಳೆಯರು ಅನೇಕ ರಂಗಗಳಲ್ಲಿ ನಾವೂ ಕೆಲಸ ಮಾಡುತ್ತೇವೆ ಎನ್ನುವುದನ್ನು ತೋರಿಸಿಕೊಟ್ಟಿದ್ದಾರೆ, ಆದ್ದರಿಂದ ಇದನ್ನು ಮಾಡಬೇಕು. ಇದರಲ್ಲಿ ಇನ್ನೊಂದು ಮುಖ್ಯವಾದ ವಿಷಯವಿದೆ. ಏನೆಂದರೆ, ಉತ್ತರ ಕನ್ನಡ ಜಿಲ್ಲೆ ಮತ್ತು ಬೆಳಗಾಂಗೆ ಹೆಂಡ, ಸಾರಾಯಿ ಸರಬರಾಜು ನಿಲ್ಲಿಸುತ್ತೇವೆ ಎಂದು ಹೇಳಿದ್ದೀರಿ. ಆದರೆ ಸರ್ಕಾರಕ್ಕೆ ನನ್ನ ಒಂದು ಒತ್ತಾಯ ಏನೆಂದರೆ, ಇಡೀ ಕರ್ನಾಟಕ ರಾಜ್ಯದಲ್ಲಿ ಸಂಪೂರ್ಣವಾಗಿ ಪಾನ ನಿರೋಧವನ್ನು ತಾವು ಜಾರಿಗೆ ತರಬೇಕು. ಇದರಲ್ಲಿ ಎರಡು ಅಂಶಗಳಿವೆ. ಇವತ್ತು ಮರ್ಯಾದೆ ಇರುವವರು ಯಾರೂ ಬೀದಿಯಲ್ಲಿ ತಿರುಗಾಡುವಹಾಗಿಲ್ಲ. ಬರೀ ಹೆಂಡ–ಸಾರಾಯಿ ವಿಷಯ ಹೇಳುತ್ತಿದ್ದಾರೆ. ಆದ್ದರಿಂದ ಸಂಪೂರ್ಣವಾಗಿ ಪಾನನಿರೋಧವನ್ನು ಜಾರಿಗೆತರಬೇಕು. ಇವತ್ತಿನದಿವಸ ಬೆಂಗಳೂರು ಏರ್‌ಪೋರ್ಟ್‌ನಲ್ಲಿ ಬೇರೆ ದೇಶದವರು ಬಂದರೆ ಅವರನ್ನು ಸ್ವಾಗತಮಾಡಿ ಕರೆದುಕೊಂಡು ಬರಬೇಕಾದ ಜಾಗದಲ್ಲಿ ಒಂದು ಲಿಕ್ಕರ್‌ಶಾಪ್ ಇದೆ. ಬೆಂಗಳೂರಿನಲ್ಲಿ ೯೦೦ಕ್ಕೂ ಹೆಚ್ಚು ಲಿಕ್ಕರ್‌ಶಾಪ್‌ಗಳಿವೆ. ಇವು ಮೆಡಿಕಲ್ ಸ್ಟೋರ್‌ಗಳಿಗಿಂತ ಜಾಸ್ತಿ ಇವೆ. ಇವತ್ತಿನದಿವಸ ಪರಿಸ್ಥಿತಿ ಈ ಹಂತದಲ್ಲಿರುವಾಗ ಆದಾಯ ಕೂಡ ಕಡಿಮೆ ಇದ್ದಾಗ, ಆಡಳಿತಾತ್ಮಕವಾಗಿ ಮತ್ತು ಎಲ್ಲಾ ರೀತಿಯಿಂದ ದುಷ್ಪರಿಣಾಮ ಬೀರುತ್ತಾ ಇರುವಾಗ ಅಬ್ಕಾರಿ ಇಲಾಖೆಯಿಂದ ಆದಾಯ ಬರುತ್ತದೆ ಎನ್ನುವುದನ್ನು ಮರೆತು ಇವತ್ತು ಜನಪ್ರಿಯವಾದ ಕಾರ್ಯಕ್ರಮವನ್ನು ಜಾರಿ ಮಾಡಬೇಕು ಎಂದಿದ್ದರೆ ದಯಮಾಡಿ ಪಾನನಿರೋಧವನ್ನು ಜಾರಿಗೆ ತನ್ನಿ. ಎಲ್ಲಾ ರೀತಿಯಿಂದಲೂ ಇದು ಒಳ್ಳೆಯದು ಎಂದು ನಾನು ಭಾವಿಸುತ್ತೇನೆ. ದಯಮಾಡಿ ಎರಡು ಜಿಲ್ಲೆಗಳಲ್ಲಿ ಅಥವಾ ಕೆಲವು ಜಿಲ್ಲೆಗಳಲ್ಲಿ ಇದನ್ನು ಜಾರಿಗೆ ತರುವುದು ಬೇಡ. ಸಂಪೂರ್ಣವಾಗಿ ಜಾರಿಗೆ ತರಬೇಕು. ಇನ್ನು ಹೆಂಡಸಾರಾಯಿ ಅಂಗಡಿಗಳನ್ನು ಹರಿಜನ ಒಸದಿ ಹತ್ತಿರ, ದೇವಸ್ಥಾನಗಳ ಹತ್ತಿರ ಇಡಬಾರದು ಎಂದು ಕಾನೂನು ಮಾಡಿದ್ದೀರಿ. ಆದರೆ ಅದು ಜಾರಿಗೆ ಬಂದಿಲ್ಲ. ಈ ಕಂಟ್ರಾಕ್ಟರ್ಸ್ ಮತ್ತು ಇನ್ಸ್‌ಪೆಕ್ಟರಗಳಲ್ಲಿ ಯಾವ ಒಂದು ಹೊಂದಾಣಿಕೆ ಇದೆಯೋ ನನಗೆ ಅರ್ಥವಾಗುತ್ತಿಲ್ಲ. ನಾವು ಪ್ರತಿ ಮೀಟಿಂಗ್‌ನಲ್ಲಿಯೂ ಸಹ ಕೇಳುತ್ತಲೇ ಇರುತ್ತೇವೆ. ಅಧಿಕಾರಿಗಳು ಊಂ, ಊಂ ಎಂದು ಹೇಳುತ್ತಲೇ ಇರುತ್ತಾರೆ. ಅದಕ್ಕೆ ಅರ್ಥವೇ ಇಲ್ಲದಂತಾಗಿದೆ. ನಿಮ್ಮ ಮಾತನ್ನು ಅವರು ಕೇಳುವ ಮಟ್ಟದಲ್ಲಿ ಇಲ್ಲ. ಅವರು ನಿಮ್ಮಮಾತನ್ನು ಕೇಳದೆ ಇರುವುದನ್ನು ನೋಡಿದರೆ ಬೇರೆ ಏನಾದರೂ ವ್ಯವಹಾರ ಇದೆಯೋ ಎಂದು ನಾನು ಈ ಸದನದಲ್ಲಿ ಪ್ರಸ್ತಾಪ ಮಾಡಬೇಕಾಗುತ್ತದೆ. ಆದ್ದರಿಂದ, ಈ ಪಾನನಿರೋಧವನ್ನು ವಿಶೇಷವಾಗಿ ಜಾರಿಗೆ ತರತಕ್ಕ ಕೆಲಸಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನೂ ಹೆಚ್ಚು ವಿಷಯಗಳನ್ನು ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿದ್ದೀರಿ. ಜಿಲ್ಲಾ ಪರಿಷತ್ ಮತ್ತು ಮಂಡಲ್‌ಪಂಚಾಯಿತ್ ಯೋಜನೆ ವಿಚಾರದಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ಇಷ್ಟ ಪಡುತ್ತೇನೆ. ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯಿತ್ ಜಾರಿಗೆ ಬಂದಮೇಲೆ ಕೆಲವೊಂದು ಲೋಪದೋಶಗಳು ಇರುವುದು ನನಗೆಕಂಡುಬಂದಿದೆ. ಅದರಲ್ಲಿ ಕೆಲವು ವಿಷಯಗಳಬಗ್ಗೆ ಜಿಲ್ಲಾ ಪಂಷತ್‌ನಲ್ಲಿ ಎಷ್ಟೊಂದು ವರ್ಕ್‌ಲೋಡ್ ಇದೆ ಅಂದರೆ ಇವೊತ್ತು ಒಟ್ಟಿಗೆ ಕರ್ನಾಟಕ ರಾಜ್ಯದಲ್ಲಿ ೬೧ ಜನ ಮಂತ್ರಿಗಳು ಇದ್ದಾರೆಂದು ಭಾವಿಸಬೇಕಾಗುತ್ತದೆ. ಇಲ್ಲಿ ೨೧ ಜನ, ಜಿಲ್ಲಾಪರಿಷತ್ ಮಟ್ಟದಲ್ಲಿ ೪೦ ಜನ ಇದ್ದಾರೆ. ಈಗ ಇದು ಯಾವ ಮಟ್ಟಿಗೆ ಹೋಗಿದೆ ಅಂದರೆ ನಾನು ಅರ್ಜಿಗಳ ಸಮಿತಿಯಲ್ಲಿ ಒಬ್ಬ ಸದಸ್ಯನಾಗಿದ್ದೇನೆ. ಯಾವುದೇ ಒಂದು ವಿಷಯ ಬಂದರೂ ನಮ್ಮ ಅಧಿಕಾರಿಗಳೂ ಇದನ್ನು ಸೂಕ್ತಕ್ರಮಕ್ಕಾಗಿ ಜಿಲ್ಲಾಪರಿಷತ್‌ಗೆ ಕಳುಹಿಸಲಾಗಿದೆ

ಎಂದು ಹೇಳುತ್ತಾರೆ. ಕೆಲವೊಂದು ಅಬ್ಕಾರಿ, ರೆವಿನ್ಯೂ, ಪೋಲೀಸ್ ಈ ತರಹದ ನಾಲ್ಕೈದು ಇಲಾಖೆಗಳನ್ನು ಬಿಟ್ಟರೆ ಉಳಿದೆಲ್ಲವೂ ಜಿಲ್ಲಾ ಪರಿಷತ್‌ನ ಆಡಳಿತಕ್ಕೆ ಬರುತ್ತವೆ. ಈಗ ವರ್ಕ್‌ಲೋಡ್ ಎಷ್ಟು ಇದೆ ಅಂದರೆ, ಒಂದು ತಾಲ್ಲೂಕಿಗೆ ಒಬ್ಬರು ಎ. ಇ. ಇ. ಅವರನ್ನು ನೇಮಕ ಮಾಡಿದ್ದಾರೆ. ಇವೊತ್ತು ಅವರು ಬೋರ್‌ವೆಲ್‌ಗಳನ್ನು ನೋಡಬೇಕು, ಕೆರೆಗಳನ್ನು ನೋಡಬೇಕು, ರಸ್ತೆಗಳನ್ನು ನೋಡಬೇಕು. ಅಂದರೆ ಪಿಡಬ್ಲ್ಯೂಡಿ ಎ. ಇ. ಇ. ಎಂ. ಐ. ಎ. ಇ. ಇ ಮೊದಲಾದ ಅಂತಹ ಪಿ. ಹೆಚ್. ಎ. ಇ. ಇ. ಇವರು ಮೂರು ಜನರದ್ದು ಒಬ್ಬರೇ ಎ. ಇ. ಇ. ಕೆಲಸ ಮಾಡಬೇಕಾಗಿದೆ. ಉದಾಹರಣೆಗೆ ನಮ್ಮ ಬೇಲೂರು ತಾಲ್ಲೂಕಿನಲ್ಲಿ ೭೩೦ ಕೆರೆಗಳು ಇವೆ. ಆ ೭೩೦ ಕೆರೆಗಳಲ್ಲಿ ಒಂದೇ ಒಂದು ಕೆರೆ ಮೈನರ್ ಇರಿಗೇಷನ್‌ಗೆ ಬರುತ್ತದೆ. ಇನ್ನು ೭೨೯ ಜಿಲ್ಲಾ ಪರಿಷತ್‌ಗೆ ಸೇರುತ್ತವೆ. ರಸ್ತೆಗಳಲ್ಲಿ ಸುಮಾರು ೯೦ ಭಾಗ ರಸ್ತೆಗಳು ಜಿಲ್ಲಾಪರಿಷತ್‌ಗೆ ಬರುತ್ತದೆ. ಪಿ. ಹೆಚ್. ಯಿಂದು ಜಿಲ್ಲಾ ಪರಿಷತ್‌ಗೆ ಬರುತ್ತದೆ. ಇಷ್ಟೊಂದು ವರ್ಕ್‌ಲೋಡ್ ಇರುವುದರಿಂದ ಅಧಿಕಾರಿಗಳು ಸರಿಯಾಗಿ ಕೆಲಸವನ್ನು ಮಾಡಲಿಕ್ಕೆ ಆಗುವುದಿಲ್ಲ. ಆದ್ದರಿಂದ, ಈ ಕಡೆಗೆ ವಿಶೇಷವಾಗಿ ಅಧಿಕಾರಿಗಳನ್ನು ನೇಮಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಈಗ ಜಿಲ್ಲಾಪರಿಷತ್ ಪ್ರಾರಂಭವಾದಮೇಲೆ ಮಂಡಲ್ ಮಟ್ಟದಲ್ಲಿ ಮಂಡಲ ಕೇಂದ್ರವನ್ನು ಬದಲಾಯಿಸಿಕೊಳ್ಳತಕ್ಕಂಥ ಒಂದು ಹೋರಾಟ ಗ್ರಾಮೀಣಮಟ್ಟದಲ್ಲಿ ನಡೆಯುತ್ತಿದೆ, ಒಂದು ಊರಿನಿಂದ ಇನ್ನೊಂದು ಊರಿಗೆ ಬದಲಾಯಿಸುವಂತಾದ್ದು ನಡೆಯುತ್ತಿದೆ. ಏಕೆಂದರೆ ಇದರಲ್ಲಿ ಒಂದು ವೀಕೆಸ್ಟ್ ಕಲಮ್ ಅನ್ನು ಸೇರಿಸಿದ್ದಾರೆ. ಮೂರನೇ ಎರಡರಷ್ಟು ಮಂಡಲ್ ಪಂಚಾಯಿತ್ ಸದಸ್ಯರು ಇಷ್ಟಪಟ್ಟರೆ ಯಾವ ಊರಿಗೆ ಬೇಕಾದರೂ ಅದನ್ನು ಬದಲಾವಣೆ ಮಾಡಬಹುದು. ಇವೊತ್ತು ನ್ಯಾಯಾಲಯಗಳು ಅದಕ್ಕೆ ಸಕ್ಕ ಆದೇಶಕೊಡುತ್ತೇವೆ. ನಾವು ನ್ಯಾಯಾಲಯಗಳನ್ನು ಯಾವುದೇ ರೀತಿಯಲ್ಲಿ ದೂರುವುದು ಸಮಂಜಸವಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗ ಈ ಕಾಲಂನಿಂದ ಅನೇಕ ರೀತಿಯ ತೊಂದರೆ ಇರುವುದರಿಂದ ಈ ಒಂದು ಕಾಲಂಅನ್ನು ಡಿಲಿಟ್ ಮಾಡತಕ್ಕ ಕ್ರಮವನ್ನು ಸರ್ಕಾರ ಕೈಗೊಳ್ಳಬೇಕು. ಮತ್ತೊಂದು ವಿಷಯ ಅಂದರೆ ನಮ್ಮ ರೈತರು ಖಾಸಗಿಯಾಗಿ ನೀರಾವರಿಗೆ ಪಂಪ್‌ಸೆಟ್ಟು ಹಾಕತಕ್ಕಂಥವೋಟಾರು ಸುಮಾರು ೬-೭ ವರ್ಷ ಆದರೂ ಕೆಲಸ ಮಾಡುತ್ತವೆ. ಒಂದೇ ಒಂದು ದಿವಸಕೂಡ ಕೆಡುವುದಿಲ್ಲ. ಆದೇ ನಮ್ಮ ಸರ್ಕಾರದ ಪಂಪ್‌ಸೆಟ್ಟುಗಳನ್ನು ಒಂದು ತಿಂಗಳಲ್ಲಿ ನಾಲ್ಕುಸಾರಿ ರಿಪೇರಿ ಮಾಡಬೇಕಾಗಿದೆ. ಏತಕ್ಕೆ ಈ ರೀತಿ ಆಗುತ್ತದೆ ಅಂದರೆ ಅಲ್ಲಿ ಕಳಪೆ ಮೆಟೀರಿಯಲ್ ಹಾಕುವುದರಿಂದ ಕಷ್ಟವಾಗುತ್ತಿದೆ, ಸರ್ಕಾರ ಈ ನಿಟ್ಟಿನಲ್ಲಿ ಒಳ್ಳೆಯ ವಸ್ತುಗಳನ್ನು ಅಲ್ಲಿ ಹಾಕಿಸಬೇಕೆಂದು ಹೇಳುತ್ತೇನೆ. ಇನ್ನು ಸಿ ಅಂಡ್ ಡಿ ಲ್ಯಾಂಡ್ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಸಿ ಅಂಡ್ ಡಿ ಲ್ಯಾಂಡ್ ಎಷ್ಟು ಬರುತ್ತದೆ. ಎಂದು ಇವೊತ್ತು ಕೂಡಾ ಪ್ರಸ್ತಾಪ ಆಗಿಲ್ಲ. ಈಗ ಒಂದೂವರೆ ತಿಂಗಳ ಹಿಂದೆ ಸರ್ಕಾರ ಏನು ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿದೆ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು. ಇನ್ನು ಸರ್ಕಾರಿ ಗೋಮಾಳದಲ್ಲಿ ಸೈಟನ್ನು ಕೊಡುವ ಹಾಗೆ ಇಲ್ಲ. ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಆಗಲಿ, ಶಾಲೆಗೆ ಆಗಲಿ ಯಾವುದಕ್ಕೂ ಕೊಡುವ ಹಾಗೆ ಇಲ್ಲ. ಈಗ ಗ್ರಾಮಠಾಣದಲ್ಲಿ ಒಂದೇ ಒಂದು ಅಡಿ ಜಾಗ ಉಳಿದಿಲ್ಲ. ಜನರು ಅರ್ಜಿಯನ್ನು ಕೊಡುತ್ತಾರೆ. ಆದರೆ ಗೋಮಾಳಗಳಲ್ಲಿ ನಿವೇಶನಗಳನ್ನು ಹಂಚಬಾರದು ಎಂದು ತಾವುಏನು ಆದೇಶವನ್ನು ಹೊರಡಿಸಿದ್ದೀರಿ ಅದನ್ನು ದಯವಿಟ್ಟು ವಾಪಸು ತೆಗೆದುಕೊಂಡು ರೈತರಿಗೆ ಅನುಕೂಲ ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ವಿಶೇಷ ಘಟಕ ಯೋಜನೆಯ ಬಗ್ಗೆ ಒಂದು ಮಾತನ್ನು ಹೇಳಬಯಸುತ್ತೇನೆ. ಇದು ಇದು ಕೆಲವು ಕಡೆ ವಿಫಲವಾಗಿದೆ. ನಮ್ಮ ಮೈಸೂರು ಜಿಲ್ಲೆಯಲ್ಲಿ ಈಗ ೨ ವರ್ಷಗಳ ಹಿಂದೆ ನಾವು ಒಂದು ಸಮಿತಿಯ ವತಿಯಿಂದ ಪ್ರವಾಸ ಹೋದಾಗ ವಿಶೇಷ ಘಟಕ ಯೋಜನೆಯು ಕೇವಲ ಪರಿಶಿಷ್ಟ ಜಾತಿಯ ಜನರಿಗೆ ಮಾತ್ರ ಅವರ ಏಳಿಗೆಗೆ ಮಾತ್ರ ಎಂಬುದು ಗೊತ್ತಿದ್ದರೂ ಕೂಡ ನಿಮ್ಮ ಅಧಿಕಾರಿಗಳು ತಪ್ಪು ಮಾಡಿದ್ದಾರೆ. ಇದರ ಬಗ್ಗೆ ಸೋಷಿಯಲ್ ವೆಲ್‌ಫೇರ್ ಇಲಾಖೆಯಿಂದಲೂ ಕೂಡ ಸರಿಯಾದ ಮಾರ್ಗದರ್ಶನವಿಲ್ಲ. ನಾವು ಈ ಮಾತನ್ನು ಕೇಳಿದಾಗ ಒಬ್ಬ ಡಿ. ಹೆಚ್. ಒ. ರವರು ಬಹಳ ಖಾರವಾಗಿ ವಾದಮಾಡಿದರು. ಅವರು ಏನು ಹೇಳಿದ್ದಾರೆಂದರೆ, ನಾವು ಯಾವರೀತಿ ಈ ಹಣವನ್ನು ಖರ್ಚು ಮಾಡಬೇಕೆಂಬುದೇ ಗೊತ್ತಿಲ್ಲ ಎಂದರು. ಇಲ್ಲಿ ಯಾರಾದರೂ ಪರಿಶಿಷ್ಟಜಾತಿಯ ಜನರು ಇದ್ದಾರೆಯೇ ಅವರಿಗೋಸ್ಕರ ವಿಶೇಷ ಘಟಕ ಯೋಜನೆಯಲ್ಲಿ ಹಣವನ್ನು ಏನಾದರೂ ಖರ್ಚು ಮಾಡಿದ್ದೀರಾ ಎಂದು ಕೇಳಿದಾಗ ನಮಗೆ ಆರೀತಿಯ ಯಾವುದೇ ನಿರ್ದೇಶನವೂ ಬಂದಿಲ್ಲವೆಂದು ಹೇಳಿದರು. ಪರಿಶಿಷ್ಟ ಜಾತಿಯವರಿಗೆ ಏನು ಹಣವನ್ನು ಖರ್ಚುಮಾಡಬೇಕೋ ಅದು ಸಮರ್ಪಕವಾಗಿ ಖರ್ಚಾಗಿಲ್ಲ. ಆ ಹಣ ಬೇರೆ ಕಡೆಗೆ ಡೈವರ್ಟ್ ಆಗಿದೆ. ಕಾರ್ಯ ವಿಫಲತೆ ಆಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಇದರಬಗ್ಗೆ

ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ವಿದ್ಯುಚ್ಛಕ್ತಿ ಇಲಾಖೆಯ ಕೆಲಸದ ಬಗ್ಗೆ ಈಗಾಗಲೇ ಅನೇಕ ಮಾನ್ಯ ಸದಸ್ಯರು ಹೇಳಿರುವುದರಿಂದ ಮತ್ತೆ ನಾನು ಅದನ್ನೇ ಹೇಳುವುದಕ್ಕೆ ಹೋಗುವುದಿಲ್ಲ.

ಇನ್ನು ನಗರಾಭಿವೃದ್ಧಿಯ ವಿಚಾರದಲ್ಲಿ ಹೇಳುವುದಾದರೆ, ನಗರ ಎಂದರೆ ಕೇವಲ ಬೆಂಗಳೂರು ಮಾತ್ರ ನಗರ ಎಂಬ ಭ್ರಮೆ ಮಾನ್ಯ ಸಚಿವರಿಗೂ ಮತ್ತು ಸರ್ಕಾರದವರಿಗೂ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ಸುಮಾರು ೪ ವರ್ಷದಿಂದಲೂ ನಾನು ಒಂದೇ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದರೂ ಅದು ಇದುವರೆಗೂ ಆಗಿಲ್ಲ. ಮಾನ್ಯ ಸಚಿವರಾಗಲಿ, ಅಥವಾ ಮುಖ್ಯ ಮಂತ್ರಿಗಳಾಗಲಿ ನಮ್ಮ ಬೇಲೂರಿಗೆ ಬಂದರೆ ಗೊತ್ತಾಗುತ್ತದೆ. ನಮ್ಮ ಜನರಿಗೆ ಸಹನೆ ಬಹಳ ಜಾಸ್ತಿಯಾಗಿದೆ. ಕಳೆದ ೪೦ ವರ್ಷಗಳಿಂದಲೂ ನಮ್ಮ ಜನರಲ್ಲಿ ಸಹನೆ ಎಂಬುದು ಇರುವುದರಿಂದಲೇ ನಾವು ಇಷ್ಟೊಂದು ಕಷ್ಟವನ್ನು ಸಹಿಸಿಕೊಂಡು ಬಂದಿರುವುದು. ನಮ್ಮ ಪಟ್ಟಣಕ್ಕೆ ಕುಡಿಯುವ ನೀರು ಬೇಕೆಂದು ೧೧.೭೫ ಲಕ್ಷ ರೂಪಾಯಿಗಳಿಗೆ ಒಂದು ಅಂದಾಜನ್ನು ತಯಾರಿಸಿ ೪ ವರ್ಷಗಳ ಹಿಂದೆ ಸರ್ಕಾರಕ್ಕೆ ಕಳುಹಿಸಿಕೊಟ್ಟು ಅವತ್ತಿನಿಂದ ಇವತ್ತಿನವರೆಗೂ ಒಂದೇ ಸಮನೆ ಒತ್ತಾಯವನ್ನು ಮಾಡುತ್ತಲೇ ಬಂದಿದ್ದೇನೆ. ಆದರೆ ಅದು ಆಗಲಿಲ್ಲ. ಇವತ್ತು ಒಂದು ಮಾತನ್ನು ಹೇಳುವುದಾದರೆ ಸುಮಾರು ೬.೦ ಕೋಟಿ ರೂಪಾಯಿಗಳ ಅಂದಾಜಿನಲ್ಲಿ ಬೆಂಗಳೂರಿನ ಒಂದು ಹೊಸ ಹಂತಕ್ಕೆ ನೀರನ್ನು ಕೊಡಬೇಕೆಂದು ಒಂದು ಯೋಜನೆಯನ್ನು ಹಾಕಿಕೊಂಡಿದ್ದಾರಂತೆ, 'ಬಹುಶಃ ಈ ಬೆಂಗಳೂರಿನಲ್ಲಿ ವಾಸವಾಡುತ್ತಿರುವವರು ಮಾತ್ರ ಜನರು, ಇನ್ನು ಬೇರೆ ಪಟ್ಟಣಗಳಲ್ಲಿ ವಾಸವಾಡುತ್ತಿರುವವರೆಲ್ಲರೂ ದನಗಳೆಂದು ನಿಮ್ಮ ಅಧಿಕಾರಿಗಳು ತಿಳಿದುಕೊಂಡಿದ್ದಾರೆ. ಮತ್ತು ಸರ್ಕಾರ ತಿಳಿದುಕೊಂಡಿದೆ ಎಂದು ನನಗನ್ನಿಸುತ್ತದೆ. ಸ್ವಾಮಿ, ಈ ಬೆಂಗಳೂರು ನಗರಕ್ಕೆ ಯಾವರೀತಿ ನೂರಾರು ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಆಸ್ಪತ್ರೆ, ಕಾಲೇಜು ಮುಂತಾದುವುಗಳನ್ನು ಕಟ್ಟಿಸಿಕೊಡುತ್ತೀರೋ ಅದೇರೀತಿ ಬೇರೆ ಪಟ್ಟಣ ನಗರಗಳಿಗೂ ಹಣವನ್ನು ಖರ್ಚುಮಾಡಿ ಆಸ್ಪತ್ರೆ, ಕಾಲೇಜುಗಳನ್ನು ತೆರೆಯಿರಿ. ನೀವು ಕೇವಲ ಬೆಂಗಳೂರಿಗೆ ಮಾತ್ರವೇ ಹಣ ಖರ್ಚುಮಾಡುತ್ತಿರುವುದರಿಂದ ಹಳ್ಳಿಯ ಜನರು ಸ್ವಾಭಾವಿಕವಾಗಿ ಬೆಂಗಳೂರಿಗೆ ಬರುತ್ತಾರೆ. ಇದು ಸಹಜ. ಇದೇ ಕೆಲಸವನ್ನು ನೀವು ಹಳ್ಳಿಗಳಲ್ಲಿ, ಬೇರೆ ಪಟ್ಟಣ ಪ್ರದೇಶಗಳಲ್ಲಿ ಮಾಡಿದರೆ ಇಲ್ಲಿಗೆ ಆಗ ಯಾರೂ ಬರುವುದಿಲ್ಲ. ಇವತ್ತು ನೀವು ಬೆಂಗಳೂರು ನಗರಕ್ಕೆ ೬೦ ಕೋಟಿ ರೂಪಾಯಿಗಳ ಯೋಜನೆಯನ್ನು ಏನು ಮಾಡುವುದಕ್ಕೆ ಹೊರಟ್ಟಿದ್ದೀರಿ ಇದರಲ್ಲಿ ಹತ್ತನೆ ಒಂದು ಭಾಗವನ್ನು ಬೇರೆ ಪಟ್ಟಣಗಳಿಗೆ ಖರ್ಚುಮಾಡಿ ಕುಡಿಯುವ ನೀರನ್ನು ಒದಗಿಸಿಕೊಡಿ. ಆ ಸಾರಿ ೬ ಪಟ್ಟಣಗಳಿಗೆ ಕುಡಿಯುವ ನೀರನ್ನು ಕೊಡುವುದಾಗಿ ಹೇಳಿಕೊಂಡಿದ್ದೀರಿ. ಇದಕ್ಕೆ ಬದಲು ರಾಜ್ಯದ ಎಲ್ಲಾ ಪಟ್ಟಣಗಳಿಗೂ ಈ ಹಣವನ್ನು ಖರ್ಚುಮಾಡಿ ನೀರನ್ನೊದಗಿಸಿದರೆ ಈ ಬೆಂಗಳೂರಿನ ಜನರು ಯಾರೂ ಕೂಡ ಸಾಯುವುದಿಲ್ಲ. ಬೆಂಗಳೂರಿನಲ್ಲಿರತಕ್ಕ ಜನರಿಗೆ ನೀರು ಸಿಕ್ಕದಿದ್ದರೆ ಕೊನೆಯಪಕ್ಷ ಬಿಯರ್ ಅನ್ನು ಆದರೂ ಕುಡಿದು ಬದುಕುವಷ್ಟು ಆರ್ಥಿಕ ಶಕ್ತಿ ಇದೆ......

ಶ್ರೀ ಬಿ. ಗುರುಪ್ರಸಾದ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಕುಮಾರಸ್ವಾಮಿಯವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ, ಆದರೆ ಅದನ್ನು ಗುರುತು ಹಾಕಿಕೊಳ್ಳುವುದಕ್ಕೆ ಯಾವ ಸಚಿವರೂ ಇಲ್ಲ. ದಯವಿಟ್ಟು ಹೇಳಿ.

ಶ್ರೀ ಹೆಚ್. ಕೆ. ಕುಮಾರಸ್ವಾಮಿ.—ದಯವಿಟ್ಟು ಸಣ್ಣ ಪಟ್ಟಣಗಳನ್ನು ನೆಗ್ಲೆಕ್ಟ್ ಮಾಡಬೇಡಿ. ನಮ್ಮ ಬೇಲೂರಾಗಲಿ, ಬೇರೆ ಊರಾಗಲಿ ಯಾವುದನ್ನೂ ನೆಗ್ಲೆಕ್ಟ್ ಮಾಡದೆ ಬೆಂಗಳೂರನ್ನು ಬಿಟ್ಟು ಬೇರೆ ಯಾವುದೇ ಪಟ್ಟಣಗಳಿಗಾಗಲಿ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಹಣವನ್ನು ಕೇಳಿದರೆ ದಯವಿಟ್ಟು ಕೊಡಬೇಕು.

ಇನ್ನು ಮನೆಗಳನ್ನು ಕಟ್ಟುವ ವಿಚಾರದಲ್ಲಿ ನಜೀರ್‌ಅವಾಜ್ ಎಂದು ಹೊಸ ಯೋಜನೆ ಮಾಡಿದ್ದೀರಿ. ದಿವಂಗತರ ನೆನಪಿನಲ್ಲಿ ಈ ಕಾರ್ಯವನ್ನು ಮಾಡುತ್ತಿದ್ದೀರಿ. ಇದರ ಬಗ್ಗೆ ನನ್ನ ಭಿನ್ನಾಭಿಪ್ರಾಯವಿಲ್ಲ. ಆದರೆ ಪ್ರತಿ ತಾಲ್ಲೂಕ್‌ಗೆ ಕೊಡತಕ್ಕ ಮನೆಗಳ ಸಂಖ್ಯೆಯನ್ನು ಜಾಸ್ತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ನೀವು ಯಾವುದೇ ಒಂದು ಕ್ಷೇತ್ರಕ್ಕೆ ಹೋದರೂ ಕೂಡ ಸುಮಾರು ೫ ಸಾವಿರ ಅರ್ಜಿಗಳು ಈ ಮನೆಯನ್ನು ಕಟ್ಟಿಸಿಕೊಡಬೇಕೆಂದು ಕೋರಿ ಬಂದಿರುತ್ತವೆ. ಉದಾಹರಣೆಗೆ ಹೇಳುವುದಾದರೆ ನನ್ನ ಕ್ಷೇತ್ರದಲ್ಲಿ ಸುಮಾರು ೩೮೩ ಹಳ್ಳಿಗಳಿವೆ. ಆದರೆ ಈ ವರ್ಷಕ್ಕೆ ನನ್ನ ಕ್ಷೇತ್ರಕ್ಕೆ ಮಂಜೂರು ಮಾಡಿರತಕ್ಕದ್ದು ಕೇವಲ ೨೨೦ ಅಥವಾ ೨೩೦. ಇದರಿಂದ ಒಂದೊಂದು ಹಳ್ಳಿಗೆ ಒಂದೊಂದು ಮನೆಯೂ ಕೂಡ ಬರುವುದಿಲ್ಲ. ನೀವು ಯಾವುದೇ ಹಳ್ಳಿಗೆ ಭೇಟಿ ನೀಡಿದರೂ ಕೂಡ ಅವರು ಕೊಡತಕ್ಕ ಅರ್ಜಿಗಳನ್ನು ಓದುವುದಕ್ಕೆ ಉದಾಸೀನವಾಗುತ್ತದೆ. ಏಕೆಂದರೆ ಪ್ರತಿಯೊಬ್ಬರೂ

ಕೂಡ ತಮಗೆ ಮನೆ ಬೇಕು, ಮನೆ ಬೇಕು ಎಂದು ಕೇಳಿರುತ್ತಾರೆ. ಒಂದೊಂದು ಕ್ಷೇತ್ರದಲ್ಲಿ ಕಡಿಮೆ ಎಂದರೆ ವರ್ಷಕ್ಕೆ ಸುಮಾರು ಒಂದು ಸಾವಿರ ಮನೆಗಳನ್ನಾದರೂ ಕಟ್ಟಿಸಿ ಕೊಡಬೇಕು. ಕನಿಷ್ಟ ಪಕ್ಷ ಐನೂರು ಮನೆಗಳನ್ನಾದರೂ ಕೊಡಬೇಕು. ನಮ್ಮ ಪರಿಶಿಷ್ಟ ಜಾತಿ ಜನರ ವಿಷಯದಲ್ಲಿ ಹಲವಾರು ವಿಶೇಷ ಘಟಕ ಯೋಜನೆಗಳಿದ್ದು ಅವುಗಳು ಬಹಳ ಫ್ಲೋಲಾಗುತ್ತಿವೆ. ತೋಟಗಾರಿಕೆ ಇಲಾಖೆ ಹಾಗೂ ಇನ್ನೂ ಎರಡು ಮೂರು ಇಲಾಖೆಗಳನ್ನು ಬಿಟ್ಟರೆ ಉಳಿದ ಎರಡೆರಡು ಇಲಾಖೆಗಳಿಗೆ ಹಂಚಿ ಬಿಟ್ಟಿದ್ದಾರೆ. ಈಗ ಹರಿಜನವಾಡ ಎಂದು ಮಾಡಿದ್ದಾರೆ. ಈ ವಾಡಕ್ಕೆ ಟಾರ್ ರೋಡ್ ಏತಕ್ಕೆ ಬೇಕು ? ಅಲ್ಲಿಗೇನು ಕಾರುಗಳು ಹೋಗುತ್ತವೆಯೇ ಲಕ್ಷುರಿ ಬಸ್‌ಗಳು ಹೋಗುತ್ತವೆಯೇ ? ಎತ್ತಿನಗಾಡಿಗಳೂ ಕೂಡ ಹೋಗುವುದು ಕಷ್ಟ. ನಾಲ್ಕಾರು ಜನರು ಅಲ್ಲಿ ನಡೆದಾಡಬಹುದು. ಅಲ್ಲಿಗೆ ೮-೧೦ ಅಡಿ ರಸ್ತೆಗಳನ್ನು ಮಾಡಿ ಹೈಕ್ಲಾಸ್ ಟಾರ್ ಹಾಕಿಸಿ ಕೊಟ್ಟಿರುತ್ತಾರೆ. ಇದು ನೂರಾರು ವರ್ಷಗಳಾದರೂ ಅದು ಹಾಳಾಗಿ ಹೋಗುವುದಿಲ್ಲ. ಈ ರೀತಿ ಕೆಲಸ ಮಾಡಿದ್ದಾರೆ. ಜನತಾ ಮನೆಗಳಿಗೆ ವಿಶೇಷ ಘಟಕ ಯೋಜನೆಯಿಂದಲಾದರೂ ಹಣವನ್ನು ತೆಗೆದುಕೊಂಡರೂ ಪರವಾಗಿಲ್ಲ. ಜನತಾ ಮನೆಗಳನ್ನು ಜಾಸ್ತಿ ಮಾಡಬೇಕು. ಈ ನಿಟ್ಟಿನಲ್ಲಿ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಸ್ಪೆಷಲ್ ಕಾಂಪೋನೆಂಟ್ ಸ್ಕೀಂನಲ್ಲಿ ಆದ ಹಣದ ವೆಚ್ಚದ ಬಗ್ಗೆ ಕೇಳಿ ಕಾಗದ ಬರೆದು ಕಳುಹಿಸಿದ್ದೆ. ಇದುವರೆಗೂ ಎಷ್ಟು ಹಣ ಖರ್ಚಾಗಿದೆ ಎಂದು ಕೇಳಿದ್ದಕ್ಕೆ ಖರ್ಚಾಗದೆ ಹಣ ಉಳಿದಿದೆ ಎಂದು ಹೇಳಿದ್ದಾರೆ. ಮಾನ್ಯ ಕುಮಾರಸ್ವಾಮಿಯವರು ಬಹಳ ಸ್ವಾರಸ್ಯವಾಗಿ ಮಾತನಾಡಿದರು. ಸ್ಪೆಷಲ್ ಕಾಂಪನೆಂಟ್ ಸ್ಕೀಮ್ ಮುಖಾಂತರ ನಿಮ್ಮ ವರ್ಗದ ಜನತೆಯ ಪ್ರಾಮಾಣಿಕ ಅಭಿವೃದ್ಧಿಗಾಗಿ ಕೊಟ್ಟಂತ ಹಣದಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡದೆ ಹಾಗೆಯೇ ಉಳಿಸಿಕೊಂಡು ಜಿಲ್ಲಾಪರಿಷತ್ತಿಗೆ ಕೊಟ್ಟಿರುತ್ತಾರೆ. ಜಿಲ್ಲಾ ಪರಿಷತ್ತುಗಳು ಎಷ್ಟು ಪ್ರೀತಿಯಿಂದ ನೋಡುತ್ತವೆನ್ನುವುದು ತಮಗೆ ಗೊತ್ತಿರುವ ವಿಷಯ. ಈವತ್ತಿನವರೆಗೂ ಅವರು ಹಣವನ್ನು ಖರ್ಚು ಮಾಡಿಲ್ಲ. ಕೇಂದ್ರ ಸರ್ಕಾರದವರು ಖರ್ಚು ಮಾಡಲು ಬಿಡುಗಡೆ ಮಾಡಿದ ಹಣ ನೇರವಾಗಿ ರಾಜ್ಯ ಸರ್ಕಾರದವರು ನಿಮ್ಮ ವರ್ಗದ ಜನರ ಅಭಿವೃದ್ಧಿಗಾಗಿ ಖರ್ಚು ಮಾಡಬೇಕೆ ವಿನಃ ಜಿಲ್ಲಾಪರಿಷತ್ತಿಗೆ ಮಂಡಲ ಪಂಚಾಯಿತಿಗಳಿಗೆ ಕೊಡಬಾರದು. ಬೇಕಾದರೆ ನೀವು ಕಾನೂನಿಗೆ ತಿದ್ದುಪಡಿ ಮಾಡಿ ಎಂದು ಸಲಹೆ ಕೊಡುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಅವರು ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದಾರೆ. ಆ ಪತ್ರದ ಬಗ್ಗೆ ತಾವು ಅನುಮತಿ ಕೊಟ್ಟರೆ ಎರಡು ಮಾತುಗಳನ್ನು ಹೇಳ ಬಯಸುತ್ತೇನೆ. ಮಾನ್ಯ ಸದಸ್ಯರಾದ ಬಸವಲಿಂಗಪ್ಪನವರು ಸ್ಪೆಷಲ್ ಕಾಂಪೋನೆಂಟ್ ಸ್ಕೀಮ್‌ಗಾಗಿ ಕೇಂದ್ರ ಸರ್ಕಾರದಿಂದ ಬರತಕ್ಕಂಥ ಹಣ ಹೇಗೆ ಖರ್ಚಾಗುತ್ತದೆ ಎಂದು ಕೇಳಿದ್ದಾರೆ. ಅದರ ಬಗ್ಗೆ ಸದನದ ಎಲ್ಲಾ ಸದಸ್ಯರಿಗೂ ತಿಳಿಸಬಯಸುತ್ತೇನೆ. ತಾವು ಅನುಮತಿ ಕೊಟ್ಟರೆ ಪ್ರಸ್ತಾಪ ಮಾಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ನನ್ನ ಅಭಿಪ್ರಾಯವನ್ನು ಹೇಳಿದೆ, ಮಾನ್ಯ ಸಚಿವರು ಉತ್ತರ ಹೇಳಲಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಇವರು ತಮ್ಮ ಪತ್ರದಲ್ಲಿ ಕಳೆದ ವರ್ಷದ ಆಯವ್ಯಯದಲ್ಲಿ ಸ್ಪೆಷಲ್ ಕಾಂಪೋನೆಂಟ್ ಸ್ಕೀಮ್‌ಗಾಗಿ ಬಜೆಟ್‌ನಲ್ಲಿ ಎಷ್ಟು ಹಣವನ್ನು ಕೊಟ್ಟಿದ್ದರು. ಅದರಲ್ಲಿ ಡಿಸೆಂಬರ್ ತಿಂಗಳೊಳಗೆ ಖರ್ಚು ಮಾಡಿ ಇನ್ನು ಮೂರು ತಿಂಗಳಲ್ಲಿ ಖರ್ಚು ಮಾಡಲು ಸಾಧ್ಯವಾಗಿಲ್ಲದ ಕಡೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ನಾವು ಅದರ ಬಗ್ಗೆ ಅಂಕಿಅಂಶಗಳನ್ನು ಕೊಟ್ಟು ಸ್ಪೆಷಲ್ ಕಾಂಪೋನೆಂಟ್ ಸ್ಕೀಮ್‌ಗಾಗಿ ಎಷ್ಟು ಖರ್ಚಾಗಿದೆ ಎಷ್ಟು ಖರ್ಚಾಗಿಲ್ಲವೆನ್ನುವ ಬಗ್ಗೆ ಸದನಕ್ಕೆ ತಿಳಿಸಿದರೆ ಸಂತೋಷಪಡುತ್ತಾರೆಂದು ತಿಳಿದುಕೊಂಡಿದ್ದೇನೆ. ಆದ್ದರಿಂದ ಈ ಸೆಷನ್ ಮುಗಿಯುವುದರೊಳಗಾಗಿ ಅರ್ಧ ಗಂಟೆ ಕಾಲಾವಕಾಶ ಮಾಡಿಕೊಟ್ಟರೆ ಎಲ್ಲ ಮಾಹಿತಿಗಳನ್ನು ಕೊಡುತ್ತೇನೆಂದು ಹೇಳಲು ಇಷ್ಟಪಡುತ್ತೇನೆ.

ಅಧ್ಯಕ್ಷರು.—ನಾವು ಪತ್ರ ಬರೆದು ಕಳೆದ ೯ ತಿಂಗಳಲ್ಲಿ ಸ್ಪೆಷಲ್ ಕಾಂಪೋನೆಂಟ್ ಸ್ಕೀಮ್‌ಗಾಗಿ ಎಷ್ಟು ಹಣ ಬಂದಿತ್ತು, ಎಷ್ಟು ಹಣ ಖರ್ಚು ಮಾಡಿದ್ದೀರೆಂದು ಕೇಳಿದ್ದಕ್ಕೆ ಮುಕ್ಕಾಲುಭಾಗ ಹಣ ಕೊಟ್ಟಿದ್ದರೆ ಅದರಲ್ಲಿ ಕಾಲು ಭಾಗ ಹಣ ಖರ್ಚಾಗಿದೆ ಎಂದು ನಿಮ್ಮ ಅಧಿಕಾರಿಗಳೇ ಮಾಹಿತಿಯನ್ನು ನೀಡಿದ್ದಾರೆ. ನಿಮಗೆ ಉತ್ತರ ತಪ್ಪಾಗಿ ಬರೆದಿದ್ದಾರೆ. ಮಾನ್ಯ ಬಿ. ಜಿ. ಜಮಖಂಡಿಯವರಿಗೆ ಉತ್ತರ ಬರೆದಿದ್ದಾರೆ. ಅನೇಕ ಸಲ ಅಧಿಕಾರಿಗಳು ನಮಗೆ ಒಂದು ಉತ್ತರ ಕೊಡುತ್ತಾರೆ ಜಿಲ್ಲಾ

ಪರಿಷತ್ತಿಗೆ ಒಂದು ರೀತಿಯ ಉತ್ತರ ಕೊಡುತ್ತಾರೆ. ಬಹಳ ಕಡಿಮೆ ಹಣವನ್ನು ಖರ್ಚು ಮಾಡಿದ್ದಾರೆ. ತಾವು ಮಂತ್ರಿಗಳಿದ್ದೀರಿ. ಮಾನ್ಯ ಬಿ. ಜಿ. ಜಮಖಂಡಿಯವರಿಗೆ ಏನು ಉತ್ತರವನ್ನು ಕೊಟ್ಟಿದ್ದಾರೆ, ಅದನ್ನು ನೋಡಿಕೊಂಡು ತಾವು ಮಾತನಾಡಿ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ನಾನು ಒಂದೇ ನಿಮಿಷದಲ್ಲಿ ಮುಗಿಸುತ್ತೇನೆ. ದಯವಿಟ್ಟು ಅಲೋ ಮಾಡಿ. ಮಾನ್ಯ ಬಸವಲಿಂಗಪ್ಪನವರಾಗಲೀ, ಮಾನ್ಯ ಕುಮಾರಸ್ವಾಮಿಯವರಾಗಲೀ ಈ ಬಗ್ಗೆ ಹೇಳಿದಾಗ ಅದು ನಾಳೆ ಪತ್ರಿಕೆಗಳಲ್ಲಿ ಬರುತ್ತದೆ. ಅದರಿಂದ ನನ್ನ ಇಲಾಖೆ ಬಗ್ಗೆ ರಿಫ್ಲೆಕ್ಟ್ ಆಗುತ್ತದೆ. ನಾನು ಯಾರನ್ನೂ ಡಿಫೆಂಡ್ ಮಾಡುವುದಿಲ್ಲ. ಯಾವುದೇ ಅಧಿಕಾರಿಗಳನ್ನು ಡಿಫೆಂಡ್ ಮಾಡುವುದಕ್ಕೆ ನಾನು ಈ ಸದನದಲ್ಲಿ ಕಳೆದ ಆರು ವರ್ಷಗಳಿಂದ ಪ್ರಯತ್ನ ಮಾಡಿಲ್ಲ. ಆ ರೀತಿ ಮಾಡುವುದೂ ಇಲ್ಲ. ನನಗೆ ಅಧಿಕಾರಿಗಳು ತಪ್ಪು ಮಾಹಿತಿ ಕೊಟ್ಟಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ನನಗೆ ಇದರ ಬಗ್ಗೆ ಹೇಳಲು ದಯವಿಟ್ಟು ಅರ್ಧ ಗಂಟೆ ಅವಕಾಶ ಕೊಡಿ. ಎರಡನೆಯದಾಗಿ ಕೇಂದ್ರ ಸರ್ಕಾರದಿಂದ ಬಂದಿರತಕ್ಕ ಹಣ ಉಪಯೋಗ ಆಗಿಲ್ಲ ಎಂದು ಮಾನ್ಯ ಬಸವಲಿಂಗಪ್ಪನವರು ಹೇಳಿದ್ದಾರೆ. ಈ ಬಗ್ಗೆ ಅವರಿಗೆ ಯಾರೋ ತಪ್ಪು ಮಾಹಿತಿ ಕೊಟ್ಟಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ತಾವು ಅಧ್ಯಕ್ಷರ ಕಾಗದವನ್ನೇ ನೋಡಿ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಈ ವರ್ಷ ಕೇಂದ್ರ ಸರ್ಕಾರದಿಂದ ಬಂದಿರುವ ಸ್ಪೆಷಲ್ ಅಸಿಸ್ಟೆನ್ಸ್ ಎಲ್ಲವನ್ನೂ ಬಿಡುಗಡೆ ಮಾಡಿದ್ದೇವೆ. ಎರಡನೇ ಕಂತಿನಲ್ಲಿ ಬರುವ ಹಣ ಈ ತಿಂಗಳಿನಲ್ಲಿ ಬಂದಿದೆ. ನಾನು ಎಲ್ಲಾ ಜಿಲ್ಲಾಪರಿಷತ್‌ಗಳಿಗೂ ಹೋಗಿ ಸ್ವತಃ ರಿವ್ಯೂ ಮಾಡಿದ್ದೇನೆ. ಯಾರಿಗೆ ಅವಶ್ಯಕತೆ ಇದೆ ಅವರಿಗೆ ಹಣ ಬಿಡುಗಡೆ ಮಾಡುತ್ತಿದ್ದೇವೆ.

ಅಧ್ಯಕ್ಷರು.—ತಾವು ಬಿ. ಜಿ. ಜಮಖಂಡಿಯವರ ಪ್ರಶ್ನೆಗೆ ಉತ್ತರ ಕೊಟ್ಟ ಮಾಹಿತಿ ಪ್ರಕಾರ ನಾನು ಪತ್ರ ಬರೆದಿದ್ದೇನೆ. ಮುಕ್ಕಾಲು ಭಾಗ ಹಣ ಖರ್ಚು ಮಾಡದೆ ಕಾಲು ಭಾಗ ಮಾತ್ರ ಖರ್ಚು ಮಾಡಿದ್ದಾರೆ, ಅದನ್ನು ಆದಷ್ಟು ಜಾಗ್ರತೆ ಖರ್ಚು ಮಾಡಿ, ಯಾರು ಹಣ ಖರ್ಚು ಮಾಡಿಲ್ಲ ಆ ಅಧಿಕಾರಿ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ತಾವು ಪತ್ರ ಬರೆದ ಬಗ್ಗೆ ನಾನು ಏನೂ ಹೇಳುತ್ತಿಲ್ಲ. ಇದರ ಬಗ್ಗೆ ವಿವರವಾದ ಹೇಳಿಕೆಯನ್ನು ಮಂಗಳವಾರ ಹೇಳುತ್ತೇನೆ. ದಯವಿಟ್ಟು ಅವಕಾಶ ಮಾಡಿಕೊಡಿ.

ಶ್ರೀ ಬಿ. ಬಸವಲಿಂಗಪ್ಪ.—ಕೇಂದ್ರ ಸರ್ಕಾರದವರು ಪರಿಶಿಷ್ಟ ಜಾತಿಯವರ ಪುರೋಭಿವೃದ್ಧಿಗಾಗಿ ಹಣವನ್ನು ಖರ್ಚು ಮಾಡಬೇಕೆಂದು ಹಣ ಕೊಟ್ಟಿದ್ದಾರೆ. ಮೇ ತಿಂಗಳಲ್ಲಿ ಅದು ಬಂದಿದೆ. ಮೇ ತಿಂಗಳಿನಿಂದ ಇವತ್ತಿನವರೆಗೂ ಹಣವನ್ನು ಹಾಗೇ ಇಟ್ಟು ಈಗ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಮೂಲಕ ಖರ್ಚು ಮಾಡಬೇಕೆಂದು ಹೇಳಿದರೆ ಹೇಗಾಗುತ್ತದೆ ? ಈ ಹಣವನ್ನೆಲ್ಲಾ ಬೇರೆಯದಕ್ಕೆ ಖರ್ಚು ಮಾಡಿದ್ದಾರೆ. ಇದಕ್ಕೆ ಮಾತ್ರ ಖರ್ಚು ಮಾಡಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಮಾನ್ಯ ಬಸವಲಿಂಗಪ್ಪನವರು ದಲಿತರ ನಾಯಕರು. ಈ ಮನೆಯ ಹಿರಿಯ ಸದಸ್ಯರು. ಅವರಿಗೆ ಅಪಾರವಾದ ಅನುಭವ ಇದೆ. ದೊಡ್ಡ ಕ್ರಾಂತಿಕಾರರು. ಅವರಿಗೆ ಹೋಲಿಸಿದರೆ ನಾನು ಸಣ್ಣವನು. ಅವರ ವ್ಯಕ್ತಿತ್ವದ ಮುಂದೆ ನಾನು ಹುಲು ಮಾನವ. ಆದ್ದರಿಂದ ಬಹಳ ವಿನಯದಿಂದ ಮಾನ್ಯ ಸದಸ್ಯರಿಗೆ ಹೇಳುವುದೇನೆಂದರೆ ಕಳೆದ ೨೨ ವರ್ಷಗಳಲ್ಲಿ ಕಾರ್ಪೋರೇಷನ್‌ಗಳಲ್ಲಿ, ಮುನಿಸಿಪಾಲಿಟಿಗಳಲ್ಲಿ, ಯೂನಿವರ್ಸಿಟಿಗಳಲ್ಲಿ ಜಿಲ್ಲಾಪರಿಷತ್‌ಗಳಲ್ಲಿ ಮತ್ತು ಹಿಂದಿನ ಜಿಲ್ಲಾಬೋರ್ಡ್‌ಗಳಲ್ಲಿ ನಡೆದಿರತಕ್ಕ ಸ್ಪೆಷಲ್ ಕಾಂಪೋನೆಂಟ್ ಸ್ಕೀಮಿನ ರಿವ್ಯೂ ಮಾಡುವುದಕ್ಕೆ ಯಾರೂ ಹೋಗಿರಲಿಲ್ಲ. ಅದನ್ನು ನಾನು ಮಾಡಿದ್ದೇನೆ.

ಶ್ರೀ ಬಿ. ಗುರುಪ್ರಸಾದ್.—ಒಂದು ನಿಮಿಷ........

ಅಧ್ಯಕ್ಷರು.—ಈಗ ಬೇಡ, ಮಂಗಳವಾರ ಮಾತನಾಡಿ. ಈಗ ಕೂಡ್ರಿ ನೀವು. ಕುಮಾರಸ್ವಾಮಿಯವರು ಮಾತನಾಡಲಿ.

ಶ್ರೀ ಬಿ. ಗುರುಪ್ರಸಾದ್.—ಒಂದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು.—ಬೇಡ. ಮುಂದೆ ನಿಮಗೆ ಅವಕಾಶ ಕೊಡುತ್ತೇನೆ. ಈಗ ಕುಮಾರಸ್ವಾಮಿಯವರೇ, ನೀವು ಮಾತನಾಡಿ.

ಶ್ರೀ ಹೆಚ್. ಕೆ. ಕುಮಾರಸ್ವಾಮಿ.—ಮಾನ್ಯ ಅಧ್ಯಕ್ಷರೇ, ಕಾಲೇಜು ಶಿಕ್ಷಕರ ನೇಮಕಾತಿ ಬಗ್ಗೆ ನಾನು ಮಾತನಾಡುತ್ತಿದ್ದೆ. ಜೂನಿಯರ್ ಕಾಲೇಜುಗಳಲ್ಲಿ, ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪಾರ್ಟ್‌ಟೈಮ್ ಲೆಕ್ಚರರ್ಸ್ ಅನ್ನು ಅಪಾಯಿಂಟ್ ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ. ಆದರೆ ಒಬ್ಬರನ್ನು ಮಾತ್ರ ನೇಮಕ ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ. ನಮ್ಮ ಬೇಲೂರು ಕಾಲೇಜಿನಲ್ಲಿ ಫಸ್ಟ್ ಪಿ. ಯು. ಸಿ. ಯಲ್ಲಿ ೫೦೦ ಜನ ವಿದ್ಯಾರ್ಥಿಗಳು ಸೆಕೆಂಡ್ ಪಿ. ಯು. ಸಿ. ಯಲ್ಲಿ ೩೦೦ ಜನ ವಿದ್ಯಾರ್ಥಿಗಳು ಇದ್ದಾರೆ. ಇಂಗ್ಲೀಷ್ ಲೆಕ್ಚರರ್ಸ್ ಇಲ್ಲ. ಈಗ ಒಂದು ಸುಗ್ರೀವಾಜ್ಞೆ ಹೊರಡಿಸಿದ್ದೀರಿ, ಕಾಪಿ ಹೊಡೆಯಬಾರದೆಂದು ಎಂದು ಲೆಕ್ಚರರ್‌ಗಳನ್ನೂ ಕೊಡುವುದಿಲ್ಲ, ಕಾಪೀನೂ ಹೊಡೆಯಬೇಡಿ ಎಂದು ಹೇಳುತ್ತೀರಿ. ಮತ್ತೆ ನಾವೇನು ಮಾಡಬೇಕು ಎಂದು ವಿದ್ಯಾರ್ಥಿಗಳು ಕೇಳುತ್ತಾರೆ. ಒಂದು ರೀತಿಯಲ್ಲಿ ಸುಗ್ರೀವಾಜ್ಞೆ ಹೊರಡಿಸಿರುವುದು ಸರಿ. ಆದರೆ ಇನ್ನೊಂದು ಮುಖದಿಂದ ನೋಡಿದಾಗ ಸರಿಯಿಲ್ಲ. ಕಳ್ಳಕಾಕರನ್ನು, ಕಳ್ಳಸಾಗಾಣಿಕೆದಾರರನ್ನು ಹಿಡಿಯುವುದಕ್ಕೆ ಇಂಥ ಸುಗ್ರೀವಾಜ್ಞೆಗಳನ್ನು ಹೊರಡಿಸುವುದು ಬಿಟ್ಟು ವಿದ್ಯಾರ್ಥಿಗಳಿಗೋಸ್ಕರ ಏತಕ್ಕೆ ಹೊರಡಿಸುತ್ತಾರೋ ನನಗೆ ಗೊತ್ತಿಲ್ಲ. ಪೋಲೀಸರು ಲಾಠಿಯಿಂದ ಹೆದರಿಸಿದರೆ ವಿದ್ಯಾರ್ಥಿಗಳು ಓದುವುದಿಲ್ಲ. ಇಂಥ ಜನರಿಗೋಸ್ಕರ ಸುಗ್ರೀವಾಜ್ಞೆ ಹೊರಡಿಸಿರತಕ್ಕ ಅವಶ್ಯಕತೆ ಇಲ್ಲ. ಕಾಲೇಜುಗಳಲ್ಲಿ ಸರಿಯಾಗಿ ಇಂಗ್ಲೀಷ್ ಲೆಕ್ಚರರ್ಸ್ ಮತ್ತು ಮ್ಯಾಥಮೆಟಿಕ್ಸ್ ಲೆಕ್ಚರರ್ಸ್ ಅಪಾಯಿಂಟ್ ಮಾಡಿ. ಎಲ್ಲಾ ಕಾಲೇಜುಗಳಿಗೂ ಲೆಕ್ಚರರ್ಸ್ ಅನ್ನು ಕೊಡಿ. ಆಗ ವಿದ್ಯಾರ್ಥಿಗಳು ಕಾಪಿ ಹೊಡೆದರೆ ಕೇಳಿ. ಎಲ್ಲಾ ಸರಿಯಾಗಿದ್ದರೆ ಅವರು ಕಾಪಿ ಹೊಡೆಯುವುದಿಲ್ಲ. ಸರ್ಕಾರ ಈ ಬಗ್ಗೆ ಕೆಲಸ ಮಾಡಬೇಕಾಗುತ್ತದೆ. ಕೊನೆಯ ಪಕ್ಷ ಈ ಸಾರಿಯ ಅಕಡೆಮಿಕ್ ವರ್ಷದಿಂದಲಾದರೂ ದಯಮಾಡಿ ಲೆಕ್ಚರರ್ಸ್ ಅನ್ನು ನೇಮಕ ಮಾಡಿಕೊಳ್ಳತಕ್ಕಂತಹ ಕೆಲಸವನ್ನು ಮಾಡಬೇಕೆಂದು ಹೇಳುತ್ತೇನೆ. ಇನ್ನು ಒಂದೆರಡು ವಿಚಾರಗಳನ್ನು ತಿಳಿಸಿ ನನ್ನ ಮಾತುಗಳನ್ನು ೨-೩ ನಿಮಿಷದಲ್ಲಿ ಮುಗಿಸುತ್ತೇನೆ,

ಹುಡ್ಕೋ ಯೋಜನೆಯ ನೆರವಿನಿಂದ ಸುಮಾರಾಗಿ ರಾಜ್ಯದಾದ್ಯಂತ ಹೌಸಿಂಗ್ ಬೋರ್ಡಿನ ವತಿಯಿಂದ ಅನೇಕ ನಗರಗಳಲ್ಲಿ ಮನೆಗಳನ್ನು ಕಟ್ಟಿಸಿದ್ದಾರೆ. ಇದು ಇಲಾಖೆಯ ಉದಾಸೀನತೆಯಿಂದಾಗಿ ಏನಾಗಿದೆ ಎಂದರೆ, ೧೯೭೭ರಲ್ಲಿ ನಮ್ಮ ಹಾಸನ ನಗರದಲ್ಲಿ ಸುಮಾರು ೮೫೦ ಮನೆಗಳನ್ನು ಕಟ್ಟುವುದಕ್ಕೆ ಟೆಂಡರ್‌ನ್ನು ಕರೆದರು. ೨ ವರ್ಷಗಳಲ್ಲಿ ಮನೆ ಕಟ್ಟಿಸಿಕೊಡುತ್ತೇವೆಂದು ಹೌಸಿಂಗ್ ಬೋರ್ಡಿನವರು ವಾಗ್ದಾನ ಮಾಡಿದರು. ಮಾನ್ಯ ಲಕ್ಷ್ಮೀಸಾಗರ್ ರವರು ಸಹ ಅಲ್ಲಿಗೆ ಬಂದಿದ್ದರು. ಮಾನ್ಯ ವೈ. ಕೆ. ರಾಮಯ್ಯನವರು ಹೌಸಿಂಗ್ ಬೋರ್ಡಿನ ಛೇರ್ಮನ್ನರಾಗಿದ್ದಾಗ ಅಲ್ಲಿಗೆ ಬಂದಿದ್ದರು. ನಮ್ಮ ಮಂತ್ರಿಗಳು ಬಂದರೆಅಥವಾ ಭೇಟಿ ಕೊಟ್ಟರೆ ಏನಾದರೂ ಕೆಲಸವಾಗುತ್ತದೆಂಬ ನಂಬಿಕೆ ಈಗ ಜನಕ್ಕೆ ಇಲ್ಲದ ಹಾಗೆ ಆಗಿಬಿಟ್ಟಿದೆ. ಇವರು ಬಂದಾಗಲೆಲ್ಲಾ ಜನ ಅರ್ಜಿ ಕೊಡುತ್ತಾರೆ, ಅದಕ್ಕೆ ಮಂತ್ರಿಗಳು ಆಶ್ವಾಸನೆಯನ್ನು ಕೊಡುತ್ತಾರೆ. ಆದರೆ ಯಾವುದೂ ಕೆಲಸವಾಗುವುದಿಲ್ಲ. ಏತಕ್ಕಾಗಿ ಅರ್ಜಿಗಳನ್ನು ಕೊಡಬೇಕು ಎನ್ನುವ ಮಟ್ಟಿಗೆ ಜನರು ಬಂದಿದ್ದಾರೆ. ಅಲ್ಲಿ ಕಟ್ಟಿರುವಂತಹದ್ದು ಮೂರು ರೀತಿಯ ಮನೆಗಳು. ಇ. ಡಬ್ಲ್ಯೂ. ಎಸ್., ಎಲ್. ಐ. ಜಿ ಹಾಗೂ ಎಂ. ಐ. ಜಿ. ಈಗ ಆ ಮನೆಗಳ ಬೆಲೆಯನ್ನು ಹಿಂದೆ ನಿಗದಿ ಮಾಡಿದ್ದಕ್ಕಿಂತ ೪-೪ ಪಟ್ಟು ಏರಿಸಿದ್ದಾರೆ. ಜನ ಕೊಡುವುದಕ್ಕೆ ತಯಾರಿದ್ದಾರೆ. ಆದರೆ ಈ ಜಾಸ್ತಿ ಮಾಡಿರುವುದಕ್ಕೆ ಕಾರಣ ಬೇಕಲ್ಲ, ಅಲ್ಲಿ ರಸ್ತೆಗಳನ್ನು ಮಾಡಿಕೊಡಬೇಕು. ಚರಂಡಿಗಳನ್ನು ಮಾಡಿಕೊಡಬೇಕು. ಆದರೆ ಇದ್ಯಾವುದನ್ನೂ ಗಮನಿಸಿಲ್ಲ. ಅಲ್ಲಿರತಕ್ಕ ಇಂಜಿನೀಯರ್‌ಗಳು ಇದ್ಯಾವುದರ ಬಗ್ಗೆಯೂ ಗಮನ ಹರಿಸಿಲ್ಲ. ಅಲ್ಲಿ ಮನೆ ಕಟ್ಟುವ ಕೆಲಸವನ್ನು ಏನು ಮಾಡಿದ್ದಾರೆ, ಅದರ ಗುಣ ಮಟ್ಟ ಹೇಗಿದೆ ಎಂಬುದನ್ನೂ ನೋಡುವುದಕ್ಕೆ ಹೋಗಿಲ್ಲ. ಇವರು ಹೌಸಿಂಗ್ ಬೋರ್ಡಿನಿಂದ ಕಟ್ಟಿಸಿರತಕ್ಕ ಮನೆಗಳು ಏನು ಇವೆ, ಅವುಗಳಿಗಿಂತಾ ಜನತಾ ಮನೆಗಳೇ ಎಷ್ಟೋ ವಾಸಿ. ಅಲ್ಲಿ ಸಿಮೆಂಟ್‌ನಿಂದ ಕಟ್ಟಿಸಿರತಕ್ಕ ಮನೆಗಳು ಎಂಬುದಾಗಿ ಹೇಳುತ್ತಾರೆ. ಆದರೆ ಅಲ್ಲಿ ಸಿಮೆಂಟ್ ಇಲ್ಲವೇ ಇಲ್ಲ. ಮರಳು ಹಾಗೂ ಇಟ್ಟಿಗೆ ಎರಡೇ ಇವೆ. ಸಿಮೆಂಟ್ ಇಲ್ಲವೇ ಇಲ್ಲ. ಜೊತೆಗೆ ಹಣವನ್ನು ಹೆಚ್ಚು ಮಾಡಿರುವುದರ ಬಗ್ಗೆ ಕಾರಣವನ್ನು ಕೊಡಬೇಕು. ಹಾಸನ, ರಾಯಚೂರು, ಹಾಗೂ ಬೆಂಗಳೂರು ನಗರಗಳಲ್ಲಿ ಏನು ನಿವೇಶನಗಳನ್ನು ಹರಾಜು ಮಾಡುತ್ತೀರಿ. ನಿವೇಶನಗಳನ್ನು ಹರಾಜು ಮಾಡತಕ್ಕಂತಹ ಹಣ ಏನು ಇದೆ, ಅದೇ ರೀತಿಯ ದರವನ್ನು ಇದಕ್ಕೂ ಅನ್ವಯ ಮಾಡಿ. ಆದರೆ ಇದರಿಂದ

೪-೦೦ ಪಿ. ಎಂ.

ಏನು ಹಣವನ್ನು ಕಲೆಕ್ಟ್ ಮಾಡುತ್ತೀರಿ, ಅದನ್ನು ಆಯಾ ಏರಿಯಾದ ಅಭಿವೃದ್ಧಿಗಾಗಿಯೇ ಖರ್ಚು

ಮಾಡಬೇಕು. ಅದನ್ನು ಬಿಟ್ಟು ಆ ಎಲ್ಲಾ ಹಣವನ್ನು ತಂದು ಬೆಂಗಳೂರಿನಲ್ಲಿರುವ ಕೇಂದ್ರ ಕಛೇರಿಯಲ್ಲಿಟ್ಟುಕೊಂಡು ಇನ್ಯಾವುದೋ ಕೆಲಸಕ್ಕೆ ಖರ್ಚು ಮಾಡುತ್ತೀರಿ. ಇದರಿಂದಾಗಿ ಈ ಮನೆಗಳ ದರವನ್ನು ಹೆಚ್ಚು ಮಾಡಿದರು. ಎರಡು ವರ್ಷಗಳ ಹಿಂದೆಯೇ ಆ ಮನೆಗಳನ್ನು ಕಟ್ಟಿಸಿಕೊಟ್ಟಿದ್ದೇ ಆದರೆ, ಇಷ್ಟು ಹಣವನ್ನು ಹೆಚ್ಚು ಕೊಡುವಂತಹ ಅವಶ್ಯಕತೆ ಇರಲಿಲ್ಲ. ೭-೮ ವರ್ಷಗಳಷ್ಟು ತಡ ಮಾಡಿದ್ದರಿಂದ, ಸಹಜವಾಗಿ ಅದರ ಸಾಮಗ್ರಿಗಳ ದರ ಜಾಸ್ತಿಯಾಗುತ್ತದೆ. ಅದರ ಬೆಲೆ ಜಾಸ್ತಿಯಾಗುತ್ತಿದೆ. ಇದು ಇಲಾಖೆಯ ಉದಾಸೀನತೆಯಿಂದ ಆಗಿರತಕ್ಕಂತಹದ್ದು. ರೇಟನ್ನು ಜಾಸ್ತಿ ಮಾಡಿದ ಮೇಲೆ ಅಲ್ಲಿಯ ಸವಲತ್ತನ್ನೂ ಕೂಡ ಜಾಸ್ತಿ ಮಾಡಬೇಕು. ಇನ್ನು ಕಂತು ಕಟ್ಟುವ ವಿಚಾರದಲ್ಲಿ ಹೇಳಬೇಕೆಂದರೆ, ಈ ಮನೆಗಳನ್ನು ಪಡೆದವರಲ್ಲಿ ಸರ್ಕಾರಿ ನೌಕರರೂ ಕೂಡ ಇದ್ದಾರೆ. ಅವರೆಲ್ಲರೂ ಮಿನಿಮಮ್ ರಿಸೋರ್ಸಸ್ ಇಟ್ಟುಕೊಂಡಿರತಕ್ಕಂತಹವರು. ಅಂತಹವರು ಒಂದೇ ಸಾರಿ ೨೫-೩೦ ಸಾವಿರ ರೂಪಾಯಿಗಳನ್ನು ವರ್ಷಕ್ಕೆ ಕಟ್ಟಬೇಕೆಂದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಯಾರ್ಯಾರು ಮನೆಗಳನ್ನು ಅಲಾಟ್ ಮಾಡಿಸಿಕೊಂಡಿರುತ್ತಾರೆ, ಅವರೆಲ್ಲರಿಗೂ, ಕಡ್ಡಾಯವಾಗಿ ಸಾಲ ಕೊಡತಕ್ಕಂತಹ ವ್ಯವಸ್ಥೆಯನ್ನು ಮಾಡಬೇಕು. ಈ ರೀತಿ ಮಾಡುವುದರಿಂದ ಹಣವನ್ನು ಅವರ ಸಂಬಳದಲ್ಲಿ ಹಿಡಿದುಕೊಳ್ಳಬಹುದು. ಇನ್ನೂ ಮನೆಗಳ ಬೆಲೆಯನ್ನು ಪುನಃ ಜಾಸ್ತಿ ಮಾಡುವ ಉದ್ದೇಶ ಇದೆ ಎಂಬುದಾಗಿ ಹಾಸನ ನಗರದಲ್ಲಿ ಮಾತನಾಡಿಕೊಳ್ಳುತ್ತಿದ್ದಾರೆಂದು ಜನ ನಮ್ಮ ಹತ್ತಿರ ಬಂದು ಹೇಳುತ್ತಿದ್ದಾರೆ. ಪರಿಶಿಷ್ಟ ಜಾತಿಯವರಿಗೆ ಹೆಚ್ಚು ಕಂತುಗಳ ಮೂಲಕ ಹಣವನ್ನು ಕಟ್ಟುವ ವ್ಯವಸ್ಥೆ ಮಾಡಬೇಕು.

ಇನ್ನು ನೀರಾವರಿಯ ಬಗ್ಗೆ ಎರಡು ವಿಚಾರಗಳನ್ನು ಮಾತ್ರ ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ನನ್ನ ಕ್ಷೇತ್ರದಲ್ಲಿ ಯಗಚಿ ಯೋಜನೆ ಎಂಬುದಾಗಿ ಇದೆ. ಅದಕ್ಕಾಗಿ ೩೫ ಕೋಟಿ ಅಂದಾಜು ಆಗಿರತಕ್ಕಂತಹದ್ದು. ಈ ಯೋಜನೆಯ ಕೆಲಸ ನಡೆಯುತ್ತಿದೆ. ಇದರ ಪುನರ್ವ್ಯವಸ್ಥೆ ಸರಿಯಾಗಿ ಆಗಲಿಲ್ಲ. ವಾರಾಹಿ ಯೋಜನೆಯಿಂದ ರೈತರು ಮುಳುಗಡೆಯಾಗಿರಬಹುದು. ಚಕ್ರ ಯೋಜನೆಯಿಂದ ರೈತರು ಮುಳುಗಡೆ ಯಾಗಿರಬಹುದು. ಅಪ್ಪರ್ ಕೃಷ್ಣ ಯೋಜನೆಯಿಂದ ರೈತರು ಮುಳುಗಡೆಯಾಗಿರಬಹುದು. ಬೇರೆ ಹೈಡ್ರೋ ಎಲೆಕ್ಟ್ರಿಕಲ್ ಪ್ರಾಜೆಕ್ಟ್‌ಗಳಿಂದಲೂ ಕೂಡ ರೈತರು ಮುಳುಗಡೆಯಾಗಿರಬಹುದು. ಯಾವುದೇ ಯೋಜನೆಯಲ್ಲಿ ಮುಳುಗಡೆಯಾದ ರೈತರು ಅನುಭವಿಸತಕ್ಕ ಕಷ್ಟ ಒಂದೇ. ಸಾಮಾನ್ಯವಾಗಿ ಒಬ್ಬ ಮನುಷ್ಯ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗಬೇಕಾದರೆ ಸ್ವಾಭಾವಿಕವಾಗಿ ಮಾನಸಿಕವಾಗಿ ನೋವನ್ನು ಅನುಭವಿಸುತ್ತಾನೆ. ಅವನು ಇದ್ದಂತಹ ಜಾಗ, ಅವನು ಕುಡಿಯತಕ್ಕಂತಹ ನೀರು, ಅವನು ಇರುವಂತಹ ಮನೆ ಇವೆಲ್ಲವನ್ನೂ ಕಳೆದುಕೊಂಡು ಬೇರೊಂದು ಜಾಗಕ್ಕೆ ಹೋಗಬೇಕಾದರೆ ಮಾನಸಿಕ ತೊಳಲಾಟಕ್ಕೆ ಒಳಗಾಗುತ್ತಾನೆ. ಅದಷ್ಟು ಸುಲಭವಲ್ಲ. ಅವರಿಗೆ ಹಣ ಕೊಡಬಹುದು. ಬೇರೆ ಕಡೆ ನಿವೇಶನವನ್ನು ಕೊಡಬಹುದು. ಜಮೀನನ್ನು ಕೊಡಬಹುದು. ನಮ್ಮ ಯೋಜನೆಯಲ್ಲಿ ಏನಾಗಿದೆ ಎಂದರೆ. ವಾರಾಹಿ ಹಾಗೂ ಚಕ್ರ ಯೋಜನೆಯಲ್ಲಿ ಮುಳುಗಡೆಯಾದ ರೈತರ ಬಗ್ಗೆ ಸರ್ಕಾರ ೧೯೮೫ರಲ್ಲಿ ಒಂದು ಆದೇಶವನ್ನು ಹೊರಡಿಸಿದೆ. ಮುಳುಗಡೆ ಪ್ರದೇಶದಿಂದ ಬೇರೆ ಕಡೆಗೆ ಹೋಗತಕ್ಕ ಜನರು ಯಾರು ಇದ್ದಾರೆ, ಅವರು ಹಾಲಿ ಸ್ಥಳದಲ್ಲಿ ಹೊಂದಿರತಕ್ಕ ಮನೆಯ ಡಿಪ್ರಿಷಿಯೇಷನ್ ಕಳೆಯಬಾರದು, ಹಾಲಿ ಮಾರುಕಟ್ಟೆ ದರವನ್ನೇ ಕೊಡಬೇಕೆಂಬುದೇ ಆ ಕಾನೂನು. ಮಾನ್ಯ ಮುಖ್ಯಮಂತ್ರಿಗಳಲ್ಲಿ ನನ್ನ ಮನವಿ ಏನೆಂದರೆ, ವಾರಾಹಿ ಹಾಗೂ ಚಕ್ರ ಯೋಜನೆಯಲ್ಲಿ ಮುಳುಗಡೆಯಾದಂತಹ ರೈತರ ಬಗ್ಗೆ ಯಾವ ರೀತಿಯ ಆದೇಶವನ್ನು ಹೊರಡಿಸಲಾಗಿದೆಯೋ, ಅದೇ ನಿಯಮವನ್ನು ಯಗಚಿ ಯೋಜನೆಯಲ್ಲಿ ಮುಳುಗಡೆಯಾದ ರೈತರ ಬಗ್ಗೆಯೂ ಅನ್ವಯಿಸಬೇಕು. ಇದಕ್ಕೆ ಸೂಕ್ತ ಅನುಕೂಲ ಮಾಡಿ ಕೊಡಬೇಕೆಂದು ಹೇಳುತ್ತೇನೆ. ಇನ್ನು ಹಣ ಬಿಡುಗಡೆಯ ಬಗ್ಗೆ ಹೇಳಬೇಕೆಂದರೆ ಈಗ ೫ ಹಳ್ಳಿಗಳನ್ನು ಏನು ಸ್ಥಳಾಂತರ ಮಾಡಿದ್ದಾರೆ, ಆ ಜನರಿಗೆ ೧ ಕೋಟಿ ೨೦ ಲಕ್ಷರೂಪಾಯಿ ಪುನರ್ವಸತಿಗಾಗಿ ಕೊಡಬೇಕಾಗಿದ್ದರೆ ಇಲ್ಲಿಯವರೆಗೆ ಕೊಟ್ಟಿರುವ ಹಣ ಕೇವಲ ೩೭ ಲಕ್ಷ ರೂಪಾಯಿಗಳಾಗಿದ್ದು ಮಿಕ್ಕ ೮೦ ಲಕ್ಷ ರೂಪಾಯಿಗಳನು ಯಾವಾಗ ಕೊಡುತ್ತೀರಾ ? ಇವತ್ತು ಅವರು ಮನೆ ಖಾಲಿ ಮಾಡಿದ್ದಾರೆ. ನಿವೇಶನ ಕೊಟ್ಟಿದ್ದೀರಿ, ಆದರೆ ಅವರಿಗೆ ಹಣವನ್ನು ಕೊಟ್ಟಿಲ್ಲ. ಆದ್ದರಿಂದ ತಕ್ಷಣ ವಿಳಂಬ ಮಾಡದೇ ಅವರಿಗೆ ಹಣವನ್ನು ಬಿಡುಗಡೆ ಮಾಡಬೇಕು. ಇನ್ನು ಮೀಸಲಾತಿಯನ್ನು ಕಡ್ಡಾಯವಾಗಿ ಜಾರಿಗೆ ತರುವ ಬಗ್ಗೆ ಕಾನೂನು ಮಾಡುತ್ತೇವೆಂದು ಹೇಳುತ್ತಿದ್ದೀರಿ. ಇವತ್ತು ಕೇವಲ ಕಾನೂನು ಮಾಡಿದರೆ ಸಾಲದು. ಅದನ್ನು ಪ್ರಾಮಾಣಿಕವಾಗಿ ಜಾರಿಗೆ ತರುವುದರಲ್ಲಿ ತಮಗೆ ಒಂದು ಕಳಕಳಿ ಇರಬೇಕು. ಪೊಲಿಟಿಕಲ್ ವಿಲ್ ಬೇಕು. ಪ್ರಾಮಾಣಿಕತೆ ಇದ್ದರೆ ಇವತ್ತು ಕಾನೂನೇ ಬೇಕಾಗಿಲ್ಲ. ನೇರ ನೇಮಕಾತಿ ಮಾಡುವ ಬಗ್ಗೆ ೫-೬ ವರ್ಷಗಳಿಂದ ಹೇಳುತ್ತಿದ್ದೀರಿ. ಆದರೆ

ವಿಷಯ ಕೋರ್ಟ್‌ನಲ್ಲಿದೆ ನಾವೇನು ಮಾಡುವುದು ಎಂದು ಹೇಳುತ್ತೀರಿ. ಇವತ್ತು ಕೋರ್ಟ್‌ನಲ್ಲಿ ವೆಕೇಟ್ ಮಾಡಿಸುವುದಕ್ಕೆ ಏಕೆ ಆಗುವುದಿಲ್ಲ ? ಸರಿಯಾದ ಅಡ್ವೋಕೇಟ್ ಜನರಲ್ ಇಲ್ಲವೇ ? ತಾವು ರಿಟ್‌ನ್ನು ವೆಕೇಟ್ ಮಾಡಿಸಬೇಕು, ಇಲ್ಲದಿದ್ದರೆ ಅವನ್ನು ವಾಪಸ್ ತೆಗೆದುಕೊಳ್ಳಬೇಕು. ನಾವು ಜನರಿಗೆ ಅದು ಮಾಡಿದ್ದೇವೆ, ಇದು ಮಾಡಿದ್ದೇವೆ, ಅಷ್ಟು ಮಾಡಿದ್ದೇವೆ, ಇಷ್ಟು ಮಾಡಿದ್ದೇವೆ, ನಾಳೆ ಆಗುತ್ತದೆ, ನಾಳಿದ್ದು ಆಗುತ್ತದೆಂದು ಎಷ್ಟು ದಿವಸ ಹೇಳಿಕೊಂಡು ಬರುವುದು. ಇದರಿಂದ ಸಾರ್ವಜನಿಕರಿಗೆ ಹಿಂಸೆ. ಎಸ್. ಸಿ. ಎಸ್. ಟಿ. ಜನರಿಗೆ ನೇರವಾಗಿ ತೆಗೆದುಕೊಳ್ಳುತ್ತಾರೆ ನಮಗೆ ಆ ಅವಕಾಶ ಇಲ್ಲ ಎನ್ನುವ ರೀತಿಯಲ್ಲಿ ಸ್ಥಳೀಯವಾಗಿ ರಾಜಕೀಯ ನಡೆದು ಆಯಾ ಮಟ್ಟದಲ್ಲಿ ಘರ್ಷಣೆಗೆ ನಾಂದಿಯಾಗುತ್ತದೆ. ಆದ್ದರಿಂದ ತಾವು ದಯಮಾಡಿ ವೆಕೇಟ್ ಮಾಡಿಸಿ, ಇಲ್ಲದಿದ್ದರೆ ಡೈರೆಕ್ಟ್ ರೆಕ್ರೂಟ್‌ಮೆಂಟ್‌ನ್ನು ಮಾಡುವ ಕಾನೂನನ್ನು ವಾಪಸ್ಸು ತೆಗೆದುಕೊಳ್ಳಿ. ಕಾನೂನನ್ನು ತಂದು ಅದನ್ನು ಜಾರಿಗೆ ತರುವುದಿದ್ದರೆ ಕಾನೂನು ಮಾಡಿ. ಇಲ್ಲದಿದ್ದರೆ ಇದನ್ನು ಮಾಡುವುದಕ್ಕೆ ಹೋಗಬೇಡಿ. ಇಷ್ಟು ವಿಷಯಗಳನ್ನು ಸರ್ಕಾರದ ಗಮನಕ್ಕೆ ತಂದು ಈ ಆಯವ್ಯಯ ಎಲ್ಲ ರೀತಿಯಲ್ಲೂ ಅವಲೋಕನ ಮಾಡಿದರೆ ಯಾವ ರೀತಿಯಿಂದಲೂ ಪ್ರಗತಿಪರ ಬಡ್ಜೆಟ್ ಅಲ್ಲ ಎಂದು ಹೇಳಬೇಕಾಗುತ್ತದೆ. ಹೊಸ ಕಾರ್ಯಕ್ರಮಗಳು ಇಲ್ಲದ ಸಾಂಪ್ರದಾಯಿಕ ಬಡ್ಜೆಟ್ ಇದು ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಮಂಡಿಸಿರತಕ್ಕ ೧೯೮೯–೯೦ನೇ ಸಾಲಿನ ಆಯವ್ಯಯ ಪತ್ರದಲ್ಲಿರತಕ್ಕ ಅನೇಕ ನ್ಯೂನ್ಯತೆಗಳು ಹಾಗೂ ಇತರ ವಿಷಯಗಳ ಬಗ್ಗೆ ವಿರೋಧ ಮಾಡುತ್ತಾ ಈ ಬಗ್ಗೆ ನಾಲ್ಕು ಮಾತನ್ನಾಡುತ್ತೇನೆ. ಈ ಸರ್ಕಾರ ಅಧಿಕಾರಕ್ಕೆ ಬರತಕ್ಕ ದಿಸೆಯಲ್ಲಿ ಅನೇಕ ಆಶ್ವಾಸನೆಗಳನ್ನು ಕೊಟ್ಟು ಅಧಿಕಾರಕ್ಕೆ ಬಂದ ಮೇಲೆ ಈ ಸರ್ಕಾರ 'ಇಟ್ಟ ಆಯವ್ಯಯ ಪತ್ರಗಳನ್ನು ನೋಡಿದರೆ ೪ ವರ್ಷಗಳಿಂದ ಏನು ಈ ಖಜಾನೆ ದಿವಾಳಿತವನ್ನು ಪ್ರತಿವರ್ಷ ಮುಂದುವರೆಸಿಕೊಂಡು ಬಂದು ರಾಜ್ಯದ ಪ್ರಗತಿಯಲ್ಲಿ ಕುಂಠಿತ ಸಾಧಿಸಿದ್ದಾರೆ ಅದನ್ನು ಹೋಗಲಾಡಿಸುವುದಕ್ಕೆ ಖಜಾನೆ ತುಂಬತಕ್ಕ, ಸಂಪನ್ಮೂಲಗಳನ್ನು ರೂಢಿಸತಕ್ಕ ಮತ್ತು ರಾಜ್ಯದಲ್ಲಿ ಅಧಿಕಾರಕ್ಕೆ ಬಂದಾದಿನಿಂದಲೂ ನಿಂತುಹೋಗಿರತಕ್ಕ ಈ ರಾಜ್ಯದ ಪ್ರಗತಿಯ ಬಗ್ಗೆ ಚಿಂತನೆ ಮಾಡಿ ಒಳ್ಳೆಯ ಪ್ರಯತ್ನವನ್ನು ಈ ಆಯವ್ಯಯದಲ್ಲಿ ತರುತ್ತಾರೆಂದು ನಿರೀಕ್ಷಣೆ ಮಾಡಿದ್ದೆವು. ಇದು ಚುನಾವಣೆಯ ವರ್ಷ ಆಗಿರುವುದರಿಂದ ಪುನಃ ಜನಹಿತ ಕಾರ್ಯಕ್ರಮಗಳನ್ನು ಕೊಟ್ಟು ಆಯವ್ಯಯವನ್ನು ಆಕರ್ಷಣೀಯವನ್ನಾಗಿ ಮಾಡುತ್ತಾರೆಂದು ನನ್ನ ಅಭಿಪ್ರಾಯ ಇತ್ತು. ಆದರೆ ಈ ಆಯವ್ಯಯವನ್ನು ನೋಡಿದರೆ ರಾಜ್ಯದ ಪ್ರಗತಿಗೆ ಇದರಿಂದ ಏನೇನೂ ಸಾಧ್ಯವಾಗದ ರೀತಿಯಲ್ಲಿ ಇವರು ಮುಂದುವರೆಯುತ್ತಿದ್ದಾರೆಂದು ಈ ಆಯವ್ಯಯದಿಂದ ನನಗೆ ಮನವರಿಕೆಯಾಗುತ್ತದೆ. ಮಾತೆತ್ತಿದರೆ ಕೇಂದ್ರ ಸರ್ಕಾರವನ್ನು ತೆಗಳತಕ್ಕ ಸರ್ಕಾರ, ತನ್ನ ಜವಾಬ್ದಾರಿಯನ್ನು ಇನ್ನೊಬ್ಬರ ಮೇಲೆ ಹಾಕಿ ತಾವು ಜವಾಬ್ದಾರಿಯಿಂದ ತಪ್ಪಿಸಿಕೊಳ್ಳತಕ್ಕ ಕೆಲಸವನ್ನು ಈ ಸರ್ಕಾರ ಇಕ್ಕಟ್ಟಿಗೆ ಸಿಕ್ಕಿದಾಗಲೆಲ್ಲಾ ಮಾಡಿಕೊಂಡು ಬರುತ್ತಲೇ ಇದೆ. ಇದಕ್ಕೆ ಒಂದು ಉದಾಹಾರಣೆ ಕೊಡುತ್ತೇನೆ, ಐ. ಸಿ. ಡಿ. ಎಸ್. ಪ್ರೋಗ್ರಾಮ್ ಏನಿದೆ, ಅದು ಚೈಲ್ಡ್ ಡೆವಲಪ್‌ಮೆಂಟ್ ಪ್ರೋಗ್ರಾಮ್, ಅದು ರಾಜ್ಯಕ್ಕೆ ಬಹಳ ಉಪಯುಕ್ತವಾದದ್ದು. ಇದಕ್ಕೆ ಸಂಬಂಧಪಟ್ಟ ಸಚಿವರು ಇಲ್ಲಿದ್ದಾರೆ, ಅದಕ್ಕೋಸ್ಕರ ಅದನ್ನೇ ಮೊದಲು ಹೇಳಲು ಪ್ರಾರಂಭ ಮಾಡುತ್ತೇನೆ. ಸುಮಾರು ೧೪ ಬ್ಲಾಕ್‌ಗಳಿಗೆ ಈ ಯೋಜನೆ ಕೇಂದ್ರ ಸರ್ಕಾರದಿಂದ ಮಂಜೂರಾಗಿ ಬಂದಿದೆ. ೧೯೮೮–೮೯ನೇ ಸಾಲಿನಲ್ಲಿ ಮಂಜೂರಾಗಿ ಬಂದು ೮ ತಿಂಗಳು ಕಳೆದಿದೆ. ಅವರ ಪ್ರಯೋಜನ ಇದುವರೆಗೆ ಸಿಗಬೇಕಾಗಿತ್ತು. ಆದರೆ ಏನಾಗಿದೆ ಅಂದರೆ ಇದುವರೆಗೆ ಯಾವುದೇ ಕಾರ್ಯಕ್ರಮವನ್ನು ಆ ಇಲಾಖೆ ಕೈಗೊಂಡಿಲ್ಲವೆಂದು ಹೇಳುವುದಕ್ಕೆ ವ್ಯಥೆಯಾಗುತ್ತದೆ. ಸುಮಾರು ೨೦ ಲಕ್ಷ ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಕೊಡತಕ್ಕ ಮತ್ತು ಶಿಕ್ಷಣವನ್ನು ಕೊಡತಕ್ಕ ಒಂದು ಕಾರ್ಯಕ್ರಮ ಇದು. ಅದರ ಜೊತೆಗೆ ಆರು ಜನರಿಗೆ ಉದ್ಯೋಗವನ್ನು ಕೊಡತಕ್ಕ ಅವಕಾಶವಿದೆ. ೧೬ ಜನ ಅಧಿಕಾರಿಗಳು ಇರುತ್ತಾರೆ. ಸುಮಾರು ೧೦೦ ಜನ ಪದವೀಧರರಾಗಿರತಕ್ಕ ಮಹಿಳೆಯರಿಗೆ ಕೆಲಸ ಮಾಡಲಿಕ್ಕೆ ಅವಕಾಶವಿರುತ್ತದೆ. ಈ ರೀತಿಯಾಗಿ ಲೆಕ್ಕ ಹಾಕಿದರೆ ಆರು ಸಾವಿರ ಆರೂವರೆ ಸಾವಿರ ಜನರಿಗೆ ಉದ್ಯೋಗ ಕೊಡತಕ್ಕ ಕೇಂದ್ರಸರ್ಕಾರದ ಈ ಕೊಡುಗೆಗೆ ರಾಜ್ಯಸರ್ಕಾರ ಕೊಡತಕ್ಕದ್ದು ಕೇವಲ ೧೪ ಪೈಸೆ ಮಾತ್ರ. ಅವರು ಕೊಡತಕ್ಕ ಫುಡ್ ಏನಿದೆ, ಅದಕ್ಕೆ ಒಗ್ಗರಣೆ ಹಾಕಲಿಕ್ಕೆ ಒಂದು ಮಗುವಿಗೆ ೧೪ಪೈಸೆ ರಾಜ್ಯಸರ್ಕಾರ ಕೊಡಬೇಕಾಗುತ್ತದೆ. ನಾನು ಸಂಬಂಧಪಟ್ಟ ಸಚಿವರನ್ನು

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಕೇಳುತ್ತೇನೆ. ಈ ಯೋಜನೆ ಕೇಂದ್ರ ಸರ್ಕಾರದಿಂದ ಬಂದು ೮ ತಿಂಗಳು ಕಳೆದಿದೆ. ಉತ್ತಮವಾದ ಯೋಜನೆಯನ್ನು ನೀವು ಏತಕ್ಕೆ ವಿಳಂಬ ಮಾಡಿದ್ದೀರಿ ? ಯಾವಾಗ ಇದನ್ನು ಪ್ರಾರಂಭ ಮಾಡುತ್ತೀರಿ ? ಇದುವರೆಗೆ ಜಾರಿಗೆ ತರದಿರುವುದಕ್ಕೆ ಕಾರಣವೇನು ? ಈ ಬಗ್ಗೆ ದಯಮಾಡಿ ಉತ್ತರಿಸಬೇಕೆಂದು ಸಚಿವರನ್ನು ಕೇಳಿಕೊಳ್ಳುತ್ತೇನೆ. ಯಾರೇ ಆಗಲಿ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಏನೇನೋ ಮಾಡಿದ್ದೇವೆಂದು ಹೇಳಿದ್ದೂ ಹೇಳಿದ್ದೆ. ಅವರಿಗೆ ನೀವು ಏನು ಮಾಡಿದ್ದೀರಿ ? ಒಂದು ಕಡೆ ಅವರಿಗೆ ಆಗತಕ್ಕ ಕಿರುಕುಳ ಇನ್ನೂ ತಪ್ಪಿಲ್ಲ. ೧೦–೧೨ ವರ್ಷಗಳ ಹಿಂದೆ ಹುಡ್ಕೋ ಮತ್ತು ಜನತಾ ಮನೆಗಳನ್ನು ಹರಿಜನರಿಗಾಗಿ ಕಟ್ಟಿಸಿದ್ದಾರೆ. ಯಾವುದೇ ರೀತಿಯ ಮನೆ, ಆಸ್ತಿ ವಗೈರೆ ಇಲ್ಲದವರು ಗುಡಿಸಲುಗಳಲ್ಲಿ ವಾಸಮಾಡತಕ್ಕವರಿಗೆ ಒಂದು ಚಿಕ್ಕ ಮನೆಯನ್ನು ಕಟ್ಟಿ ಕೊಟ್ಟಿದ್ದರೆ ಅಂತಹ ಮನೆಗಳನ್ನು ಇವತ್ತು ಇವರು ಹರಾಜು ಹಾಕುತ್ತಿದ್ದಾರೆ. ಆ ಮನೆಗಳಲ್ಲಿ ವಾಸ ಮಾಡತಕ್ಕ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಜನರು ಬಡವರು. ಇವರು ಮನೆಗಳಿಂದ ಹೊರಗೆ ಹೋಗತಕ್ಕ ಕೆಟ್ಟ ಕಾರ್ಯಕ್ರಮವನ್ನು ಈ ಸರ್ಕಾರ ತೆಗೆದುಕೊಂಡಿದೆ. ಆ ಮನೆಗಳಿಗೆ ಖರ್ಚಾಗಿರ ತಕ್ಕ ಹಣದಲ್ಲಿ ಮೂರನೇ ಒಂದು ಭಾಗ ಕೊಡಬೇಕೆಂದರೂ ೧೫ ದಿವಸಗಳಿಗೆ ಮುಂಚೆ ಒಂದು ನೋಟೀಸ್ ಕೊಡಬೇಕು. ಇಷ್ಟು ಹಣ ಕೊಡಬೇಕೆಂದು ಅವರಿಗೆ ನೋಟೀಸ್ ಹೋಗಿಲ್ಲ. ಇದ್ದಕ್ಕಿದ್ದ ಹಾಗೆ ವಸೂಲಿ ಮಾಡಲಿಕ್ಕೆ ಹೊರಟಿದ್ದಾರೆ. ಈಗ ಏನಾಗಿದೆ ಅಂದರೆ ತಾಲ್ಲೂಕುಗಳಲ್ಲಿರತಕ್ಕ ಅಧಿಕಾರಿಗಳು ಜಿಲ್ಲಾಧಿಕಾರಿಗಳು ಅಸಿಸ್ಟೆಂಟ್ ಕಮಿಷನರ್‌ರವರು ತಹಶೀಲ್ದಾರ್‌ರವರು ಬರೀ ಹರಾಜು ಮಾಡುವುದು ಮನೆಗಳನ್ನು ಜಪ್ತಿ ಮಾಡುವುದು ಹಾಗೂ ರೈತರಿಗೆ ಹಿಂಸೆಯನ್ನು ಕೊಡುವುದು, ಇದು ಅವ್ಯಾಹತವಾಗಿ ನಡೆಯುತ್ತಿದೆ, ಅದರ ಬಾಧೆಯನ್ನು ಪಡತಕ್ಕ ಜನರಿಗೆ ಆ ನೋವು ಗೊತ್ತು. ಯಾವುದೇ ನೋಟೀಸ್ ಕೊಟ್ಟಿಲ್ಲ, ೧೫ ದಿವಸಗಳ ಕ್ಲಿಯರ್ ನೋಟೀಸ್ ಕೊಟ್ಟಿಲ್ಲ. ಅಲ್ಲೇ ನೋಟೀಸ್ ಬರೆದುಕೊಂಡು ಮೊದಲೇ ನೋಟೀಸ್ ಕೊಟ್ಟಿದೆಯೆಂದು ವಸೂಲಿ ಮಾಡಲಿಕ್ಕೆ ಹೊರಟಿದ್ದಾರೆ. ವಸೂಲಿ ಮಾಡದಿದ್ದರೆ ಅವರಿಗೆ ಸಂಬಳವಿಲ್ಲ. ಮೇಲಿನ ಅಧಿಕಾರಿಗಳು ಅವರಿಗೆ ಛೀಮಾರಿ ಹಾಕುತ್ತಾರೆ. ಬಡವರು, ಪರಿಶಿಷ್ಟ ಜಾತಿ ಮತ್ತು ವರ್ಗಗಳ ಜನರು ಇವತ್ತು ಮನೆಗಳಿಂದ ದೂರವಾಗಿ ಮರದ ಕೆಳಗೆ ಇದ್ದಾರೆ. ೧೫ ವರ್ಷಗಳಿಂದ ಬಾಕಿ ಇದೆಯೆಂದು ನೋಟೀಸ್ ಕೊಟ್ಟರೆ ಅವರು ಎಲ್ಲಿಂದ ತರುತ್ತಾರೆ? ನನ್ನ ತಾಲ್ಲೂಕಿನಲ್ಲಿಯೇ ಈ ಬಗ್ಗೆ ಒಂದು ಮೆರವಣಿಗೆಯನ್ನು ತೆಗೆದಿದ್ದಾರೆ. ತಹಶೀಲ್ದಾರ್‌ರವರಿಗೆ ಮನವಿಯನ್ನು ಕಳುಹಿಸಲಾಗಿದೆ, ಆದರೆ ಅದರಿಂದ ಏನೂ ಪ್ರಯೋಜನವಿಲ್ಲ. ಹುಡ್ಕೋ ಮನೆಗಳಲ್ಲಿ ಜನತಾ ಮನೆಗಳಲ್ಲಿ ವಾಸ ಮಾಡತಕ್ಕ ಜನ ಅಧಿಕಾರಿಗಳು ಯಾವಾಗ ಬಂದು ಹರಾಜು ಮಾಡುತ್ತಾರೋ ಯಾವಾಗ ಬಂದು ಜಪ್ತಿಯನ್ನು ಮಾಡುತ್ತಾರೋ ಎಂದು ಅವರುಗಳನ್ನು ಕಂಡರೆ ಹಾಗೆಯೆ ಓಡಿ ಬರುತ್ತಾರೆ.

ಮಾನ್ಯ ಅಧ್ಯಕ್ಷರೆ, ಇಂತಹ ಸಂದರ್ಭದಲ್ಲಿ ಅವರಿಗೆ ಏನು ಹೇಳಬೇಕೆನ್ನುವುದು ತಿಳಿಯುತ್ತಿಲ್ಲ. ಬಹುಶಃ ಈ ಒಂದು ಮನೆಗಳಲ್ಲಿ ವಾಸಮಾಡತಕ್ಕ ಜನಕ್ಕೆ ಯಾವುದೇ ಆದಾಯ ಬಾಬ್ತು ಇಲ್ಲದೆ ಇರುವುದರಿಂದ ಆ ಮನೆಗಳಿಂದ ಸರ್ಕಾರಕ್ಕೆ ಬರತಕ್ಕ ಬಾಕಿ ಏನು ಇದೆ, ಅದನ್ನು ಮನ್ನಾ ಮಾಡುವ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಸರ್ಕಾರದಲ್ಲಿ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಲ್ಲದೇ ಹೋದರೆ ನಮ್ಮ ಉದ್ದೇಶವೇ ಫೇಲ್ ಆಗುತ್ತದೆ. ಏಕೆಂದರೆ ಮನೆಯನ್ನು ಅವರಿಗೆ ಕೊಡಬೇಕೆಂದು ಒಂದು ಕಡೆಯಿಂದ ಹೇಳಿ ಇನ್ನೊಂದು ಕಡೆ ಈ ಮನೆಯಲ್ಲಿರುವವರನ್ನು ಬೀದಿಗೆಳೆಯುವುದು ಸರಿಯಲ್ಲ. ಇದರಿಂದ ಬರತಕ್ಕ ಹಣದಿಂದ ರಾಜ್ಯ ಸರ್ಕಾರವನ್ನು ನಡೆಸುವುದಕ್ಕಾಗುವುದಿಲ್ಲ. ಈ ರಾಷ್ಟ್ರದ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕೋಸ್ಕರ ಆ ಹಣವನ್ನು ಖರ್ಚು ಮಾಡುವ ಅಗತ್ಯ ಏನೂ ಇಲ್ಲ. ದಯವಿಟ್ಟು ಇದಕ್ಕೆ ಸಂಬಂಧಪಟ್ಟ ಸಚಿವರು ಮತ್ತು ಸರ್ಕಾರ ಇದರ ಬಾಕಿಯನ್ನು ಮನ್ನಾ ಮಾಡತಕ್ಕ ಬಗ್ಗೆ ಮುಂದೆ ಬರಬೇಕು. ಇದನ್ನು ಮನ್ನಾ ಮಾಡಿ ಅವರನ್ನು ರಕ್ಷಣೆ ಮಾಡಬೇಕೆಂದು ಹೇಳುತ್ತೇನೆ. ಏಕೆಂದರೆ ಈ ಹರಿಜನರ ಬಗ್ಗೆ ನಿಮಗೆ ಕಳಕಳಿ ಇದ್ದರೆ ಅವರಿಗೆ ಸಹಾಯ ಮಾಡಬೇಕೆಂದು ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಇವರ ಮೊದಲನೆಯ ಚುನಾವಣೆಯ ಸಮಯದಲ್ಲಿ ಕರ್ನಾಟಕದಲ್ಲಿ ಯಾರು ಯಾರು ಸರ್ಕಾರಿ ಭೂಮಿಯನ್ನು ಹಂಗಾಮಿಯಾಗಿ ಸಾಗುವಳಿ ಮಾಡಿದ್ದಾರೆ, ಅಂತಹ ಭೂಹೀನ ರೈತರಾದ ಬಡವರಿಗೆ ಅವರು ಉಳುಮೆ ಮಾಡಿಕೊಂಡಿರತಕ್ಕ ಭೂಮಿಯನ್ನು ಖಾಯಂ ಮಾಡುತ್ತೇವೆಂದು ಘೋಷಣೆ ಮಾಡಿದ್ದರು. ಬಹುಶಃ ಈ ರಾಜ್ಯದಲ್ಲಿ ಬಹುಸಂಖ್ಯೆ ಜನ ಸರ್ಕಾರಿ ಭೂಮಿಯಲ್ಲಿ ಹಂಗಾಮಿ ಸಾಗುವಳಿ ಮಾಡಿದ್ದಾರೆ. ಅವರೆಲ್ಲಾ ಏತಕ್ಕೆ ಮಾಡಿದ್ದಾರೆಂದು ಕೇಳತಕ್ಕ ಸಂದರ್ಭವೇ ಬೇರೆ. ಏಕೆಂದರೆ ಈ ರಾಷ್ಟ್ರದಲ್ಲಿ ಯಾರು ಯಾರು ಸರ್ಕಾರಿ ಭೂಮಿಯನ್ನು ಹಂಗಾಮಿಯಾಗಿ ಸಾಗುವಳಿ ಮಾಡಿದ್ದಾರೆ, ಅಂತಹ ಭೂಹೀನ

ರೈತರಿಗೆ ಆಯಾ ಭೂಮಿಯನ್ನು ಖಾಯಂ ಮಾಡಿ ಕೊಡುತ್ತೇವೆಂಬ ಘೋಷಣೆಯನ್ನು ಅವರ ಮುಂದಿಟ್ಟಾಗ ಬಹುಸಂಖ್ಯೆಯಲ್ಲಿ ಆ ಜನರು ಸರ್ಕಾರಿ ಭೂಮಿಯನ್ನು ಸಾಗುವಳಿ ಮಾಡಿದ್ದಾರೆ. ನಾನು ನಮ್ಮ ಜನರಿಗೆ ಉದ್ಯೋಗ ಒಂದನ್ನು ಬಿಟ್ಟು ಹೊಟ್ಟೆಗೆ ಅನ್ನ ಬಟ್ಟೆ ಕೊಡುವುದನ್ನು ಬಿಟ್ಟು ಉಳಿದುದನ್ನೆಲ್ಲಾ ಈ ಪ್ರಜಾಪ್ರಭುತ್ವದಲ್ಲಿ ಕೊಟ್ಟಿದ್ದೇವೆ. ಜೀವನಕ್ಕೆ ಬೇರೆ ಯಾವುದೇ ಆಶ್ರಯವಿಲ್ಲದೆ ಈ ಸರ್ಕಾರದ ಭೂಮಿಯನ್ನು ಹಂಗಾಮಿಯಾಗಿ ಸಾಗುವಳಿ ಮಾಡಿರತಕ್ಕ ಬಡ ರೈತರು ಈ ರಾಜ್ಯದಲ್ಲಿ ಸಾಕಷ್ಟಿದ್ದಾರೆ. ಇಂತಹ ಭೂಮಿಯನ್ನು ಅವರಿಗೇ ಖಾಯಂ ಮಾಡುತ್ತೇವೆನ್ನುವ ಮಾತನ್ನು ಚುನಾವಣೆಯಲ್ಲಿ ನೀವು ಹೇಳಿ ಆಯಿತು. ಈಗಾಗಲೇ ನಾಲ್ಕು ವರ್ಷಗಳನ್ನು ಕಳೆದಿದ್ದೇವೆ. ಇನ್ನೇನೂ ಸ್ವಲ್ಪ ಕಾಲದಲ್ಲಿ ಚುನಾವಣೆ ಬರುತ್ತದೆ. ಈಗ ಆ ಜಮೀನನ್ನು ಖಾಯಂ ಮಾಡತಕ್ಕ ಮಾತು ಇರಲಿ, ಈಗ ಅವರಿಗೆಲ್ಲಾ ಟಿ. ಟಿ. ಫೈನ್ ಹಾಕಿ, ಬಡವರಿಂದ ವಸೂಲು ಮಾಡತಕ್ಕ ಕ್ರಮ ನಡೆದಿದೆ. ನನ್ನ ದೃಷ್ಟಿಯಿಂದ ಈ ರಾಜ್ಯದಲ್ಲಿ ಸುಮಾರು ೧೦ ರಿಂದ ೧೫ ಕೋಟಿ ರೂಪಾಯಿಗಳವರೆಗೆ ಈ ಬಡವರಿಂದ ಬಲವಂತವಾಗಿ ಈ ಸರ್ಕಾರೀ ಭೂಮಿಯನ್ನು ಪ್ರವೇಶ ಮಾಡಿದ್ದರಿಂದ ಟಿ. ಟಿ. ಕಟ್ಟಲೇಬೇಕೆಂದು ಒತ್ತಾಯ ಮಾಡಿದ್ದಾರೆ. ಈ ಕಾರಣದಿಂದ ಅವರಲ್ಲಿದ್ದ ಕುರಿ, ಕೋಳಿ, ಒಡವೆ ಮುಂತಾದ ವಸ್ತುಗಳನ್ನೂ ಮಾರಾಟ ಮಾಡಿ ಹಣ ತಂದು ಕಟ್ಟಿದ್ದಾರೆ. ಇದರಲ್ಲಿ ಸರ್ಕಾರಕ್ಕೆ ೧೦ ರಿಂದ ೧೫ ಕೋಟಿ ರೂಪಾಯಿಗಳವರೆಗೆ ಹಣ ಬಂದಿದ್ದರೆ, ಅಷ್ಟೇ ಪ್ರಮಾಣದ ಹಣ ಅಧಿಕಾರಿಗಳ ಜೇಬಿಗೆ ಸೇರಿದೆ. ಈ ಟಿ. ಟಿ. ಹಣ ವಸೂಲು ಮಾಡತಕ್ಕ ಸಂದರ್ಭದಲ್ಲಿ ನನಗೆ ಬಂದಂತಹ ದೂರುಗಳ ಆಧಾರದ ಮೇಲೆ ನಾನು ಸುಮಾರು ಹಳ್ಳಿಗಳಿಗೆ ಹೋಗಿ, ವಿಚಾರ ಮಾಡಿದಾಗ ನನಗೆ ತಿಳಿದು ಬಂದಿದ್ದು, ಏನೆಂದರೆ ಈ ತಿಳುವಳಿಕೆ ಇಲ್ಲದೆ ಜನರಿಗೆ, ಅಧಿಕಾರಿಗಳು ಕೊಟ್ಟಂತಹ ರಸೀದಿಯನ್ನು ಓದಿ ನೋಡತಕ್ಕ ವಿದ್ಯೆ ಅವರಿಗೆ ಇಲ್ಲ. ೫೦೦ ರೂಪಾಯಿಯನ್ನು ಟಿ. ಟಿ. ಕಟ್ಟಬೇಕೆಂದು ಆ ಜನರಿಂದ ತೆಗೆದುಕೊಂಡು ಅದರಲ್ಲಿ ಅವರು ಕಟ್ಟಿರುವುದು ೨೦೦ ರೂಪಾಯಿಗಳು ಮಾತ್ರ. ಬಾಕಿ ಉಳಿದಂತಹ ೩೦೦ ರೂಪಾಯಿಗಳು ಅವರ ಜೇಬಿಗೆ ಹೋಗಿರುತ್ತದೆ. ಇಂತಹ ಸುಮಾರು ೨೦೦ ಕ್ಕೂ ಹೆಚ್ಚು ರಸೀದಿಗಳು ನನ್ನ ಹತ್ತಿರ ಬಂದವು. ಇದರ ನಿಜ ಸ್ಥಿತಿ ತಿಳಿಯಲು ತಿಪಟೂರು ತಾಲ್ಲೂಕು ಆಫೀಸಿನ ಮುಂದೆ ಟೆಂಟ್ ಹಾಕಿ ಕುಳಿತು ವಿಚಾರ ಮಾಡಿದೆವು.

ಅಧ್ಯಕ್ಷರು.—ತಾವು ಬೇಗ ಮುಗಿಸಿ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೆ, ಇಲ್ಲಿ ಏನಾಗಿದೆಯೆಂದರೆ, ಈ ರೀತಿಯಾಗಿ ನಾವು ಭೂಮಿಯನ್ನು ಬಡವರಿಗೆ ಕೊಡುತ್ತೇವೆಂದು ನಾಲ್ಕು ವರ್ಷವಾದರೂ ಆ ಬಗ್ಗೆ ಒಂದು ಮಸೂದೆಯನ್ನು ತಂದು ಅವರಿಗೆ ಜಮೀನು ಮಂಜೂರು ಮಾಡುವ ವ್ಯವಸ್ಥೆ ಮಾಡುವುದಕ್ಕೆ ಬದಲು ಈ ರೀತಿಯಾಗಿ ಹೊಟ್ಟೆಗಿಲ್ಲದ ಜನರ ಶೋಷಣೆ ಮಾಡತಕ್ಕ ಒಂದು ಕಾರ್ಯ ನಡೆದಿದೆ. ಆದ್ದರಿಂದ ಯಾವ ಯಾವ ಅಧಿಕಾರಿಗಳು ಈ ರೀತಿ ಹಣವನ್ನು ವಸೂಲು ಮಾಡಿದ್ದಾರೆಂಬ ಪಟ್ಟಿಯನ್ನು ನಾನು ಜಿಲ್ಲಾಧಿಕಾರಿಗಳಿಗೆ ಹಾಗೂ ತಹಶೀಲ್ದಾರ್‌ರವರಿಗೆ ಕೊಟ್ಟಿದ್ದೇನೆ. ಅಂತಹವರ ಮೇಲೆ ತಾವು ಕ್ರಮ ಕೈಕೊಳ್ಳಬೇಕು. ಮುಖ್ಯವಾಗಿ ಬಡವರಿಗೆ ಕೊಟ್ಟಿರುವ ಆಶ್ವಾಸನೆಯನ್ನು ಕೊನೇಪಕ್ಷ ಚುನಾವಣೆ ಮುಗಿಯುವುದರೊಳಗಾಗಿ ಯಾರು ಯಾರು ರೈತರು ಸರ್ಕಾರದ ಭೂಮಿಯನ್ನು ಉಳುಮೆ ಮಾಡಿದ್ದಾರೆ ಅವರಿಗೆ ಕಡ್ಡಾಯಗೊಳಿಸುವ ಪ್ರಯತ್ನ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಸಿ. ಅಂಡ್ ಡಿ. ಕ್ಲಾಸ್ ಜಮೀನಿನ ಬಗ್ಗೆ ಹೇಳಬೇಕೆಂದರೆ ಮೊದಲು ಇದು ಗೋಮಾಳವಾಗಿದ್ದು, ಇದೆಲ್ಲಾ ರೆವಿನ್ಯೂ ಇಲಾಖೆಗೆ ಸೇರಿರತಕ್ಕ ಭೂಮಿ ಆಗಿತ್ತು. ಇಂತಹ ಭೂಮಿಯನ್ನು ಬಹಳ ವರ್ಷಗಳ ಕಾಲದಿಂದಲೂ ಉಳುಮೆ ಮಾಡಿಕೊಂಡು ಬಂದಿದ್ದಾರೆ. ಆದರೆ ಆ ಭೂಮಿಯನ್ನು ಅರಣ್ಯ ಇಲಾಖೆಗೆ ವಹಿಸಿಕೊಡತಕ್ಕ ಸಂದರ್ಭದಲ್ಲಿ ಈ ಇಲಾಖೆಗೆ ಸಂಬಂಧಪಟ್ಟವರು ಈ ಭೂಮಿಯನ್ನು ಬೇರೆಯವರಿಗೆ ಕೊಡುತ್ತೇವೆಂದು ಹೇಳಿ ಅದನ್ನು ವೆರಿಫಿಕೇಷನ್ ಮಾಡಬೇಕಾಗಿತ್ತು. ಅರಣ್ಯ ಇಲಾಖೆಗೆ ಭೂಮಿಯನ್ನು ಬಿಟ್ಟುಕೊಡುವುದಕ್ಕೆ ಮೊದಲು ಅದರಲ್ಲಿ ಯಾರು ಇದ್ದಾರೆ ಏನು ಎಂಬುದನ್ನು ನೋಡಿ ಉಳಿದ ಜಮೀನನ್ನು ಅವರಿಗೆ ಕೊಡಬೇಕಿತ್ತು. ಈಗ ಬಡವರು ಉಳುಮೆ ಮಾಡಿಕೊಂಡಿದ್ದಾರೆ. ನೀವು ಇದನ್ನು ತೆಗೆದುಕೊಂಡುಹೋಗಿ ಅರಣ್ಯ ಇಲಾಖೆಗೆ ಕೊಟ್ಟಾಗಿದೆ. ಫಾರೆಸ್ಟ್ ಇಲಾಖೆಗೆ ಕೊಟ್ಟ ಮೇಲೆ ಅದನ್ನು ವಿತ್‌ಡ್ರಾ ಮಾಡತಕ್ಕಂಥಾದ್ದು ಎಷ್ಟು ಕಷ್ಟ ಇದೆ. ಅದು ಸೆಂಟ್ರಲ್ ಆಕ್ಟ್‌ಗೆ ಒಳಪಡುವುದರಿಂದ ಕೇಂದ್ರ ಸರ್ಕಾರದ ಅನುಮತಿ ಬೇಕಾಗುತ್ತದೆ. ಇದಕ್ಕೆ ಪೂರ್ವಭಾವಿಯಾಗಿ ರೆವಿನ್ಯೂ ಇಲಾಖೆಯವರು ಭೂಮಿಯನ್ನು ಅವರಿಗೆ ಕೊಡತಕ್ಕಂಥ ಸಂದರ್ಭದಲ್ಲಿ ಇದನ್ನೆಲ್ಲಾ ವಿಚಾರ ಮಾಡಿದ್ದರೆ ಎಷ್ಟು ಚೆನ್ನಾಗಿ ಇರುತ್ತಿತ್ತು. ಇದರಿಂದ ತೊಂದರೆಯೂ ತಪ್ಪುತ್ತಿತ್ತು. ಆದ್ದರಿಂದ ಸಿ ಅಂಡ್ ಡಿ ಕ್ಲಾಸ್ ಲ್ಯಾಂಡ್ ಏನಿದೆ, ಅದು ರೈತರ ಹಿಡಿತದಲ್ಲಿರುವುದರಿಂದ ಅದನ್ನು ಕೊಡುವುದಕ್ಕೆ ಅರಣ್ಯ ಇಲಾಖೆಯಿಂದ ವಿತ್‌ಡ್ರಾ ಮಾಡಿ ರೈತರಿಗೆ ಕೊಡತಕ್ಕಂಥ ಪ್ರಯತ್ನ ಮಾಡಬೇಕೆಂದು ನಾನು

ಸರ್ಕಾರವನ್ನು ಈ ರೀತಿಯಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಇನ್ನು ಈಗ ಉಪಾಧ್ಯಾಯರ ಆಯ್ಕೆ ಡಿ.ಎಲ್.ಆರ್.ಸಿ. ಮೂಲಕ ರಾಜ್ಯದಾದ್ಯಂತ ನಡೆಯುತ್ತಿದೆ. ಉಪಾಧ್ಯಾಯರು ಸಾಕಷ್ಟು ಸಂಖ್ಯೆಯಲ್ಲಿ ಇಲ್ಲದೇ ಶಾಲೆಗಳು ನಡೆಯುತ್ತಿವೆ. ನಾನು ನನ್ನ ಕ್ಷೇತ್ರದಲ್ಲಿ ಮೊನ್ನೆ ಹೋದಾಗ, ಹೊಸೂರು ಎನ್ನತಕ್ಕಂಥ ಊರು. ಅಲ್ಲಿ ಒಂದು ಕಡೆ ೧೯೦ ವಿದ್ಯಾರ್ಥಿಗಳು ಇದ್ದಾರೆ. ಡಿಎಲ್‌ಆರ್‌ಸಿ ಮೂಲಕ ಆಯ್ಕೆ ಆಗಿ ಕೆಲವು ಉಪಾಧ್ಯಾಯರನ್ನು ರಿಪೋಸ್ಟಿಂಗ್ ಮಾಡಿದ್ದಾರೆ. ಆದರೆ ಅಲ್ಲಿರತಕ್ಕಂಥ ೧೯೦ ವಿದ್ಯಾರ್ಥಿಗಳಿಗೆ ಬರೀ ಇಬ್ಬರು ಉಪಾಧ್ಯಾಯರು ೫೦ ಕುರಿಗಳನ್ನು ಕಾಯಬೇಕಾದರೂ ಒಬ್ಬರಿಂದ ಸಾಧ್ಯವಾಗುವುದಿಲ್ಲ. ಹೀಗಿರುವಾಗ ೧೯೦ ವಿದ್ಯಾರ್ಥಿಗಳಿಗೆ ಇಬ್ಬರು ಉಪಾಧ್ಯಾಯರು ಏನು ಪಾಠ ಹೇಳಿಕೊಡಲು ಸಾಧ್ಯ? ಯಾವ ರೀತಿಯ ಶಿಕ್ಷಣವನ್ನು ಕೊಡುವುದಕ್ಕೆ ಸಾಧ್ಯ? ಇಂತಹ ಶಾಲೆಗಳಲ್ಲಿ ಓದತಕ್ಕಂಥ ಮಕ್ಕಳು ಯಾವ ರೀತಿಯಲ್ಲಿ ಮುಂದೆ ಬರುವುದಕ್ಕೆ ಸಾಧ್ಯವಿದೆ? ಯಾವ ರೀತಿ ಒಳ್ಳೆಯ ಅಂಕಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯ ಇದೆ? ಮುಂದೆ ಮೆಡಿಕಲ್‌ನಲ್ಲಿ ಆಗಲಿ, ಇಂಜಿನಿಯರಿಂಗ್‌ನಲ್ಲಿ ಆಗಲಿ ವಿದ್ಯಾಭ್ಯಾಸ ಪಡೆಯಲು ಮುಂದೆ ಹೋಗುವುದಕ್ಕೆ ಅರ್ಹ, ಉತ್ತಮ ಶಿಕ್ಷಣವನ್ನು ಈ ಶಾಲೆಗಳಲ್ಲಿ ಅವರು ಪಡೆಯುವುದಕ್ಕೆ ಸಾಧ್ಯ ಇದೆಯೇ? ಇದರ ಜೊತೆಗೆ, ತುಮಕೂರು ಜಿಲ್ಲೆ ಬಗ್ಗೆ ಹೇಳಬೇಕೆಂದರೆ, ಬಹಳ ಹಿಂದೆ ನಾನು ಈ ಸದನದಲ್ಲಿ ಹೇಳಿದ್ದೆ. ಡಿ.ಎಲ್.ಆರ್.ಸಿ. ಕಾಲ್ ಆಗಿದೆ. ಅಭ್ಯರ್ಥಿಗಳು ಅರ್ಜಿಗಳನ್ನು ಹಾಕಿದ್ದಾರೆ. ಬರೀ ಮೆರಿಟ್ ಮೇಲೆ ಆಯ್ಕೆ ಮಾಡಬಾರದು, ಏಕೆಂದರೆ, ಕೆಲವರಿಗೆ ಏಜ್ ಲಿಮಿಟ್ ಆಗಿದೆ. ಅವರೂ ಕೂಡ ಅರ್ಜಿ ಹಾಕಿದ್ದಾರೆ. ವಯೋಮಿತಿ ಮೀರಿರತಕ್ಕಂಥ ಎಷ್ಟೋ ಜನ ಅರ್ಜಿಗಳನ್ನು ಹಾಕಿದ್ದಾರೆ. ಅವರಿಗೇನಾದರೂ ಇದರಲ್ಲಿ ಇಂಟರ್‌ವ್ಯೂ ಸಿಕ್ಕಿಯು ಉದ್ಯೋಗ ಸಿಗದೇಹೋದರೆ ಮುಂದೆ ಅವರಿಗೆ ಅರ್ಜಿಗಳನ್ನು ಹಾಕುವ ಅವಕಾಶ ಇಲ್ಲದ ಹಾಗಾಗುತ್ತದೆ. ಈ ದೃಷ್ಟಿಯಿಂದ ೫೦ ಪರ್ಸೆಂಟ್ ಮೆರಿಟ್ ಮೇಲೆ ಮತ್ತು ೫೦ ಪರ್ಸೆಂಟ್ ಏಜ್ ಮೆರಿಟ್ ಮೇಲೆ ಕೆಲಸ ಕೊಡತಕ್ಕಂಥ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದನ್ನು ಹಿಂದೆ ನಾನು ಒಂದು ಪ್ರಶ್ನೆ ಮೂಲಕ ಕೇಳಿದ್ದೆ. ಇದನ್ನು ಪರಿಶೀಲಿಸಿ ವ್ಯವಸ್ಥೆ ಮಾಡುತ್ತೇನೆ ಎಂದು ಅಂದಿನ ಶಿಕ್ಷಣ ಮಂತ್ರಿಗಳಿಂದ ಆಶ್ವಾಸನೆಯೂ ಬಂದಿತ್ತು. ಆದರೆ ಈ ಏಜ್ ಮೆರಿಟ್ ಮೇಲೆ ಆಯ್ಕೆ ಮಾಡತಕ್ಕದ್ದನ್ನು ಇದುವರೆಗೂ ಮಾಡಿಲ್ಲ. ಆದ್ದರಿಂದ ಏಜ್ ಮೆರಿಟ್ ಆಧಾರ ಇಟ್ಟುಕೊಂಡು ಅವರಿಗೆ ಅರ್ಧ ಭಾಗದಷ್ಟು ಮೀಸಲಾತಿ ಇದೆಯೆಂಬ ಭಾವನೆಯನ್ನು ನಾನು ಹೊಂದಿದ್ದೇನೆ. ಇದನ್ನು ಅವರಿಗೆ ಯಾವಾಗ ಕೊಡುತ್ತೀರಿ? ಕೊಡತಕ್ಕಂಥ ಕಾರ್ಯಕ್ರಮ ಸರ್ಕಾರದಲ್ಲಿ ಇದೆಯೇ ಎನ್ನುವುದನ್ನು ಕೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಅಧ್ಯಕ್ಷರು.—ಬೇಗ ಮುಗಿಸಿ.

ಶ್ರೀ ಬಿ. ಲಕ್ಕಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಈ ರಾಷ್ಟ್ರದಲ್ಲಿ ಮತ್ತು ರಾಜ್ಯದಲ್ಲಿ ಪ್ರಜಾಪ್ರಭುತ್ವ ಎಷ್ಟರ ಮಟ್ಟಿಗೆ ವಿಫಲವಾಗಿದೆಯೋ ಅಷ್ಟೇ ಪ್ರಮಾಣದಲ್ಲಿ ಇವರ ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ ವ್ಯವಸ್ಥೆಯಲ್ಲಿಯೂ ಪೂರ್ಣವಾಗಿ ವಿಫಲವಾಗಿ ಹೋಗಿದೆ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಈಗ ಮಂಡಲ್ ಪಂಚಾಯತ್ ವ್ಯವಸ್ಥೆಯಲ್ಲಿ ಆರು ತಿಂಗಳಿಗೆ ಒಂದು ಸಾರಿ ಗ್ರಾಮ ಪಂಚಾಯಿತಿ ಸಭೆ ನಡೆಯಬೇಕೆಂಬ ನಿಯಮ ಇದೆ. ಇಲ್ಲಿಗೆ ಆಗಲೇ ಈ ವ್ಯವಸ್ಥೆ ಜಾರಿಗೆ ಬಂದು ಎರಡು ವರ್ಷ ಆಗಿದೆ. ತಾವು ನನ್ನ ತಾಲ್ಲೂಕಿಗೆ ಬನ್ನಿ ಅಥವಾ ಬೇರೆ ಯಾವುದೇ ತಾಲ್ಲೂಕಿಗೆ ಬನ್ನಿ. ಒಂದು ಗ್ರಾಮ ಪಂಚಾಯಿತಿ ಸಭೆಯನ್ನು ಬಿಟ್ಟರೆ ಈಚೆಗೆ ಒಂದೇ ಒಂದು ಗ್ರಾಮ ಪಂಚಾಯಿತಿ ಸಭೆಯೂ ಇದುವರೆಗೂ ನಡೆದಿಲ್ಲ. ಏತಕ್ಕೆ? ನನ್ನ ತಾಲ್ಲೂಕಿನಲ್ಲಿ ಅಂತೂ ನಡೆದಿಲ್ಲ. ಬಹುಶಃ ಇದು ಎಲ್ಲಾ ಕಡೆಯಲ್ಲೂ ಇರತಕ್ಕಂಥ ಪರಿಸ್ಥಿತಿ. ತಿಪಟೂರಿನಲ್ಲೂ ಇದೆ. ಇದು ಶ್ರೀ ಚಂದ್ರಶೇಖರ್ ಅವರಿಗೆ ಗೊತ್ತಿಲ್ಲ. ಏನು ಕಾರಣವೆಂದರೆ ಕಿಬ್ಬನಹಳ್ಳಿ ಕ್ರಾಸ್ ಒಂದು ಹೋಬಳಿಗೆ ಸೇರುತ್ತದೆ. ಮಂಡಲ್ ಪಂಚಾಯಿತ್ತು ವ್ಯವಸ್ಥೆ ಜಾರಿಗೆ ಬಂದುಬಿಟ್ಟರೆ ಗ್ರಾಮದಲ್ಲಿ ಆಗತಕ್ಕ ಕೆಲಸ ಕಾರ್ಯಗಳನ್ನು ಮಾಡಬಹುದು, ಹೇರಳವಾಗಿ, ಹೊಳೆ ಹೊಳೆಯಾಗಿ ಹಣ ಬರುತ್ತದೆ ಎಂದು ಹೇಳುವಂಥ ಮಾತುಗಳನ್ನು ಕೇಳಿ ಜನ ಆಸೆ ಪಟ್ಟರು. ಒಂದು ಸಭೆ ನಡೆಯಿತು. ಆ ಸಭೆಗೆ ಹೋದಾಗ, ರೈತರು ತಮ್ಮ ಸಮಸ್ಯೆಗಳನ್ನು ನಮ್ಮ ಮುಂದಿಟ್ಟರು. ನಮ್ಮೂರಿಗೆ ಅಂತಾದ್ದು ಆಗಬೇಕು, ಇಂತಾದ್ದು ಆಗಬೇಕು ಎಂದು ಎಲ್ಲಾ ಪಟ್ಟಿ ಮಾಡಿಕೊಟ್ಟರು.

ಅಧ್ಯಕ್ಷರು.—ಈಗ ಗ್ರಾಮ ಸಭೆಯ ವಿಷಯ ಬಿಡಿ. ಬಜೆಟ್ ಬಗ್ಗೆ ಹೇಳಿ....

ಶ್ರೀ ಬಿ. ಲಕ್ಕಪ್ಪ.—ಏಕೆಂದರೆ ಈಗ ಗ್ರಾಮ ಸಭೆಗಳು ನಡೆಯದೇ ಹೋದರೆ ಅಲ್ಲಿಗೆ ಇವು ಫೇಲ್ ಆದಹಾಗೆ. ಹಣ ಇಲ್ಲ, ಇದರಿಂದ ಏನಾಯಿತು, ಕೊಟ್ಟಂಥ ಆಶ್ವಾಸನೆಗಳು ಈಡೇರುವುದಕ್ಕೆ ಸಾಧ್ಯವಾಗಲಿಲ್ಲ. ಮತ್ತೊಂದು ವಿಚಾರ ಏನೆಂದರೆ, ನಿವೇಶನಗಳ ಹಂಚಿಕೆ ಬಗ್ಗೆ. ಈ ವರ್ಷ ರಾಜ್ಯ ಸರ್ಕಾರದ ಮೂಲಕ ಇಂತಿಷ್ಟು ನಿವೇಶನಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಹಂಚತಕ್ಕ ಕಾರ್ಯಕ್ರಮ ಇದೆ. ಆದರೆ ಯಾವುದೇ ಗ್ರಾಮಕ್ಕೆ ಹೋದರೂ, ಗ್ರಾಮಠಾಣೆಯಲ್ಲಿ ನಿವೇಶನಗಳು ಇಲ್ಲ. ಮತ್ತೆ ಅಕ್ವೈರ್ ಮಾಡತಕ್ಕಂತಾದ್ದು, ಪಕ್ಕದಲ್ಲಿರತಕ್ಕ ಜಮೀನನ್ನು ನಿವೇಶನ ಮಾಡಿ ಹಂಚತಕ್ಕ ಕಾರ್ಯಕ್ರಮ ಅಷ್ಟು ಸುಲಭವಾಗಿ ಆಗತಕ್ಕ ಕಾರ್ಯಕ್ರಮ ಅಲ್ಲ. ಏಕೆಂದರೆ, ಜಮೀನು ಮಾಲೀಕರು ಕೋರ್ಟಿಗೆ ಹೋಗುತ್ತಾರೆ, ಜಮೀನ್ದಾರ, ಜಮೀನುಗಳನ್ನು ಬಿಟ್ಟುಕೊಡುವುದಿಲ್ಲ. ಇದರಿಂದ ನಿವೇಶನಗಳನ್ನು ಹಂಚುವುದು ಕಷ್ಟವಾಗಿದೆ. ಬಹಳ ಕಾಲದಿಂದಲೂ ಈ ಗ್ರಾಮಠಾಣೆಯ ವ್ಯಾಪ್ತಿ ಏನು ಎನ್ನುವುದರ ಬಗ್ಗೆ ಸರ್ವೆ ಆಗಿಲ್ಲ. ಮಂಡಲ್ ಪಂಚಾಯ್ತಿಗಳಲ್ಲಿ ಈ ಹೌಸ್ ಲಿಸ್ಟ್, ಮತ್ತು ನಿವೇಶನಗಳ ಪಟ್ಟಿಯನ್ನು ಇಡತಕ್ಕ ಕೆಲಸ ಆಗುತ್ತಾ ಬಂದಿಲ್ಲ. ಪ್ರತಿ ಗ್ರಾಮಗಳನ್ನೂ ಸರ್ವೆ ಮಾಡಿಸಿ, ಗ್ರಾಮಠಾಣೆ ವ್ಯಾಪ್ತಿ ಎಷ್ಟಿದೆ, ಗಡಿ ಎಷ್ಟಿದೆ ಎಂಬುದನ್ನು ನಿರ್ಧಾರಪಡಿಸಿ, ಇದರೊಳಗೆ ನಿವೇಶನ ಇದ್ದರೆ, ಒತ್ತುವರಿ ಇದ್ದರೆ ಅದನ್ನು ಬಿಡಿಸತಕ್ಕ ಕೆಲಸ ಮಾಡಬೇಕು. ನಿಮ್ಮ ಬಜೆಟ್‌ನಲ್ಲಿರತಕ್ಕ ಕೆಲಸಕಾರ್ಯಗಳನ್ನು ನೋಡಿದಾಗ, ಇದಕ್ಕೆ ಮಹತ್ವ ಬರುತ್ತದೆ. ಆದರೆ ಈ ವಿಚಾರದಲ್ಲಿ ಕಾರ್ಯತಃ ಏನೂ ಆಗದೇ ಹೋದರೆ, ಬಹುಶಃ ಈ ರಾಜ್ಯದ ಜನಕ್ಕೆ ಮೋಸ ಮಾಡಿದಹಾಗೆ ಆಗುತ್ತದೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಾನು ೧೯೮೫–೮೬ ರಲ್ಲಿ ಹೊಸದಾಗಿ ಚುನಾಯಿತನಾಗಿ ಬಂದಾಗ, ನಮ್ಮ ತಾಲ್ಲೂಕಿನಲ್ಲಿ ೪ ಕೆರೆಗಳನ್ನು ಬಜೆಟ್‌ನಲ್ಲಿ ಸೇರಿಸಿದರು. ಇದುವರೆಗೂ ಅವುಗಳು ಪ್ರಾರಂಭ ಆಗಿಯೇ ಇಲ್ಲ. ಇನ್ನು ೬ ತಿಂಗಳು ಕಳೆದರೆ ಮುಗಿದೇಹೋಯಿತು. ೪ ವರ್ಷದ ಹಿಂದೆ ಬಜೆಟ್‌ನಲ್ಲಿ ಸೇರಿದಂಥ ಕೆಲಸಗಳನ್ನು ಮಾಡಿಸುವುದಕ್ಕಾಗಲಿಲ್ಲ ಎಂದು ಹೇಳಿದರೆ, ಇವತ್ತು ಈ ವರ್ಷದ ಬಜೆಟ್‌ನಲ್ಲಿ ಹೇಳಿರುವುದು ಇನ್ನು ಆರು ತಿಂಗಳಲ್ಲಿ ಮಾಡುವುದಕ್ಕೆ ಸಾಧ್ಯವಾಗುತ್ತದೆಯೋ ಎಂದು ಸರ್ಕಾರವನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಬರೀ ಬಾಯಿಯಲ್ಲಿ ಹೇಳಿದರೆ, ಜನಗಳ ಸಮಸ್ಯೆ ಬಗೆಹರಿದಂತೆ ಆಗಲಿಲ್ಲ. ತಾವು ಹೇಳಿದ ರೀತಿಯಲ್ಲಿ ಇರತಕ್ಕ ಸಮಸ್ಯೆಗಳನ್ನು ಅರಿತು ಪರಿಹಾರ ಕೊಡತಕ್ಕ ರೀತಿಯಲ್ಲಿ ಕೆಲಸಗಳಾಗಬೇಕು, ಬಜೆಟ್‌ನಲ್ಲಿ ಏನೇ ಹೇಳಿದರೂ ಅವು ಈಡೇರಬೇಕಾಗುತ್ತದೆ. ಇನ್ನು ಜನತಾ ಮನೆಗಳನ್ನು ಎಲ್ಲಾ ಕಡೆ ಕಟ್ಟಿಸಿದ್ದೀರಿ. ಆದರೆ ಅವುಗಳಿಗೆ ಹಣ ಬಿಡುಗಡೆ ಮಾಡಿಲ್ಲ. ಇದಕ್ಕೆ ಸಂಬಂಧಿಸಿದ ಬಿಲ್ಲುಗಳು ಟ್ರಜರಿಗೆ ಹೋದರೆ ಒಂದು ಬಿಲ್ಲೂ ಪಾಸಾಗುತ್ತಾ ಇಲ್ಲ. ಕೊನೆಯ ಪಕ್ಷ ಹುಡ್ಕೋ ಮತ್ತು ಜನತಾ ಮನೆಗಳ ಹಣ ಏನಿದೆ ಅದನ್ನು ಬೇರೆ ಕೆಲಸಗಳಿಗೆ ಉಪಯೋಗಿಸದೇ ಇವರಿಗೇ ಕೊಡಬೇಕು. ಮಳೆಗಾಲ ಪ್ರಾರಂಭವಾದರೆ, ಈ ಮನೆಗಳು ಬಿದ್ದು ಹೋಗುತ್ತವೆ. ಟ್ರಜರಿಯಲ್ಲಿ ನೀವು ೪೫ ಐಟಂಗಳನ್ನು ಇಟ್ಟುಕೊಂಡಿದ್ದೀರಿ. ಇವತ್ತು ಸ್ಯಾಲರಿ ಬಿಟ್ಟರೆ ಬೇರೆ ಯಾವುದೇ ಬಿಲ್ಲುಗಳು ಪಾಸ್ ಆಗುತ್ತಾ ಇಲ್ಲ. ...

ಅಧ್ಯಕ್ಷರು.—ಮುಕ್ತಾಯ ಮಾಡಿ. ನೀವು ವೆಲ್‌ಕಮ್ ಮಾಡಿ ಅಥವಾ ವಿರೋಧ ಮಾಡಿ.

ಶ್ರೀ ಬಿ. ಲಕ್ಕಪ್ಪ.—ನಾನು ಮೊದಲೇ ವಿರೋಧ ಮಾಡಿದ್ದೇನೆ. ಸ್ವಾಗತ ಮಾಡುವುದಕ್ಕೆ ಈ ಬಜೆಟ್‌ನಲ್ಲಿ ಏನೂ ಇಲ್ಲ. ಕೊನೆಯದಾಗಿ, ಜವಹರಲಾಲ್ ಬಾಲಭವನ ಎಂದು ಇದೆ. ಇದರ ಬಗ್ಗೆ ಪತ್ರಿಕೆಯಲ್ಲೂ ಸಾಕಷ್ಟು ವಿಚಾರಗಳು ಬಂದಿದೆ. ಅಲ್ಲಿ ಒಬ್ಬರು ಅಡ್ಮಿನಿಸ್ಟ್ರೇಟಿವ್ ಆಫೀಸರ್ ಇದ್ದಾರೆ. ಅವರು ವಿ. ಎ. ವಸಂತರಾವ್ ಎಂದು. ಇವರು ಅಲ್ಲಿಗೆ ಬರುವುದಕ್ಕೆ ಮುಂಚೆಯೇ ಬಾಲಭವನದಲ್ಲಿ ಫೋನ್ ಇತ್ತು. ಈ ಫೋನ್ ಬಿಲ್ಲನ್ನು ಎರಡು ತಿಂಗಳಿಗೊಂದು ಸಾರಿ ಕಟ್ಟುವುದು. ಇದರ ಬಿಲ್ ೫೦೦–೬೦೦ ರೂಪಾಯಿಗಳಿಗಿಂತ ಹೆಚ್ಚು ಬಂದಿರಲೇ ಇಲ್ಲ. ಆದರೆ ಈ ಮಹಾಶಯ ಬಂದಮೇಲೆ ಟೆಲಿಫೋನ್ ಬಿಲ್ ಆರು ಸಾವಿರ ಏಳು ಸಾವಿರದವರೆಗೆ ಆಗಿದೆ. ಇದು ಏತಕ್ಕೆ ಆಯಿತು, ಹೇಗೆ ಆಯಿತು ಎಂದು ವಿಚಾರ ಮಾಡಿದಾಗ, ಅವರಿಗೆ ಬೇಕಾದವರು ಯಾರೋ ಒಬ್ಬರು ಹೆಂಗಸರು ಅಮೇರಿಕದಲ್ಲಿದ್ದಾರಂತೆ, ಅವರಿಗೆ ಫೋನ್ ಮಾಡುತ್ತಾರಂತೆ. ಬಾಲಭವನದಿಂದಲೇ ಈ ರೀತಿ ಟೆಲಿಫೋನ್ ಮಾಡುತ್ತಾರಂತೆ. ಬಾಲಭವನದ ವೆಚ್ಚದಲ್ಲಿ ಅವರ ಸ್ವಂತ ಉಪಯೋಗಕ್ಕೆ ಸರ್ಕಾರ ಬಿಲ್ ಕಟ್ಟಬೇಕಾಗಿದೆ. ಬಾಲಭವನದ ಜೀಪ್ ಸದಾ ಅವರ ಮನೆಯ ಹತ್ತಿರವೇ ಇರುತ್ತದೆ. ಇವರು ಅದನ್ನು ತೆಗೆದುಕೊಂಡು ಹೋಗಿ ಆಕ್ಸಿಡೆಂಟ್ ಮಾಡಿದ್ದಾರೆ. ಅವರ ಬಗ್ಗೆ ಕೇಸ್ ಹಾಕಿ, ಫೈನ್ ಹಾಕಿದ ದಾಖಲೆ ಇದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಮಾಜ ಕಲ್ಯಾಣ ಸಚಿವರು).—ಮಾನ್ಯ ಅಧ್ಯಕ್ಷರೇ, ಲಕ್ಕಪ್ಪನವರು ಈಗಲ್ಲ ಆದರೆ ಒಂದೆರಡು ವಿಷಯ ಹೇಳುತ್ತೇನೆ. ಮಾನ್ಯ ಲಕ್ಕಪ್ಪನವರು ಮಾತನಾಡುತ್ತಾ,

ಐ. ಸಿ. ಡಿ. ಎಸ್. ಪ್ರೋಗ್ರಾಂನ್ನು ೧೪ ಬ್ಲಾಕ್‌ಗಳಿಗೆ ಕೇಂದ್ರ ಸರಕಾರದವರು ಮಂಜೂರಾತಿ ಮಾಡಿ ೮ ತಿಂಗಳಾಯಿತು. ರಾಜ್ಯ ಸರಕಾರದ ಖಜಾನೆ ಎಲ್ಲಾ ಖಾಲಿಯಾಗಿದೆ. ಅದಕ್ಕೋಸ್ಕರ ಇವರು ಕೆಲಸ ಶುರು ಮಾಡಲಿಲ್ಲ ಎಂದು ನೇರವಾಗಿ ಸರಕಾರದ ಮೇಲೆ ಆಪಾದನೆ ಮಾಡಿದರು. ಇದು ತಪ್ಪು. ಇದರಲ್ಲಿ ಎಷ್ಟು ಸತ್ಯಾಂಶ ಇದೆ ಎಂದು ಜನಗಳಿಗೆ ಗೊತ್ತಾಗಬೇಕೆಂದು ಹೇಳುತ್ತೇನೆ. ಕೇಂದ್ರ ಸರಕಾರದವರು ಐಸಿಡಿಎಸ್ ಬ್ಲಾಕ್‌ಗಳನ್ನು ಸ್ಯಾಂಕ್ಷನ್ ಮಾಡತಕ್ಕ ಸಂದರ್ಭದಲ್ಲಿ ಸಾಮಾನ್ಯವಾದ ನಾರ್ಮ್ಸ್ ಇಟ್ಟುಕೊಂಡಿದ್ದಾರೆ. ಗೌರ್ನಮೆಂಟ್ ಆಫ್ ಇಂಡಿಯಾ ಆಫೀಸರ್ಸ್ ಮತ್ತು ನಮ್ಮ ಆಫೀಸರ್ಸ್ ಸೇರಿಕೊಂಡು ಒಂದು ಲಿಸ್ಟ್ ಮಾಡಿ ಕೇಂದ್ರಕ್ಕೆ ಕಳುಹಿಸುತ್ತಾರೆ. ಮಾನ್ಯ ಬಸವಣ್ಣಪ್ಪನವರು ಸೋಷಿಯಲ್ ವೆಲ್‌ಫೇರ್ ಮಿನಿಸ್ಟರ್ ಆಗಿದ್ದಾಗ ಇದನ್ನು ಮಾಡಿ ಕಳುಹಿಸಿದ್ದರು. ಈ ರೀತಿ ಕಳುಹಿಸಿದ ಮೇಲೆ ಕೇಂದ್ರದವರು ನಾರ್ಮ್ಸ್ ಬಿಟ್ಟು ೧೪ ರಲ್ಲಿ ಎಂಟನ್ನು ಬದಲಾವಣೆ ಮಾಡಿದರು. ಇವರು ಬದಲಾವಣೆ ಮಾಡಿರುವುದರಲ್ಲಿ ಯಾವ ಯಾವ ಬ್ಲಾಕ್ ಸೇರಿದೆ, ಅದನ್ನು ಲಕ್ಕಪ್ಪನವರೇ ದೆಹಲಿಗೆ ಹೋಗಿ ಬದಲಾಯಿಸಿಕೊಂಡು ಬಂದಿದ್ದಾರೆ ಎಂದು ನಾನೂ ಹೇಳಬಹುದಲ್ಲ. ಒಟ್ಟಿನಲ್ಲಿ ಬದಲಾವಣೆ ಆಗಿದೆ. ಆದರೆ ನಾನು ಆ ರೀತಿ ಹೇಳುವುದಿಲ್ಲ. ಬದಲಾವಣೆ ಆಗಿರುವುದು ಸರಿಯಲ್ಲ ಎಂದು ನಾವು ಹೇಳುತ್ತಿದ್ದೇವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಸಂಖ್ಯೆ ಎಲ್ಲಿ ಜಾಸ್ತಿ ಇದೆ ಬಡವರ ಸಂಖ್ಯೆ ಎಲ್ಲಿ ಜಾಸ್ತಿ ಇದೆ ಅಲ್ಲಿಗೆ ನಾವು ರೆಕಮೆಂಡ್ ಮಾಡುತ್ತೇವೆ. ನಾನು ಹೇಳುವುದನ್ನು ಕೇಳಿ. ಕೇಳುವುದಕ್ಕೆ ನಿಮಗೆ ತಾಳ್ಮೆ ಇಲ್ಲ, ಸ್ವಲ್ಪ ಕೇಳಬೇಕು. ಇದರಲ್ಲಿ ಎಷ್ಟು ಸತ್ಯಾಂಶ ಇರುತ್ತದೆ, ಎಷ್ಟು ತಪ್ಪು ಮಾಹಿತಿಗಳನ್ನು ಇಟ್ಟುಕೊಂಡು ನೀವು ಮಾತನಾಡುತ್ತೀರಿ ಎಂಬುದು ಜನರಿಗೆ ಗೊತ್ತಾಗಬೇಕು. ಕೇಂದ್ರ ಸರಕಾರಕ್ಕೆ

೪-೩೦ ಪಿ. ಎಂ.

ನೀವು ಮಾಡಿರುವುದು ಸರಿಯಲ್ಲ, ನೀವು ಮಾಡಿರುವುದು ಹೀಗಾಗಿದೆ ಎಂದು ಬರೆದಿರುತ್ತೇವೆ. ಇನ್ನೂ ಏನೂ ಉತ್ತರವೇ ಬಂದಿಲ್ಲ. ಇನ್ನೇನು ಮಾಡುವುದು. ಬಂದಷ್ಟು ಹಣ ಬರಲಿ ಎಂದು ಒಪ್ಪಿಕೊಂಡಿದ್ದೇವೆ. ಈ ಕಾರಣದಿಂದ ನಿಧಾನ ಆಗಿದೆಯೇ ಹೊರತು, ಖಜಾನೆಯಲ್ಲಿ ದುಡ್ಡಿಲ್ಲ ಎಂದು ನಿಧಾನ ಆಗಲಿಲ್ಲ. ಇದರಲ್ಲಿ ಕೇಂದ್ರ ಸರಕಾರ ಮೂರನೆ ಎರಡು ಭಾಗ ಹಣ ಕೊಡುತ್ತದೆ. ರಾಜ್ಯ ಸರಕಾರ ಮೂರನೇ ಒಂದು ಭಾಗ ಹಣ ಹಾಕುತ್ತದೆ. ಈ ಹದಿನಾಲ್ಕು ಬ್ಲಾಕ್‌ಗಳಲ್ಲಿ ಈ ವರ್ಷ ಕೆಲಸ ಪ್ರಾರಂಭ ಮಾಡಲಿದ್ದೇವೆ. ಇಷ್ಟರಲ್ಲೇ ಸರಕಾರ ಆಜ್ಞೆ ಹೊರಡಿಸಲಿದ್ದೇವೆ. ಜಾಗಗಳ ಬಗ್ಗೆ ರಾಜಕೀಯ ಬಂದಿದ್ದರಿಂದ ತಡವಾಯಿತು. ಮತ್ತೆ ವಸಂತರಾವ್ ಎಂಬ ಅಧಿಕಾರಿಯ ಬಗ್ಗೆ ಹೇಳಿದರು.

ಶ್ರೀ ಬಿ. ಲಕ್ಕಪ್ಪ.—ಅವರು ನಿಮ್ಮ ಸ್ನೇಹಿತರು ಇರಬಹುದು.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಅವರು ನಿಮ್ಮ ಸ್ನೇಹಿತರು ಇರಬಹುದು. ನಿಮ್ಮ ಸ್ನೇಹಿತರುಗಳು ಯಾರು ಎಲ್ಲೆಲ್ಲಿ ಹೋಗುತ್ತಾರೆ, ಏನು ಮಾಡುತ್ತಾರೆ, ಯಾರಿಗೆ ಗೊತ್ತು. ಅವರು ನನ್ನ ಸ್ನೇಹಿತರಂತೂ ಅಲ್ಲ. ಅವರು ಸರಕಾರದ ಅಧಿಕಾರಿಗಳು. ಬಾಲಭವನಕ್ಕೆ ಡೆಪ್ಯುಟೇಷನ್ ಮೇಲೆ ಹೋಗಿದ್ದಾರೆ. ಬಾಲಭವನ ಒಂದು ರಿಜಿಸ್ಟರ್ಡ್ ಸಂಸ್ಥೆ. ಅದು ಸರಕಾರದ ನಿಯಂತ್ರಣಕ್ಕೆ ಒಳಪಟ್ಟಿಲ್ಲ. ವಸಂತರಾವ್ ಎಂಬುವರು ಕಮರ್ಷಿಯಲ್ ಟ್ಯಾಕ್ಸ್ ಆಫೀಸರ್. ಕಮರ್ಷಿಯಲ್ ಟ್ಯಾಕ್ಸ್ ಆಫೀಸರ್ ಹುದ್ದೆ ಎಂತಹ ಜ್ಯೂಸಿಯಾದ ಜಾಬ್ ಎಂದು ಎಲ್ಲರಿಗೂ ಗೊತ್ತಿದೆ. ಅದನ್ನು ಬಿಟ್ಟು ಅವರು ಬಾಲಭವನಕ್ಕೆ ಏತಕ್ಕೆ ಬರಬೇಕು? ಅಲ್ಲಿ ನೀವು ಹೇಳಿರತಕ್ಕ ವಿಚಾರಗಳ ಬಗ್ಗೆ ವಿಚಾರಣೆ ಮಾಡಿಸುತ್ತೇನೆ. ಅದು ಬೇರೆ ವಿಷಯ. ಆದರೆ ಒಂದು ವಿಚಾರ ಹೇಳುವುದು ನನ್ನ ಕರ್ತವ್ಯ. ಬಾಲಭವನ ನಾಲ್ಕಾರು ವರ್ಷಗಳ ಹಿಂದೆ ಯಾವ ರೀತಿ ಇತ್ತು, ಇವತ್ತು ಏನಾಗಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ನನ್ನ ದೃಷ್ಟಿಯಲ್ಲಿ ಹೇಳುವುದಾದರೆ ಇವತ್ತು ಅಲ್ಲಿ ಹಂಡ್ರೆಡ್ ಪರ್ಸೆಂಟ್ ಇಂಪ್ರೂವ್‌ಮೆಂಟ್ ಆಗಿದೆ. ಅಲ್ಲಿ ಜೀಪ್ ಆಕ್ಸಿಡೆಂಟ್ ಮಾಡಿದ್ದವನು ಡ್ರೈವರ್ ಡ್ರೈವರ್‌ನ್ನು ಸಸ್ಪೆಂಡ್ ಮಾಡುವಂತೆ ಹಿಂದಿನ ಮುಖ್ಯ ಮಂತ್ರಿಗಳು ಸೂಚನೆ ಕೊಟ್ಟಿದ್ದರು. ಅವನನ್ನು ಸಸ್ಪೆಂಡ್ ಮಾಡಲಾಗಿದೆ. ಅವನು ಆಕ್ಸಿಡೆಂಟ್ ಮಾಡಿ, ಇಬ್ಬರು ಸತ್ತಿದ್ದಾರೆ. ಸತ್ತಿರುವ ವಿಷಯವನ್ನು ಬಚ್ಚಿಡುವುದಕ್ಕೆ ಆಗುತ್ತದೆಯೇ? ಡ್ರೈವರ್ ಕುಡಿದು ಆಕ್ಸಿಡೆಂಟ್ ಮಾಡಿರುತ್ತಾನೆ. ಈ ವಸಂತರಾವ್ ಅವರನ್ನು ಅಲ್ಲಿಂದ ಕಳುಹಿಸುವುದಕ್ಕೆ ಕೆಲವರು ಚಿತಾವಣೆ ಮಾಡಿರುತ್ತಾರೆ. ಅವರನ್ನು ಬೇಕಾದರೆ ಕಳುಹಿಸುತ್ತೇವೆ ಎಂದು ಇಟ್ಟುಕೊಳ್ಳಿ. ಅಮೇರಿಕಾದಲ್ಲಿ ಯಾರಿಗೋ ಫೋನ್ ಮಾಡಿರುತ್ತಾರೆ ಎಂದು ಹೇಳಿದ್ದೀರಿ. ಅದರ ಬಗ್ಗೆ ವಿಚಾರಿಸುತ್ತೇನೆ. ಆದರೆ ಈ ವಸಂತರಾವ್ ಅವರು ಬಂದ ಮೇಲೆ ಬಾಲಭವನ ಇಂಪ್ರೂವ್ ಆಗಿದೆ ಎಂಬುದನ್ನು ಒಪ್ಪಲೇ ಬೇಕು. ಸರಿಯಾದ

ಮಾಹಿತಿಗಳನ್ನು ತರಿಸಿಕೊಂಡು ಮಾತನಾಡಬೇಕು ಹಾಗೂ ಆಪಾದನೆ ಮಾಡುವಾಗ ಒಳ್ಳೆಯ ಕೆಲಸ ಗಳನ್ನೂ ಹೇಳಬೇಕಾಗುತ್ತದೆ ಎಂದು ಮಾನ್ಯ ಸದಸ್ಯರಿಗೆ ನಾನು ಈ ವಿಷಯವನ್ನು ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು.—ಬೇಗ ಮುಗಿಸಿರಿ. ಚೆನ್ನಾಗಿ ಮಾತನಾಡಿದಿರಿ, ಕೊನೆಕೊನೆಗೆ ಏನೋ ಹೇಳಿದಿರಿ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ, ಅವರು ಹೇಳಿದ್ದಕ್ಕೆ ಉತ್ತರ ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ. ಬಾಲಭವನಕ್ಕೆ ಒಂದು ಲಾರಿ ಮರಳು ತರಿಸಿದ್ದಕ್ಕೆ ೩ ಸಾವಿರ ರೂಪಾಯಿಗಳೆಂದು ಇಲ್ಲಿ ಬರೆದಿದ್ದಾರೆ. ಆಮೇಲೆ ಒಂದು ಲಾರಿ ಗೊಬ್ಬರದ ಬೆಲೆ ಸಾವಿರ ರೂಪಾಯಿ ಗಳೆಂದು ಇಲ್ಲಿ ಬರೆದಿದ್ದಾರೆ. ನೋಡಿ.........

ಅಧ್ಯಕ್ಷರು.—ನೀವು ಅದನ್ನೆಲ್ಲಾ ಬರೆದು ಮಂತ್ರಿಗಳಿಗೆ ಕಳುಹಿಸಿ. ಈಗ ಮುಕ್ತಾಯ ಮಾಡಿ.

ಶ್ರೀ ಬಿ. ಲಕ್ಕಪ್ಪ.—ನನ್ನ ಅಭಿಪ್ರಾಯವನ್ನಾದರೂ ಹೇಳಬೇಡವೇ ಅಧ್ಯಕ್ಷರೇ, ನಾನು ಏನು ಹೇಳಿದ್ದೇನೆ ಆ ಎಲ್ಲಾ ಕಾಗದಪತ್ರಗಳನ್ನು ತಮ್ಮ ಕಡೆಗೆ ಕಳುಹಿಸಿಕೊಡುತ್ತೇನೆ. ಅದನ್ನು ತಾವು ನೋಡಿ, ಬೇಕಾದರೆ ಮಾನ್ಯ ಮಂತ್ರಿಗಳು ಒಂದು ವಿಚಾರಣೆ ಮಾಡಲಿ, ಆಗ ಅವರ ಪ್ರಾಮಾಣಿಕತನ ಗೊತ್ತಾಗುತ್ತದೆ.

ಅಧ್ಯಕ್ಷರು. ನೀವು ಮುಗಿಸಿ.

ಶ್ರೀ ಬಿ. ಲಕ್ಕಪ್ಪ.—ಇನ್ನು ಅಂಗನವಾಡಿ ಬಗ್ಗೆ ಒಂದು ಮಾತು ಹೇಳುತ್ತೇನೆ.

ಅಧ್ಯಕ್ಷರು.—ಇಲ್ಲ ಮುಗಿಸಿ ಬೇಗ. ಮಾತನಾಡುವವರು ಇನ್ನೂ ಜಾಸ್ತಿ ಜನ ಸದಸ್ಯರಿದ್ದಾರೆ.

ಶ್ರೀ ಬಿ. ಲಕ್ಕಪ್ಪ.—ಮುಗಿಸುತ್ತೇನೆ. ಸುಮಾರು ನಾಲ್ಕು ವರ್ಷಗಳಿಂದಲೂ ಈ ಐಸಿಡಿಎಸ್ ಸ್ಕೀಮ್‌ನ್ನು ಕಳುಹಿಸಿಕೊಡುತ್ತಲೇ ಇದ್ದಾರೆ. ಇವರು ಅದರ ನಾರ್ಮ್ಸ್ ಎಷ್ಟರ ಮಟ್ಟಿಗೆ ಅನುಸರಿಸಿದ್ದಾರೆ ಎನ್ನುವುದು ನನಗೆ ಗೊತ್ತಿದೆ. ಒಟ್ಟು ೧೪ ಸ್ಕೀಮ್‌ಗಳಲ್ಲಿ ಕಾಂಗ್ರೆಸ್ ಎಂಎಲ್‌ಎ ಗಳು ಇರುವಂತಹ ಕ್ಷೇತ್ರಗಳಿಗೆ ಒಂದು ಸ್ಕೀಮ್ ಮಾತ್ರ ಕೊಟ್ಟಿದ್ದಾರೆ. ನನ್ನ ಕ್ಷೇತ್ರವಾದ ಚಿಕ್ಕನಾಯಕನಹಳ್ಳಿಯನ್ನು ಆ ಸ್ಕೀಮ್‌ನಲ್ಲಿ ಸೇರಿಸಿ ಎಂದು ಹನ್ನೆರಡು ಸಾರಿ ಹೇಳಿದರೂ ಸೇರಿಸಲಿಲ್ಲ...

ಶ್ರೀ ಪಿ ಜಿ.ಆರ್. ಸಿಂಧ್ಯಾ.—ತಮಗೆ ವಿಷಯ ಗೊತ್ತಿಲ್ಲದೆ ಮಾತನಾಡಬೇಡಿ. It is not so. I am not going to do it. ೧೪ ಸ್ಕೀಮ್ಸ್‌ನ್ನು ನಾವು ಮಂಜೂರು ಮಾಡಿದ್ದೇವೆ. ಅಲ್ಲಿಯೇ ಕೆಲಸ ಮಾಡಿಸುತ್ತೇವೆ. The joint list is prepared by our officers as well as the officers of the Government of India. ಇದನ್ನು ನಾವು ಮಾಡುವುದಲ್ಲ. ಗೌರ್ನಮೆಂಟ್ ಆಫ್ ಇಂಡಿಯಾ.ಆಫೀಸರ್ಸ್ ಮತ್ತು ನಮ್ಮ ರಾಜ್ಯದ ಅಧಿಕಾರಿಗಳು ಸೇರಿ ಫಿಕ್ಸ್ ಮಾಡುತ್ತಾರೆ. ಅದನ್ನು ನೀವೇ ಹೇಳಿಸಿ ಚೇಂಜ್ ಮಾಡಿಸಿದ್ದಿರಿ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ......

ಅಧ್ಯಕ್ಷರು.—ಇಲ್ಲ, ಆಗುವುದಿಲ್ಲ ನೀವು ನಿಲ್ಲಿಸಿ. ಮುಕ್ತಾಯ ಮಾಡಿ. ಸಾಕು ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ಸುಮಾರು ನೂರಕ್ಕೆ ೭೫ ಪರ್ಸೆಂಟ್‌ನಷ್ಟು ಹರಿಜನ ಮತ್ತು ಗಿರಿಜನರಿರುವ ಕ್ಷೇತ್ರ. ಆದರೆ ಕಳೆದ ೫ ವರ್ಷಗಳಿಂದ ನಾನು ಹೇಳುತ್ತಲೇ ಇದ್ದೇನೆ. ಆದರೂ ನನ್ನ ಕ್ಷೇತ್ರವನ್ನು ಕೈಬಿಟ್ಟಿದ್ದಾರೆ.

ಶ್ರೀ ಬಿ. ಲಕ್ಕಪ್ಪ.—ಆ ಸ್ಕೀಮ್‌ನ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತಾರೆ ಎಂದು ಹೇಳಬೇಕು, ಆ ಸ್ಕೀಮ್ ಲ್ಯಾಪ್ಸ್ ಮಾಡಬಾರದು...

ಅಧ್ಯಕ್ಷರು.—ಮುಗಿಸಿ. ಸಾಕು ನಾನು ಈಗ ಮಾನ್ಯ ಇದಿನಬ್ಬನವರನ್ನು ಕರೆಯುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ (ಉಲ್ಲಾಳ).—ಸನ್ಮಾನ್ಯ ಅಧ್ಯಕ್ಷರೇ ಈ ವರ್ಷ ಮಾನ್ಯ ಮುಖ್ಯ ಮಂತ್ರಿಗಳು ಮಂಡನೆ ಮಾಡಿರತಕ್ಕಂಥ ೨೬೭.೮೩ ಕೋಟಿ ರೂಪಾಯಿಗಳ ಕೊರತೆಯ ಬಜೆಟ್‌ನ್ನು ನಾನು ವಿರೋಧಿಸುತ್ತಾ ಕೇವಲ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಸುಮಾರು

೬೦ ಪುಟಗಳ ಬಜೆಟ್ ಪುಸ್ತಕದಲ್ಲಿ ೮-೯ ಪುಟಗಳ ಸುತ್ತಲು ಕೇಂದ್ರ ಸರ್ಕಾರವನ್ನು ದೂರಿರತಕ್ಕಂಥ ವಿಷಯ, ಅವರ ಮೇಲೆ ಆಪಾದನೆ ಹೊರಿಸಿ ವರ್ಣಮಾಲೆಯನ್ನು ಮಾಡಿದಂತಹ ಸಂದರ್ಭವನ್ನು ನಾನು ಈ ಬಜೆಟ್ ಪುಸ್ತಕದಲ್ಲಿ ಕಾಣುತ್ತಿದ್ದೇವೆ. ಅವರು ನಮಗೆ ಹಣ ಕೊಟ್ಟಿಲ್ಲ ಅದು ಕೊಟ್ಟಿಲ್ಲ ಇದು ಕೊಟ್ಟಿಲ್ಲ ಎಂದು ಹೇಳತಕ್ಕಂಥ ವಿಚಾರ ಕೇಂದ್ರ ಸರ್ಕಾರದ ಮೇಲೆ ಹಾಕಿದ್ದೀರಿ. ಸುಮಾರು ೯ ಪುಟಗಳಷ್ಟು ಭಾಷಣ ಅದಕ್ಕೆ ಸೀಮಿತ ಮಾಡಿದ್ದೀರಿ, ಕುಣಿಯಲಿಕ್ಕೆ ಬಾರದಂತಹ ಮನುಷ್ಯನಿಗೆ ಅಂಗಳ ಡೊಂಕು ಕಂಡಂತೆ ೮-೯ ಪುಟಗಳಲ್ಲಿ ಅವರನ್ನು ದೂರಿರುವ ಪಟ್ಟಿ ನಮಗೆ ಕೊಟ್ಟಿದ್ದೀರಿ. ಕುಣಿಯಲಿಕ್ಕೆ ಬರುವವನು ಅಂಗಳ ಡೊಂಕು ಇದ್ದರು ಕುಣಿಯುತ್ತಾನೆ. ಇನ್ನು ನಾನು ನಮ್ಮ ಕರಾವಳಿ ವಿಚಾರಕ್ಕೆ ಬರುತ್ತೇನೆ. ನಮ್ಮಲ್ಲಿ ಮಲೆನಾಡು ಮತ್ತು ಜಲನಾಡು ಎಂದು ಎರಡು ಇವೆ. ಜಲನಾಡಿನಲ್ಲಿ ಸುಮಾರು ೨೫೦ ಮೈಲುಗಳ ಉದ್ದ ಸಂಪರ್ಕ ಸೇತುವೆ ಪ್ರಕೃತಿ ಸೌಂದರ್ಯ ಇರುವಂತಾದ್ದು. ಈ ೨೫೦ ಮೈಲು ಉದ್ದದಲ್ಲಿ ದೋಣಿ ನಡೆಸುವ ಮೀನುಗಾರರ ಬಗ್ಗೆ, ಕರಾವಳಿಯ ಬಗ್ಗೆ ಈ ಬಜೆಟ್‌ನಲ್ಲಿ ಏನನ್ನು ಪ್ರಸ್ತಾಪ ಮಾಡಿಲ್ಲ. ಇದು ನನಗೆ ಆಶ್ಚರ್ಯವಾಗುತ್ತದೆ. ಇದರಿಂದ ಸರ್ಕಾರಕ್ಕೆ ಸುಮಾರು ೩೫-೪೦ ಕೋಟಿ ರೂಪಾಯಿಗಳ ಹಣ ಬರುತ್ತದೆ. ಇದರಿಂದ ಲಕ್ಷಾಂತರ ಜನ ಮೀನುಗಾರಿಕೆ ಮಾಡಿ ಜೀವನ ಮಾಡತಕ್ಕಂಥವರ ಬಗ್ಗೆ ಸಾವಿರಾರು ಜನ ದೋಣಿ ನಡೆಸುವಂತಹವರ ಬಗ್ಗೆ ಯಾವುದೇ ವಿಚಾರ ನಾನು ಕಾಣುತ್ತಿಲ್ಲ. ಇಲ್ಲಿರುವವರು ಬಹುತೇಕ ಜನ ಸ್ವಾತಂತ್ರ್ಯ ಯೋಧರ ಸಂತತಿ ಹೊಂದಿರುವವರು. ಪೋರ್ಚುಗೀಸ್‌ರೊಡನೆ ಮೊದಲು ಯುದ್ಧ ಮಾಡಿದ ಅಬ್ಬಕ್ಕರಾಣಿ ಸಂತತಿ ಇಲ್ಲಿದೆ. ಪೋರ್ಚುಗೀಸ್‌ರೊಡನೆ ಯುದ್ಧ ಮಾಡಿದವರು ಇವರು. ಇಂಥ ಕಡಲಲ್ಲಿ ಹೋಗಿ ರಾತ್ರಿ ಹಗಲು ದುಡಿಯತಕ್ಕಂಥ ಜೀವನದ ಹಂಗನ್ನು ಬಿಟ್ಟು ಕೆಲಸ ಮಾಡತಕ್ಕಂಥ, ಮನೆಗೆ ಬಂದರೆ ಬಂದೆವು, ಇಲ್ಲ ಎಂದರೆ ಇಲ್ಲ, ನಾವು ಬರುವವರೆಗೂ ಒಲೆಯ ಮೇಲೆ ಅಕ್ಕಿಯನ್ನು ಹಾಕಬೇಡಿ, ನಾವು ಬಂದ ಮೇಲೆ ಅಕ್ಕಿಯನ್ನು ಹಾಕಿ ಎಂದು ಮನೆಯಲ್ಲಿ ಹೇಳಿ ಹೋಗುವ ಇವರು ತೆರೆಗಳ ಹೊಡೆತಕ್ಕೆ, ಬಿರುಗಾಳಿಯ ಸೆಳೆತಕ್ಕೆ, ಆ ದೋಣಿಗಳ ಮಗುಚುವಿಕೆಗೆ ಅವರು ಯಾವ ರೀತಿ ಹೋರಾಟ ಮಾಡುತ್ತಿದ್ದಾರೆಂದು ಎಲ್ಲರಿಗೂ ಗೊತ್ತು. ಅಂಥ ಮೀನುಗಾರರ ಬಗ್ಗೆ ಯಾವುದೇ ವಿಚಾರ ಈ ಬಜೆಟ್‌ನಲ್ಲಿ ಇಲ್ಲ. ಅದು ಅಲ್ಲದೆ ಹೂಳು ಎತ್ತಬೇಕೆಂದು ಐದು ವರ್ಷಗಳಿಂದ ನಾನು ಇಲ್ಲಿಗೆ ಬಂದಲಾಗಾಯ್ತು ಹೇಳುತ್ತಲೇ ಇದ್ದೇನೆ. ಹೂಳು ಎತ್ತಿ ಮೀನುಗಾರರಿಗೆ ಅನುಕೂಲ ಮಾಡಿಕೊಡಿ ಎಂದು ಕೇಳುತ್ತಲೇ ಇದ್ದೇನೆ. ಆದರೂ ಇದುವರೆಗೂ ಹೂಳು ಎತ್ತಲಿಲ್ಲ. ಹೂಳು ಎತ್ತದೇ ಇರುವುದರಿಂದ ಅವರ ಲಾಂಚುಗಳು, ಬೋಟುಗಳು ಮುಳುಗಿ ಹೋಗುತ್ತವೆ. ಹೂಳು ಎತ್ತುವ ಕೆಲಸ ಮಾಡುತ್ತೇವೆ, ಮಾಡುತ್ತೇವೆ ಎಂದು ಹೇಳಿ ನಾಲ್ಕು ವರ್ಷಗಳಿಂದ ಈ ಖಾತೆಗೆ ನಾಲ್ಕು ಮಂತ್ರಿಗಳಾದರು. ಈ ವರ್ಷ ಹೂಳು ಎತ್ತುತ್ತೇವೆಂದು ಒಬ್ಬ ಮಂತ್ರಿಯವರು ಹೇಳಿದ ವಿಷಯವನ್ನು ಇನ್ನೊಬ್ಬ ಮಂತ್ರಿಯವರು ಮರೆತುಬಿಡುತ್ತಾರೆ. ಮೀನುಗಾರಿಕೆ ಖಾತೆಗೆ ಮೊದಲು ಬೈರೇಗೌಡರು ಬಂದರು, ಅವರ ಬೆನ್ನಿಗೆ ಕೃಷ್ಣಾರೆಡ್ಡಿಯವರು ಬಂದರು, ಅವರ ಬೆನ್ನಿಗೆ ರಘುಪತಿಯವರು ಬಂದರು. ಬಹುಶಃ ಆ ಖಾತೆ ಈಗ ಮುಖ್ಯ ಮಂತ್ರಿಗಳ ಸ್ವಾಧೀನದಲ್ಲಿದೆ. ಈ ಹೂಳು ಎತ್ತತಕ್ಕಂಥ ಕಾರ್ಯ ಮಾಡದೇ ಹದಿನೈದು ಜನರಿಗೂ ಹೆಚ್ಚು ಜನ ಸತ್ತುಹೋದರು. ಅದೇ ರೀತಿ ಹತ್ತು-ಹದಿನೈದು ಬೋಟುಗಳು, ಲಾಂಚುಗಳು ಮುಳುಗಿ ಸುಮಾರು ಎಂಟು ಲಕ್ಷ ರೂಪಾಯಿಗಳು ನಷ್ಟವಾಯಿತು. ಈವತ್ತಿಗೂ ಆ ಹೂಳು ಎತ್ತತಕ್ಕಂಥ ಕೆಲಸವನ್ನು ಮಾಡಿಲ್ಲ. ಕಳೆದ ಅಕ್ಟೋಬರ್ ತಿಂಗಳಿನಲ್ಲಿ ಮೀನುಗಾರರು ಡಿ.ಸಿ.ಯವರ ಕಚೇರಿಯ ಮುಂದೆ ಧರಣಿ ಮಾಡಿದರು. ಅವರು ಧರಣಿ ಮಾಡಿದಾಗ ನೀರಾವರಿ ಇಲಾಖೆಯ ಮುಖ್ಯ ಇಂಜಿನಿಯರ್‌ರವರು ಹೋಗಿ ನಾವು ಹೂಳೆತ್ತುವ ಕಾರ್ಯವನ್ನು ಮಾಡುತ್ತೇವೆ, ನೀವು ಧರಣಿಯನ್ನು ನಿಲ್ಲಿಸಬೇಕೆಂದು ಕೇಳಿಕೊಂಡರು. ಆದರಂತೆ ಧರಣಿಯನ್ನು ನಿಲ್ಲಿಸಲಾಯಿತು. ಇವತ್ತಿನವರೆಗೂ ಹೂಳು ಎತ್ತತಕ್ಕಂಥ ಕೆಲಸ ಇನ್ನೂ ಆಗಲಿಲ್ಲ. ಪುನಃ ಅವರು ಧರಣಿಗೆ ತಯಾರಾಗುತ್ತಿದ್ದಾರೆ. ಅದೂ ಅಲ್ಲದೇ ಸಮುದ್ರ ಕರಾವಳಿಯಲ್ಲಿ ಸಮುದ್ರದ ಕೊರೆತದಿಂದ ಅಪಾರ ನಷ್ಟವಾಗುತ್ತಿದೆ. ಈ ಸಮುದ್ರ ಕೊರೆತವನ್ನು ತಡೆಗಟ್ಟುವುದಕ್ಕಾಗಿ ತಡೆಗೋಡೆಗಳನ್ನು ಹಾಕಬೇಕು. ತಡೆಗೋಡೆಗಳನ್ನು ಹಾಕದಿದ್ದರೆ ಕರಾವಳಿಗೆ ಬಹಳ ತೊಂದರೆಯಾಗುತ್ತದೆ, ಇದರ ಬಗ್ಗೆ ನಾವು ಅನೇಕ ಬಾರಿ ಹೇಳಿದ್ದರೂ ಕೂಡಾ ತಡೆಗೋಡೆಯನ್ನು ಇವತ್ತಿನವರೆಗೂ ನಿರ್ಮಿಸಿಲ್ಲ. ಕೇಂದ್ರದವರು ನಾವು ನೋಡುತ್ತೇವೆ ಎಂದು ಹೇಳುತ್ತಾರೆ. ಕೇಂದ್ರದಿಂದ ಹಣ ಬರಲಿ, ನಾವು ಮಾಡುತ್ತೇವೆ ಎಂದು ಇವರು ಹೇಳುತ್ತಾರೆ. ಈಗ ಮಾಡುತ್ತೇವೆ, ಆಗ ಮಾಡುತ್ತೇವೆ, ಈಗ ಬಾ, ಆಗ ಬಾ, ಹೋಗಿ ಬಾ ಎಂದು ಹೇಳತಕ್ಕಂಥ ರೀತಿಯಲ್ಲಿ ಈ ತಡೆಗೋಡೆಯೂ ಸಹ ಇದುವರೆಗೆ ಆಗಲಿಲ್ಲ. ಇವತ್ತು ಉಳ್ಳಾಲದಲ್ಲಿ ತಡೆಗೋಡೆಯಾಗದೇ ಮೂವತ್ತೆರಡು ಕುಟುಂಬಗಳನ್ನು ಇದ್ದ ಕಡೆಯಿಂದ ತೆಗೆದು ಬೇರೆ ಒಂದು ಊರಿಗೆ ಕಳುಹಿಸಬೇಕಾಯಿತು. ಈಡೆ ತಡೆಗೋಡೆ ನಿರ್ಮಿಸುವುದು ಬಹಳ [illegible]ವಾಗಿದೆ. ಕೇರಳ ರಾಜ್ಯದಲ್ಲಿ ಈ ರೀತಿ ತಡೆಗೋ

ಗಳನ್ನು ನಿರ್ಮಿಸಿ ಅನುಕೂಲ ಮಾಡಿಕೊಟ್ಟಿದ್ದಾರೆ. ಅದೇ ರೀತಿ ನಮ್ಮ ರಾಜ್ಯದಲ್ಲಿಯೂ ಮಾಡ ಬೇಕು. ತಡೆಗೋಡೆಯನ್ನು ನಿರ್ಮಿಸದಿದ್ದರೆ ಕರಾವಳಿ ಉಳಿಯಲಿಕ್ಕೆ ಬಹಳ ತೊಂದರೆಯಾಗುತ್ತ ದೆಂದು ಅನೇಕಸಾರಿ ಸರ್ಕಾರಕ್ಕೆ ಮನವರಿಕೆ ಮಾಡಿದ್ದೇವೆ. ಮಂತ್ರಿಗಳೂ ಕೂಡ ಮಾಡುತ್ತೇವೆಂದು ಹೇಳಿದ್ದಾರೆ. ಮಂತ್ರಿಗಳು ಆ ಜಾಗಕ್ಕೆ ಬಂದು ನೋಡಿ, ಹೌದು ಈ ಕೆಲಸ ಆಗಬೇಕೆಂದು ಹೇಳಿದ್ದಾರೆ. ಆದರೂ ಈ ಕೆಲಸ ಇನ್ನೂ ಆಗಲಿಲ್ಲ. ಕೆಲಸಕ್ಕಾಗಿ ಟೆಂಡರ್ ಕರೆಯಲಿಲ್ಲ. ನಾನು ಸರ್ಕಾರಕ್ಕೆ ಸಲಹೆ ಮಾಡುವಂತಹದ್ದು ಏನೆಂದರೆ, ಮೀನುಗಾರರ ಬಗ್ಗೆ ನೀವು ಒಳ್ಳೆಯ ಅಭಿಪ್ರಾಯ ವನ್ನು ತಾಳಿ ಕೆಲಸ ಮಾಡಿಸಬೇಕು. ಅವರು ಸ್ವಾತಂತ್ರ್ಯ ಯೋಧರ ಕುಟುಂಬದಲ್ಲಿ ಬಂದವರು, ಅಲ್ಲದೆ, ೩೦-೫೦ ಕೋಟಿ ರೂಪಾಯಿಗಳವರೆಗೆ ಸರ್ಕಾರಕ್ಕೆ ಸಂಪಾದನೆ ಕೊಡಲು ಕಾರಣೀಭೂತರಾದ ಅವರ ಜೀವನವು ಒಳ್ಳೆಯ ರೀತಿಯಲ್ಲಿ ಸಾಗುವಂತೆ ಮಾಡಬೇಕು. ಅವರ ಗೋಳನ್ನು ಸರ್ಕಾರ ಅರಿತು ಸಮುದ್ರಕ್ಕೆ ತಡೆಗೋಡೆ ಮಾಡುವಂಥ ಕೆಲಸವನ್ನು ಆದಷ್ಟು ಶೀಘ್ರವಾಗಿ ಮಾಡಬೇಕು. ಅದರ ಜೊತೆಗೆ ಹೊಳು ಎತ್ತತಕ್ಕಂಥ ಕೆಲಸವನ್ನು ಅತೀ ಶೀಘ್ರವಾಗಿ ಮಾಡಬೇಕೆಂದು ಕೇಳಿಕೊಳ್ಳು ತ್ತೇನೆ. ಇನ್ನೊಂದು ವಿಚಾರ, ಮೀನು ಮಾರಾಟ ಮಾಡತಕ್ಕಂಥ ಮತ್ತು ಕೊಂಡು ಹೋಗತಕ್ಕಂಥ ಜನರ ವಿಷಯವನ್ನು ಹೇಳುತ್ತೇನೆ. ಈ ಮೀನು ತಿನ್ನತಕ್ಕಂಥ ಆಹಾರ. ಇದರ ಮೇಲೂ ಕೂಡಾ ಟ್ಯಾಕ್ಸನ್ನು ಹಾಕಿದ್ದಾರೆ. ಎಲ್ಲೆಲ್ಲಿ ಚೆಕ್‌ಪೋಸ್ಟ್‌ಗಳು ಇವೆಯೋ, ಅಲ್ಲಿ ಮೀನುಗಳನ್ನು ಕೊಂಡು ಹೋಗುವಾಗ ಅವರುಗಳನ್ನು ತಡದು ಬೆದರಿಸಿ ಅವರಿಂದ ಹಣವನ್ನು ತೆಗೆದುಕೊಳ್ಳತಕ್ಕಂಥ ಪರಿಸ್ಥಿತಿಯೂ ಇದೆ. ಇದರ ಬಗ್ಗೆ ಅನೇಕ ಕಡೆಗಳಿಂದ ದೂರು ಸಹ ಬಂದಿದೆ. ಇವತ್ತು ಹಸಿ ಮೀನು ಆಗಲಿ, ಒಣ ಮೀನಾಗಲಿ, ತಿನ್ನಲಿಕ್ಕೆ ಉಪಯೋಗಿಸುತ್ತಾರೆ. ಇದರ ಮೇಲೆ ಯಾವುದೇ ತೆರಿಗೆಯನ್ನು ಹಾಕಬಾರದು. ಇದೇ ರೀತಿಯಾಗಿ ಪಿಚ್ಚು (ಸಣ್ಣ) ಮೀನು ಇವೆ. ಇವುಗಳ ಮೇಲೂ ಸಹಾ ಮೂರು ಪರ್‌ಸೆಂಟ್ ಟ್ಯಾಕ್ಸನ್ನು ಹಾಕಿದ್ದಾರೆ. ನಿಜವಾಗಿ ಹೇಳಬೇಕಾದರೆ ಈ ಪಿಚ್ಚು ಮೀನುಗಳನ್ನು ಕೋಳಿಗಳು ತಿನ್ನತಕ್ಕಂಥ ಆಹಾರವನ್ನು ತಯಾರು ಮಾಡುವುದಕ್ಕೆ ಉಪಯೋಗಿ ಸುತ್ತಾರೆ. ಇದರ ಮೇಲೆ ತೆರಿಗೆ ಹಾಕುವುದು ಸರಿಯಲ್ಲ. ಇದರ ಬಗ್ಗೆ ಒಂದು ಅಮೆಂಡ್‌ಮೆಂಟ್ ತರಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ವಿದ್ಯುಚ್ಛಕ್ತಿ ವಿಚಾರವಾಗಿ ಹೇಳ ಬೇಕಾದರೆ ಹೆಚ್ಚು ಹಣವನ್ನು ಖರ್ಚು ಮಾಡಬೇಕೆಂದು ಬಜೆಟ್‌ನಲ್ಲಿ ಹೇಳಿದ್ದಾರೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಥವಾ ನಮ್ಮ ಕ್ಷೇತ್ರದಲ್ಲಾಗಲೀ ವಿದ್ಯುತ್ ಯಾವಾಗಲೂ ಕಣ್ಣುಮುಚ್ಚಾಲೆಯಾಟ ಆಡುವುದನ್ನು ನೋಡಿದರೆ ಬಹಳ ಬೇಜಾರಾಗುತ್ತದೆ. ರಾತ್ರಿಯಿಡೀ ವಿದ್ಯುಚ್ಛಕ್ತಿ ಇಲ್ಲ ಎಂದರೆ ಹೇಗೆ? ಗ್ರಾಹಕರುಗಳು ಹಣವನ್ನು ಕಟ್ಟಿ ವಿದ್ಯುಚ್ಛಕ್ತಿ ಪಡೆದು ರಾತ್ರಿ ಹೊತ್ತು ವಿದ್ಯುತ್ ಇಲ್ಲವೆಂದರೆ ಮತ್ತೆ ಏತಕ್ಕೆ ಇದರ ಉಪಯೋಗ ಬೇಕು? ರಾತ್ರಿಯಲ್ಲಿ ವಿದ್ಯುಚ್ಛಕ್ತಿ ಇಲ್ಲದೇ ಕಷ್ಟವನ್ನು ಸಹಾ ನಾನು ಅನುಭವಿಸಿದ್ದೇನೆ. ನಮ್ಮ ಕ್ಷೇತ್ರದಲ್ಲಿ ರಾತ್ರಿ ಹೊತ್ತು ಎರಡು ಗಂಟೆಗೆ ಹೋದ ವಿದ್ಯುಚ್ಛಕ್ತಿ ಐದು ಗಂಟೆಗೆ ಬರುತ್ತದೆ. ಮೂರು ಗಂಟೆಗೆ ಹೋದರೆ ಆರು ಗಂಟೆಗೆ ಬರುತ್ತದೆ. ಇದರಿಂದ ಎಲ್ಲಾ ಜನರಿಗೂ ಬಹಳ ತೊಂದರೆಯಾಗುತ್ತಿದೆ. ಬಹುಶಃ ನೀವು ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡು ವುದಕ್ಕೆ ಹಣವನ್ನು ಇಟ್ಟಿದ್ದೀರಿ. ಆ ಹಣವನ್ನು ಸಮರ್ಪಕವಾಗಿ ಉಪಯೋಗಿಸಿ ಯಾವಾಗಲೂ ವಿದ್ಯುಚ್ಛಕ್ತಿ ಇರುವಂತೆ ಮಾಡಬೇಕು. ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡುವ ಸರಪಳಿಯೇ ಸರಿಯಾಗಿಲ್ಲ. ಅಲ್ಲಿರತಕ್ಕಂಥ ಅಧಿಕಾರಿಗಳನ್ನು ಕೇಳಿದರೆ ಉದಾಸೀನದಿಂದ ನಾವು ಏನು ಮಾಡುವು ದಕ್ಕಾಗುತ್ತದೆ ಎಂದು ಉತ್ತರವನ್ನು ಹೇಳುತ್ತಾರೆ. ಅವರು ಹೇಳಿದ್ದನ್ನು ನಾವು ನಂಬಬೇಕಾಗು ತ್ತದೆ. ಈ ರೀತಿ ವಿದ್ಯುಚ್ಛಕ್ತಿಯ ಕಣ್ಣುಮುಚ್ಚಾಲೆ ಆಟವನ್ನು ನಿಲ್ಲಿಸಿದರೆ ಒಳ್ಳೆಯದು. ನೀವು ಗ್ರಾಹಕರಿಂದ ಹಣವನ್ನು ತೆಗೆದುಕೊಳ್ಳುತ್ತೀರಿ. ಅದರಲ್ಲೂ ಈಗ ಹೊಸದಾಗಿ ಠೇವಣಿ ಕೂಡಾ ಕೊಡಬೇಕೆಂದು ಹೇಳುತ್ತಿದ್ದೀರಿ. ಈ ವಿದ್ಯುತ್‌ನ ಕಣ್ಣುಮುಚ್ಚಾಲೆಯನ್ನು ನೀವು ನಿಲ್ಲಿಸಬೇಕು. ನೀವು ಗ್ರಾಹಕರಿಂದ ಹಣವನ್ನು ತೆಗೆದುಕೊಳ್ಳುತ್ತೀರಿ, ಈಗ ಠೇವಣಿ ಕೂಡ ಇಡಬೇಕೆಂದು ಹೇಳುತ್ತಾ ಇದ್ದೀರಿ. ಯಾರಾದರೂ ಈ ರೀತಿಯಲ್ಲಿ ಹಣವನ್ನು ಕೊಡಲಿಲ್ಲ ಅಂದರೆ ಅಂತಹವರ ಮೇಲೆ ನೀವು ಬಲಾತ್ಕಾರ ಮಾಡುತ್ತೀರಿ. ಹಾಗಿರುವಾಗ ಈ ವಿದ್ಯುತ್ ತೊಂದರೆಯಿಂದ ತೊಂದರೆ ಆದರೆ ಯಾರಾದರೂ ಅದನ್ನು ಮೆಚ್ಚುತ್ತಾರೆಯೋ? ಯಾರೂ ಅದನ್ನು ಹೊಗಳುವುದಿಲ್ಲ. ಆದರೆ ಈ ರೀತಿಯಾಗಿ ದಿನಾಲೂ ಕಣ್ಣು ಮುಚ್ಚಾಲೆ ಆದರೆ ಅದು ಯಾರಿಗೂ ಸಹನೀಯವಾಗುವುದಿಲ್ಲ. ಆದುದರಿಂದ ಈ ಬಗ್ಗೆ ಸೂಕ್ತ ಗಮನವನ್ನು ಕೊಡಬೇಕು. ಅಧಿಕಾರಿಗಳಿಗೆ ಹೆಚ್ಚಿನ ಒಂದು ಜವಾಬ್ದಾರಿಯನ್ನು ವಹಿಸಿಕೊಡಬೇಕು.

ಇನ್ನು ಪೋಲೀಸ್ ಇಲಾಖೆಗೆ ಸಾಕಷ್ಟು ಹಣವನ್ನು ನೀವು ಇಡಲಿಲ್ಲ. ಈ ಇಲಾಖೆಗೆ ಸ್ವಲ್ಪ ಹೆಚ್ಚಿಗೆ ಹಣವನ್ನು ಕೊಟ್ಟು ಚೆನ್ನಾಗಿ ನೋಡಿಕೊಳ್ಳಬೇಕು. ಯಾಕೆಂದರೆ ಇವರು ಹಗಲು ರಾತ್ರಿ

ಜನರನ್ನು ಸಂರಕ್ಷಣೆ ಮಾಡುವ ಜವಾಬ್ದಾರಿಯನ್ನು ವಹಿಸಿಕೊಂಡವರಾಗಿದ್ದಾರೆ. ಕಳ್ಳಕಾಕರನ್ನು ದರೋಡೆಕೋರರನ್ನು ಇವರು ತಹಬಂದಿನಲ್ಲಿ ಇಡಬೇಕಾಗುತ್ತದೆ. ಈ ರೀತಿ ನಮ್ಮ ರಕ್ಷಣೆಯನ್ನು ಮಾಡುವ ಪೊಲೀಸ್ ಇಲಾಖೆಗೆ ನೀವು ಬಜೆಟ್‌ನಲ್ಲಿ ಹೆಚ್ಚಿಗೆ ಸಹಾಯವನ್ನು ಮಾಡಿದ ಹಾಗೆ ಕಾಣುವುದಿಲ್ಲ. ನಮ್ಮ ಉಳ್ಳಾಲದ ಬಗ್ಗೆ ಹೇಳುವುದಾದರೆ. ಗೃಹಮಂತ್ರಿಗಳಾಗಿ ಮಾನ್ಯ ಜಾಲಪ್ಪನವರು ಇದ್ದಾಗ ನಾನು ಅವರನ್ನು ಕೇಳಿಕೊಂಡಿದ್ದೆ. ಅವರು ಆಯಿತು ಎಂದು ಒಪ್ಪಿಕೊಂಡಿದ್ದರು ಕೂಡ ಇವೊತ್ತಿಗೂ ಕಾರ್ಯಾಚರಣೆಯಾಗಿಲ್ಲ. ಏನೆಂದರೆ, ಉಳ್ಳಾಲ ಭಾಗದ ಒಂದೂವರೆ ಲಕ್ಷ ಜನಸಂಖ್ಯೆಗೆ ೯ ಜನರಷ್ಟು ಪೊಲೀಸರು ಇರುವುದು ಸರಿಯಲ್ಲ, ಅದನ್ನು ೧೫ ಮಾಡಿ ಎಂದು ಕೇಳಿದ್ದಕ್ಕೆ ಅಂದು ಅವರು ಸಮ್ಮತಿಯನ್ನು ಕೊಟ್ಟಿದ್ದರು. ಆದರೆ ನಮಗೆ ಮಾತ್ರ ಪೋಲೀಸರ ಸಂಖ್ಯೆಯಲ್ಲಿ ಹೆಚ್ಚಳವಾಗಿಲ್ಲ. ಉಳ್ಳಾಲದಲ್ಲಿ ಪೋಲೀಸರ ವಸತಿ ಗೃಹಕ್ಕೆ ಮತ್ತು ಪೋಲೀಸ್ ಸ್ಟೇಷನ್‌ಗೆ ಎಂದು ಎರಡೂವರೆ ಎಕರೆ ಜಾಗವನ್ನು ತೆಗೆದು ಇಟ್ಟಿದ್ದಾರೆ. ಆದರೆ ಇನ್ನೂ ಅದು ಕಾರ್ಯಗತವಾಗಿಲ್ಲ. ದಯವಿಟ್ಟು ನನ್ನ ಈ ಟಿಪ್ಪಣಿಯನ್ನು ಬರೆದುಕೊಳ್ಳುವವರು ಬರೆದುಕೊಳ್ಳಬೇಕು. ಆ ಜಾಗಕ್ಕೆ ಬೇಲಿ ಹಾಕಿ ಇಟ್ಟು ಐದು ವರ್ಷಗಳು ಕಳೆದುಹೋಗಿವೆ. ಆದುದರಿಂದ ಇನ್ನಾದರೂ ಆ ಒಂದು ಕಾರ್ಯವನ್ನು ತ್ವರಿತವಾಗಿ ಮಾಡಿಮುಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಭಾಗವು ಕೇರಳದ ಗಡಿ ಪ್ರದೇಶವಾದ ಕಾರಣ ಇಲ್ಲಿ ಪೋಲೀಸರ ಸಂಖ್ಯೆ ಜಾಸ್ತಿ ಮಾಡಬೇಕಾಗುತ್ತದೆ. ಈ ಬಗ್ಗೆ ಸೂಕ್ತ ಗಮನ ಕೊಟ್ಟು ಪೋಲೀಸರ ಸಂಖ್ಯೆ ಜಾಸ್ತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪಾನನಿರೋಧ ಬಗ್ಗೆ ಮಾನ್ಯ ಸದಸ್ಯರಾದ ಕುಮಾರಸ್ವಾಮಿಯವರು ಹೇಳಿದ್ದಾರೆ. ನಾನು ಅದನ್ನು ಸಂಪೂರ್ಣವಾಗಿ ಒಪ್ಪುತ್ತೇನೆ. ಇವೊತ್ತು ರಾಜ್ಯದ ಎಲ್ಲೆಡೆಗಳಲ್ಲಿಯೂ ನೋಡಿದರೆ ಶರಾಬು ಅಂಗಡಿ, ಮಧ್ಯದ ಅಂಗಡಿ ಎನ್ನುವ ಬೋರ್ಡ್‌ಗಳನ್ನು ನೋಡಬಹುದಾಗಿದೆ. ಅದರಿಂದ ರಾಜ್ಯಕ್ಕೆ ವರಮಾನ ಬರಬಹುದು, ಆದರೆ ಅದರ ಪರಿಣಾಮ ಏನಾಗುತ್ತದೆ ಎಂದು ಯೋಚನೆ ಮಾಡಿದ್ದೀರಾ ? ನೀವೇ ಹೇಳುತ್ತೀರಿ, ಏನೆಂದರೆ, ಮುಂದೆ ಬರತಕ್ಕಂಥ ನಮ್ಮ ಪೀಳಿಗೆ ಜನರು, ನಮ್ಮ ಮುಂದೆ ಆಳತಕ್ಕಂಥ ಜನರು, ಪ್ರಜಾಪ್ರಭುತ್ವವನ್ನು ಉಳಿಸತಕ್ಕಂಥ ಜನರು ಅವರು ಸನ್ಮಾರ್ಗಿಗಳಾದ ಬೇಕು, ಅವರು ಮೇಧಾವಿಗಳಾಗಬೇಕು, ಅವರು ಬುದ್ಧಿವಂತರಾಗಬೇಕು, ನಮ್ಮ ಮಕ್ಕಳು ಒಳ್ಳೆಯವರಾಗಬೇಕು ಎಂದು ? ಆದರೆ ಹಾಗೆ ಇದು ಸಾಧ್ಯವೇ ? ಪರಿಶಿಷ್ಟ ಜಾತಿಯವರು ಬದುಕಬೇಕೆಂದು ಹೇಳುತ್ತಾ, ಅವರು ಮದ್ಯ ಕುಡಿಯಬಾರದು ಎಂದು ಹೇಳುತ್ತಾ ಇರುವ ನೀವು ಊರಿನ ಸಂದು ಸಂದುಗಳಲ್ಲಿ, ಗಲ್ಲಿ ಗಲ್ಲಿಗಳಲ್ಲಿ, ಮೊಹಲ್ಲ ಮೊಹಲ್ಲಗಳಲ್ಲಿ, ಮಸೀದಿಗಳ ಎದುರು, ಚರ್ಚ್‌ಗಳ ಎದುರು, ದೇವಸ್ಥಾನಗಳ ಎದುರು ಮದ್ಯದ ಅಂಗಡಿಗಳನ್ನು ತೆಗೆದು ವ್ಯಾಪಾರ ಮಾಡುವುದಕ್ಕೆ ಅನುವು ಮಾಡಿಕೊಟ್ಟಿದ್ದೀರಿ. ಹೀಗೆ ನೀವು ಅಂಗಡಿಗಳನ್ನು ತೆರೆದರೆ ಸಮಾಜದ ಎಲ್ಲಾ ವರ್ಗದ ಜನರು ಅಲ್ಲಿಗೆ ಬಂದು ತಮ್ಮ ದುಡಿತದ ಹಣವನ್ನು ಅಲ್ಲಿ ಸುರಿದು ಹೋಗುತ್ತಾರೆ. ಒಂದು ಕಡೆ ಅವರನ್ನು ಉದ್ಧಾರ ಮಾಡುತ್ತೇವೆ, ಅವರಿಗೆ ಉಪಕಾರ ಮಾಡುತ್ತೇವೆ ಎಂದು ಹೇಳುವ ನೀವು ಇನ್ನೊಂದು ಮಾರ್ಗದ ಮೂಲಕ ಅವರನ್ನು ಸುಲಿಯುತ್ತಾ ಇದ್ದೀರಿ. ಅವರಿಗೆ ಶಾಲೆ ತೆರೆಯುತ್ತೇವೆ, ವಿದ್ಯಾಸಲಾತಿ ಕೊಡುತ್ತೇವೆ ಎಂದಿತ್ಯಾದಿಯಾಗಿ ಪರಿಶಿಷ್ಟರಿಗೆ ಹೇಳಿ ಇನ್ನೊಂದು ಕಡೆಯಿಂದ ಅವರು ದುಡಿದ ಹಣವನ್ನು ಕುಡಿತಕ್ಕೆ ಹಾಕುವ ಚಟಕ್ಕೆ ಹಚ್ಚಿ ಅವರ ಹಣವನ್ನು ಸರ್ಕಾರದ ಬೊಕ್ಕಸಕ್ಕೆ ತಂದುಕೊಳ್ಳುವುದು ಸರಿಯೇ ? ಬೋರ್ಡ್‌ಗಳನ್ನು ನೋಡಿ ಒಮ್ಮೆ ಒಳಗೆ ಕುಡಿಯಲು ಹೋಗುವ ಮನುಷ್ಯ ಕ್ರಮೇಣವಾಗಿ ಅದರ ದಾಸನಾಗುತ್ತಾನೆ. ಆದುದರಿಂದ ಈ ಅಂಗಡಿಗಳನ್ನು ಕಡಿಮೆ ಮಾಡಬೇಕು, ಒಮ್ಮೆಗೇ ಇದನ್ನು ಮಾಡುವುದು ಸ್ವಲ್ಪ ಕಷ್ಟವಾದ ಕೆಲಸವಾಗಿದ್ದರೂ ಕೂಡ ಹಂತ ಹಂತವಾಗಿ ಇದನ್ನು ಕಡಿಮೆ ಮಾಡಬೇಕಾಗಿದೆ. ನಮ್ಮ ಜನರು ಬುದ್ಧಿವಂತರಾಗಿ, ಮೇಧಾವಿಗಳಾಗಿ, ತಜ್ಞರಾಗಿ, ಉಜ್ವಲ ಭವಿಷ್ಯವನ್ನು ಹೊಂದಿದವರಾಗಿ ಬಾಳಬೇಕಾದರೆ ಇಂಥ ಕೆಲವೊಂದು ಕ್ರಮಗಳನ್ನು ತೆಗೆದುಕೊಳ್ಳಬೇಕಾದುದು ಅಪೇಕ್ಷಣೀಯ ಎಂದು ಹೇಳಬಯಸುತ್ತೇನೆ.

ಈ ಬಜೆಟ್‌ನಲ್ಲಿ ಹೆಚ್ಚಿಗೆ ಧನಿಕವರ್ಗದವರಿಗೆ ಅನುಕೂಲ ಮಾಡಿಕೊಟ್ಟ ಹಾಗೆ ಇದೆ. ಹೋಟೆಲ್‌ನವರ ಮೇಲೆ ಯಾವ ವಿಚಾರದಲ್ಲಿಯೂ ಕೈಹಾಕಲಿಲ್ಲ. ಹೋಟೆಲ್‌ಗಳಲ್ಲಿ ತಿಂಡಿ ತೀರ್ಥಗಳ ಬೆಲೆಯು ದಿನದಿನಕ್ಕೂ ಬದಲಾವಣೆಯಾಗುತ್ತಾ ಇದೆ. ಅವರು ಹೇಳಿದ್ದೇ ಬೆಲೆಯಾಗಿ ಬಿಟ್ಟಿದೆ. ಬೆಲೆಗಳ ಹೆಚ್ಚಳವನ್ನು ಅವರು ಮನಸ್ಸಿಗೆ ಬಂದಹಾಗೆ ಜಾಸ್ತಿ ಮಾಡಿಕೊಂಡು ಬರುತ್ತಾ ಇದ್ದಾರೆ, ಇಂತಹವರನ್ನು ಹಿಡಿಯುವ ಒಂದು ಶಕ್ತಿಯು ಈ ಸರ್ಕಾರಕ್ಕೆ ಇಲ್ಲವೇ ? ಅವರು ಮಾಡುತ್ತಿರುವ ಬೆಲೆ ಏರಿಕೆಯನ್ನು ಹತೋಟಿ ಮಾಡುವುದಕ್ಕೆ ಆಗುವುದಿಲ್ಲವೇ ? ಹೋಟೆಲ್‌ನವರು, ದೊಡ್ಡ ದೊಡ್ಡ ಉದ್ದಿಮೆಗಳವರು, ತಮ್ಮ ಉತ್ಪಾದಿತ ವಸ್ತುಗಳಿಗೆ ಯಾವ ರೀತಿಯಲ್ಲಿ ಬೆಲೆಯನ್ನು ಹೆಚ್ಚಿಸುತ್ತಾ ಹೋಗುತ್ತಾರೆ ಅದನ್ನು

ಗ್ರಾಹಕರು ಮೌನದಿಂದ ಸಹಿಸಿಕೊಳ್ಳುವ ಸಹನೆಯನ್ನು ತೋರಿಸಬೇಕಾಗಿದೆ. ಇಂಥಹವರ ಮೇಲೆ ಸರ್ಕಾರದವರು ಯಾವ ಹೊರೆಯನ್ನೂ ಹೊರಿಸಿಲ್ಲ. ಗ್ರಾಹಕರ ಸುಲಿಗೆಯನ್ನು ಮಾಡುತ್ತಿರುವ ಇವರ ಮೇಲೆ ಸರ್ಕಾರದವರು ಸೂಕ್ತ ಬಂದೋಬಸ್ತನ್ನು ಇಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಅಲ್ಪಸಂಖ್ಯಾತರ ಬಗ್ಗೆ ಇದರಲ್ಲಿ ಒಂದು ಶಬ್ದವೂ ಇಲ್ಲ. ಮಸೀದಿಗಳಿಗೆ ಹಣವನ್ನು ಕೊಡುವ ಬಗ್ಗೆಯಾಗಲೀ, ಮದಾರಸಗಳಿಗೆ ಹಣವನ್ನು ಕೊಡತಕ್ಕಂಥ ವಿಚಾರದಲ್ಲಾಗಲೀ, ಅಥವಾ ಅಲ್ಪಸಂಖ್ಯಾತರಿಗೆ ಕಲ್ಯಾಣಕಾರಿಯಾಗುವ ಯಾವುದೇ ವಿಷಯಗಳ ಬಗ್ಗೆಯಾಗಲೀ ಈ ಸರಕಾರದಿಂದ ಚಕಾರವಿಲ್ಲ. ವಕ್ಫ್ ಮಂಡಳಿ ಬಗ್ಗೆಯೂ ಸಹ ಏನನ್ನೂ ಹೇಳಿಲ್ಲ.

ಇನ್ನು ಬಗರ್ ಹುಕುಂ ಸಾಗುವಳಿ ಮಾಡಿರುವ ಅನೇಕ ಬಡವರಾದ, ನಮ್ಮ ರೈತರು, ಇವೊತ್ತು ತಮ್ಮ ಜಮೀನಿನ ಹಕ್ಕು ಪತ್ರ ಕೊಡಿ, ಸಕ್ರಮ ಎಂದು ಮಾಡಿಕೊಡಿ ಎಂದು ಕೇಳುತ್ತಾ ಇದ್ದಾರೆ. ಆ ಬಗ್ಗೆ ಇನ್ನೂ ಸೂಕ್ತ ಕ್ರಮ ತೆಗೆದುಕೊಂಡಿಲ್ಲ. ಇದನ್ನು ಜಂಟಿಸಲಹಾ ಸಮಿತಿಗೆ ಹಾಕಿದ್ದೇವೆ, ಮುಂದಿನ ಅಸೆಂಬ್ಲಿಯಲ್ಲಿ ತರುತ್ತೇವೆ ಎಂದು ಹೇಳುತ್ತಾ ಇದ್ದಾರೆ. ಈ ಬಗ್ಗೆ ಸೂಕ್ತ ಕ್ರಮವನ್ನು ಶೀಘ್ರವಾಗಿ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಕನ್ನಡದ ಬಗ್ಗೆ ಸಹ ಇದರಲ್ಲಿ ಏನೂ ಇಲ್ಲ. ಕರ್ನಾಟಕವೆಂದು ಹೇಳುತ್ತೀರಿ. ಕನ್ನಡವೆಂದು ಹೇಳುತ್ತೀರಿ, ಭಾಷಾವಾರು ರಾಜ್ಯವೆಂದು ಹೇಳುತ್ತೀರಿ. ಅದೇ ಪಕ್ಕದ ಆಂಧ್ರ. ತಮಿಳುನಾಡು. ಕೇರಳಗಳನ್ನು ನೋಡಿ, ಅಲ್ಲಿ ಬೇರೆ ಭಾಷೆಗಳ ಶಬ್ದ ಕೂಡ ಇಲ್ಲ. ಅದೇರೀತಿ ಕನ್ನಡದ ಬಗ್ಗೆ ಇಲ್ಲಿ ನಿಮ್ಮ ಕೆಲಸ ಮಾಡದೆ ಕನ್ನಡಿಗರ ಹಿತದ ಬಗ್ಗೆ ಸರ್ಕಾರ ಸುಮ್ಮನೆ ಮೊಸಳೆ ಕಣ್ಣೀರು ಸುರಿಸುವುದು ನಡೆಯುತ್ತಿದೆ. ಒಂದು ಭವಿಷ್ಯ ಹೇಳುತ್ತೇನೆ; ಇದೇ ರೀತಿ ಉದಾಸೀನ ಮಾಡಿದರೆ ಸರ್ಕಾರ ಮನಸ್ಸು ಮಾಡದೇ ಹೋದರೆ ಇನ್ನು ೨೦ ವರ್ಷಗಳ ನಂತರ ಈ ಬೆಂಗಳೂರಿನಲ್ಲಿ ಎಲ್ಲಾ ತಮಿಳುಮಯ ಆಗುವುದು ಕನ್ನಡ ಒಂದು ಶಬ್ದ ಸಹ ಕೇಳುವುದಿಲ್ಲ, ಮಂಗಳೂರಿನಲ್ಲಿ ಬರೀ ಮಲಯಾಳಂ ಕೇಳಿ ಬರುವುದು ಬೇರೇನೂ ಇರುವುದಿಲ್ಲ. ಹೇಳುವವರು ಕೇಳುವವರು ಯಾರು ಇಲ್ಲ. ಬೇರೆಯವರು ಇರಬಾರದೆಂದು ನಾನು ಹೇಳುವುದಿಲ್ಲ. ಆದರೆ ಕರ್ನಾಟಕವೆಂದು ಕರೆದ ಮೇಲೆ...

ಶ್ರೀ ಬಿ. ಬಸವಲಿಂಗಪ್ಪ.—ಬಹಳ ಕಳಕಳಿಯಿಂದ ಇದಿನಬ್ಬನವರು ಮಾತಾಡುತ್ತಿದ್ದಾರೆ. ಕರ್ನಾಟಕ ಎಂಬುದು ಸ್ಕಂದ ಪುರಾಣದಲ್ಲಿ ಬರುತ್ತದೆ. ಹೊಸಪೇಟೆಯಲ್ಲಿ ಒಬ್ಬ ರಾಕ್ಷಸ ಇದ್ದನಂತೆ. ಅವನ ಕೆಲಸ ಏನೆಂದರೆ ಬಡವರ ಹೆಣ್ಣುಮಕ್ಕಳನ್ನು ಹೊತ್ತುಕೊಂಡು ಹೋಗುವುದು. ಆ ರಾಕ್ಷಸನ ಹೆಸರು ಕರ್ನಾಟಕ ಎಂದು. ಆದ್ದರಿಂದ ಕರ್ನಾಟಕದ ಬಗ್ಗೆ ಅಷ್ಟೆಲ್ಲ ಹೇಳಲು ಹೋಗಬೇಡಿ. ನಾವು ಕರ್ನಾಟಕ ಎಂದು ರಾಜ್ಯಕ್ಕೇ ಹೆಸರಿಟ್ಟುಕೊಂಡಿದ್ದೇವೆ: ಅದಿರಬೇಕೇ ಬೇಡವೇ ಎಂದು ಹೇಳಿ.

ಶ್ರೀ ಬಿ.ಎಂ. ಇದಿನಬ್ಬ.—ನಾನು ಬಹಳ ನಿರೀಕ್ಷಿಸಿದ್ದ ಮೀನುಗಾರಿಕೆಯ ಬಗ್ಗೆ ಏನೂ ಇದರಲ್ಲಿ ಇಲ್ಲ. ದಕ್ಷಿಣ ಕನ್ನಡದ ಬಗ್ಗೆ ಹಾಗೂ ಅಲ್ಪಸಂಖ್ಯಾತರ ಬಗ್ಗೆ ಯಾವುದೇ ರೀತಿಯ ಕಾರ್ಯಕ್ರಮ ಹಾಕಿ ಕೊಂಡಿಲ್ಲ. ಇದನ್ನು ಎಲೆಕ್ಷನ್ ಬಜೆಟ್ ಎಂಬ ದೃಷ್ಟಿಯಿಂದ ಕರೆಯಬಹುದು.

ಅಧ್ಯಕ್ಷರು.—ಇದಿನಬ್ಬರೇ ಒಂದು ಪದ್ಯ ಹೇಳಿ.

ಶ್ರೀ ಬಿ.ಎಂ. ಇದಿನಬ್ಬ.—ಪದ್ಯ ಓದುತ್ತೇನೆ, ಕೇಳಿ ಸ್ವಾಮಿ ;

ಧನಿಕರಿಗಿದು ರಸಗವಳ
ಬಡವರಿಗೆ ಬರಿಯ ಹಿಪ್ಪೆ
ರಾಜ್ಯದ ಪ್ರಗತಿ ಅಭಿವೃದ್ಧಿ ಸಂಪೂರ್ಣ ಸಪ್ಪೆ
ಅಲ್ಪಸಂಖ್ಯಾತರಿಗೆ ಹಿಂದುಳಿದವರಿಗೆ ಏನೂ ಇಲ್ಲ
ಬೆಲೆಏರಿಕೆಗೆ ಆಹ್ವಾನ, ಇದು ಸರಿಯಲ್ಲ
ಬಿಕ್ಕಟ್ಟು ಗೊಂದಲದಾ ವೇಳೆಯಲಿ ಬಂತು ಬಜೆಟ್ಟು
ಕಾರ್ಮಿಕರಿಗೆ ರೈತರಿಗೆ ಇನ್ನು ಎಲ್ಲವೂ ದುಪಟ್ಟು
ವಿದ್ಯುಚ್ಛಕ್ತಿ ಕಣ್ಣುಮುಚ್ಚಾಲೆಯ ಸುದ್ದಿಯೇ ಇಲ್ಲ
ಹೊಳೆತ್ತದೆ ಮೀನುಗಾರರ ಕಷ್ಟಕ್ಕೆ ಚಕಾರವಿಲ್ಲ
ಕನ್ನಡದ ಏಳಿಗೆಯ ಯಾವ ಸುದ್ದಿಯೇ ಇಲ್ಲ
ತೋಟ ಶೃಂಗಾರ ಒಳಗೆ ಗೋಳಿಸೊಪ್ಪು
ಈ ಬಜೆಟ್ಟಿನ ಪಾಕಕ್ಕೆ ಹಾಕಿಲ್ಲ ಉಪ್ಪು.

ಅಧ್ಯಕ್ಷರು.—ಇನ್ನು ಮುಂದೆ ಧರ್ಮಪ್ಪ, ಅಬ್ಸೆಂಟ್, ರಾಮಯ್ಯ-ಆಬ್ಸೆಂಟ್, ಬಂಗಾರಪ್ಪ, ಕೆ.ಹೆಚ್. ಶ್ರೀನಿವಾಸ್ – ಅಬ್ಸೆಂಟ್, ರತ್ನಾಕರ್ – ಅಬ್ಸೆಂಟ್. ಎಂ. ರಾಮಪ್ಪ ನವರೇ, ತಾವು ಮಾತಾಡಿ ;

† ಶ್ರೀ ಎಂ. ರಾಮಪ್ಪ (ಬಳ್ಳಾರಿ).—ಮಾನ್ಯ ಅಧ್ಯಕ್ಷರೇ, ಬಜೆಟಿನ ಮೇಲೆ ಮಾತನಾಡಲು ಇವತ್ತು ಮೊದಲನೇ ಸಲ ನಿಂತಿದ್ದೇನೆ. ಕಳೆದ ೧೩ ವರ್ಷಗಳಿಂದ ಇಲ್ಲಿದ್ದೇನೆ. ಆದರೆ ನನಗೆ ಕನ್ನಡ ಸರಿಯಾಗಿ ಬರುವುದಿಲ್ಲ. ಇವತ್ತು ಹೇಗಾದರೂ ಸಹ ಇರಲಿ ಎಂದು ಮಾತನಾಡಲು ನಿಂತಿದ್ದೇನೆ. ನಾವು ಬಾರ್ಡರ್ ಏರಿಯಾದಲ್ಲಿದ್ದೇವೆ. ಆದೂ ಅಲ್ಲದೆ ನಾನು ಅಲ್ಲಿನ ಮುನಿಸಿಪಾಲಿಟಿ ಲಿಮಿಟ್‌ನಲ್ಲಿರುವುದರಿಂದ ಜಿಲ್ಲಾಪರಿಷತ್ತು, ಮಂಡಲ ಪಂಚಾಯತಿಗಳಲ್ಲಿ ನಾನು ಮಾತನಾಡುವಾಗಿಲ್ಲ. ನಮ್ಮ ಮೇಲೆ ಜಿಲ್ಲಾಪರಿಷತ್ತಿನಲ್ಲಿರುವವರು ಇದ್ದಾರೆ. ನಮಗೆ ಅಲ್ಲಿ ರೆಪ್ರೆಸೆಂಟೇಷನ್ ಇಲ್ಲ ನಮಗೆ ಡಿಗ್ರಿ ಕಾಲೇಜನ್ನು ಮಂಜೂರು ಮಾಡಿದ್ದಾರೆ ; ಆದರೆ ಅದಕ್ಕೆ ಇವತ್ತಿನವರೆಗೂ ಕೂಡ ಹಣವನ್ನು ಕೊಟ್ಟಿಲ್ಲ. ಆದರೂ ಕೊಟ್ಟಿದ್ದೇವೆಂದು ಬಡ್ಜೆಟ್ಟಿನಲ್ಲಿ ತೋರಿಸುತ್ತಾರೆ. ಹಣವನ್ನು ಮಾತ್ರ ಕೊಡುವುದಿಲ್ಲ. ನಮ್ಮಲ್ಲಿ ರೊಕ್ಕವನ್ನು ಸಂಗ್ರಹಿಸಿ ಕೊಟ್ಟರೂ ಕೂಡ ಅದಕ್ಕೆ ಮ್ಯಾಚಿಂಗ್ ಗ್ರಾಂಟ್ ಹಣವನ್ನು ಸೇರಿಸಿ ಕಾಲೇಜಿಗೆ ಫೌಂಡೇಷನ್ ಸ್ಟೋನ್ ಹಾಕಲಿಕ್ಕೆ ಇವರ ಕೈಯ್ಯಲ್ಲಿ ಆಗುತ್ತಿಲ್ಲ. ಇದು ದಿವಾಳಿ ಕೋರ ಸರಕಾರವಾಗಿದೆ ಇವರ ಕೈಯ್ಯಲ್ಲಿ ಏನೂ ಮಾಡುವುದಕ್ಕಾಗುತ್ತಿಲ್ಲ. ಇನ್ನು ಆಕ್ಟ್ರಾಯ್ ಗ್ರಾಂಟ್ ಎಂದು ಏನು ಇದೆ, ಅದರ ಬಗ್ಗೆ ಕೂಡ ಸರಿಯಾಗಿ ಇವರು ಗಮನ ಹರಿಸುತ್ತಿಲ್ಲ. ಇವರ ಕೈಯ್ಯಲ್ಲಿ ಎರಡು ತಿಂಗಳ ಸಂಬಳವನ್ನು ಕೊಡಲಿಕ್ಕೆ ಆಗುತ್ತಿಲ್ಲ. ಯಾವುದೇ ಅಭಿವೃದ್ಧಿ ಕಾರ್ಯವನ್ನು ಮಾಡುವುದಕ್ಕೆ ಆಗುತ್ತಿಲ್ಲ. ಕೋಟಿಗಟ್ಟಲೆಯಷ್ಟು ಹಣ ಕಂಟ್ರಾಕ್ಟರ್ಸ್‌ಗೆ ಬಾಕಿ ಕೊಡುವುದು ಇದೆ. ಇವರ ಕೈಯಲ್ಲಿ ಕಂಟ್ರಾಕ್ಟರ್ಸ್‌ಗೆ ಹಣ ಕೊಡುವುದಕ್ಕೆ ಆಗುತ್ತಿಲ್ಲ, ನೌಕರರಿಗೆ ಸಂಬಳ ಕೊಡುತ್ತಿಲ್ಲ ಮತ್ತು ಬೇರೆ ಯಾವ ಕೆಲಸಗಳೂ ಕೂಡ ಆಗುತ್ತಿಲ್ಲ. ಇದು ಇವರ ವೈಶಿಷ್ಟ್ಯ, ಬಳ್ಳಾರಿಯಲ್ಲಿನ ವೈಶಿಷ್ಟ್ಯವನ್ನು ಕೂಡ ಸ್ವಲ್ಪ ಹೇಳಬೇಕಾಗುತ್ತದೆ. ಜಿಲ್ಲಾ ಪರಿಷತ್ತಿನಿಂದ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್‌ಗೆಂದು ೨-೩ ಲಕ್ಷ ರೂಪಾಯಿಗಳನ್ನು ಹಿಂದೆ ಕೊಡುತ್ತಿದ್ದರು. ಈಗ ಕೊಡುತ್ತಿಲ್ಲ ಏಕೆಂದರೆ ನಾನು ಅಲ್ಲಿನರೆಪ್ರೆಸೆಂಟ್ ಅಲ್ಲ. ೧೯೬೪ರವರೆಗೆ ನಮ್ಮ ಕ್ಷೇತ್ರದಲ್ಲಿ ಟೀಚರ್ಸ್‌ಅನ್ನು ತೆಗೆದುಕೊಳ್ಳುವಾಗ ತೆಲುಗು ಭಾಷೆಯ ಟೀಚರ್ಸ್‌ಅನ್ನು ತೆಗೆದುಕೊಳ್ಳುತ್ತಿದ್ದರು. ಆದರೆ ಈಗ ಆ ರೀತಿ ಇಲ್ಲ, ತೆಲುಗು ಓದಬೇಕೆಂದು ಮಕ್ಕಳು ಶಾಲೆಗೆ ಹೋದರೆ ಕನ್ನಡ ಓದಬೇಕೆಂದು ಅಲ್ಲಿನ ನೌಕರರು ಇನ್‌ಸಿಸ್ಟ್ ಮಾಡುತ್ತಾರೆ. ಈ ರೀತಿ ಮಾಡುವುದಾದರೆ ತಾವು ಮೈನಾರಿಟೀಸ್ ಅನ್ನು ಯಾವ ರೀತಿ ಸೇಫ್ ಗಾರ್ಡ್ ಮಾಡುತ್ತೀರಿ. ಅಲ್ಲಿ ಮುಸಲ್ಮಾನರೂ ಕೂಡ ಬಹಳ ಮಂದಿ ಇದ್ದಾರೆ. ಅಲ್ಲಿಗೆ ಕನ್ನಡ ಟೀಚರ್ಸ್ ಅನ್ನು ಹಾಕಬೇಕೆಂದು ಹೇಳಿದರೂ ಕೂಡ ಬಡ್ಜೆಟ್ಟಿನಲ್ಲಿ ಹಣ ಮಂಜೂರು ಆಗುವುದಿಲ್ಲ. ಅಲ್ಲಿರುವವರು ಯಾರೂ ಕನ್ನಡ ವಿರೋಧಿಗಳಲ್ಲ ; ಭಾಷಾ ವಿರೋಧಿಗಳೂ ಕೂಡ ಅಲ್ಲಿ ಇಲ್ಲ. ಮೊನ್ನೆ ಮೈನಾರಿಟೀಸ್‌ಗೆ ಸಂಬಂಧಪಟ್ಟಂತೆ ಒಂದು ವಿಚಾರ ಸಂಕಿರಣ ಆಯಿತು. ಅಲ್ಲಿ ಸುಮಾರು ೪೦೦-೫೦೦ ಜನ ಮೈನಾರಿಟೀಸ್ ಸ್ಕೂಲ್ ಟೀಚರ್ಸ್ ಬಂದಿದ್ದರು ಅವರ ಗೋಳಂತೂ ಬಹಳವಾಗಿದೆ. ಸುಮಾರು ೧೪ ವರ್ಷಗಳಿಂದ ಅಲ್ಲಿನ ಜೂನಿಯರ್ ಕಾಲೇಜು ಮತ್ತು ಹೈಸ್ಕೂಲುಗಳಲ್ಲಿ ಉಪಾಧ್ಯಾಯರುಗಳು ಇಲ್ಲ. ಜೂನಿಯರ್ ಕಾಲೇಜಿಗೆ ತೆಲುಗು ಟೀಚರ್ಸ್‌ಅನ್ನು ಹಾಕಲಿಕ್ಕೆ ಇವರ ಕೈಯ್ಯಲ್ಲಿ ಆಗಲಿಲ್ಲ. ಹುಡುಗರು ೫-೫ ರೂಪಾಯಿ ಕೊಟ್ಟು ಪಂಡಿತರನ್ನು ಕರೆದುಕೊಂಡು ಬಂದು ಪಾಠ ಹೇಳಿಕೊಡಿ ಎಂದು ಕೇಳಿ ಹೇಳಿಸಿಕೊಳ್ಳುವಂತಹ ಪರಿಸ್ಥಿತಿ ಬಂದಿದೆ : ಒಂದು ಕಡೆ ಮೈನಾರಿಟೀಸ್‌ಗೆ ಕೊಡುವ ಮೆಚ್ಚಿಗೆ ; ಮತ್ತೊಂದು ಕಡೆ ನಮ್ಮ ಬಳ್ಳಾರಿ ಹೈದರಾಬಾದಿನಲ್ಲಿದೆ ಎಂದು ಸ್ವಲ್ಪ ದಿವಸ ಹೇಳುತ್ತಿದ್ದರು ಮತ್ತೆ ಇನ್ನೊಂದು ಸಾರಿ ಮದ್ರಾಸಿನಲ್ಲಿದೆ ಅದಕ್ಕೆ ಸಂಬಂಧಪಡುತ್ತದೆಂದು ಹೇಳುತ್ತಿದ್ದರು ಇವತ್ತು ಕರ್ನಾಟಕದಲ್ಲಿದೆಯೆಂದು ಹೇಳುತ್ತಿದ್ದಾರೆ. ಮತ್ತೊಂದು ಸಾರಿ ಎಲ್ಲಿಗೆ ನಮ್ಮನ್ನು ಕಳಿಸುತ್ತೀರೋ ಗೊತ್ತಿಲ್ಲ. ಈ ಮಾತನ್ನು ಬಹಳ ನೋವಿನಿಂದ ಹೇಳುತ್ತಿದ್ದೇನೆ ಬಳ್ಳಾರಿ ಡಿವಿಜನಲ್ ಹೆಡ್ ಕ್ವಾರ್ಟರ್ಸ್ ಆಗಿತ್ತು. ಈಗ ಅದನ್ನು ಗುಲ್ಬರ್ಗಾಕ್ಕೆ ಹಾಕಿದರು ಗುಲ್ಬರ್ಗಾದವರು ನೀವು ಹೈದರಾಬಾದ್ ಕಡೆಯವರು ಎಂದು ಹೇಳುತ್ತಾರೆ ಅಲ್ಲಿ ಅವರು ಜಾಸ್ತಿ ಜನ ಇರುತ್ತಾರೆ

೫-೦೦ ಪಿ.ಎಂ.

ನಾವು ಬಹಳ ಕಡಿಮೆ ಜನ ಆಗುತ್ತೇವೆ. ಇಲ್ಲಿ ನಿಮ್ಮನ್ನು ತೆಗೆದು ಹಾಕಿದ್ದೇವೆ ಎಂದು ಹೇಳಿದರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇಲ್ಲಿ ನಾವು ನಿಮ್ಮಲ್ಲಿ ಸಿಕ್ಕಿಕೊಂಡಿದ್ದೇವೆ ಎಂದು ಹೇಳಿಬಿಟ್ಟು ಒಂದು ಕಡೆ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ವೆಂದು ಸೂಚಿಸುತ್ತದೆ.

ಡಿವಿಜನಲ್ ಆಫೀಸ್ ಇದ್ದದ್ದು ಅದು ಗುಲ್ಬರ್ಗಕ್ಕೆ ಹೋಯಿತು. ಡಿ.ಐ.ಜಿ. ಆಫೀಸ್ ದಾವಣಗೆರೆಗೆ ಹೋಯಿತು, ಕಮರ್ಷಿಯಲ್ ಟ್ಯಾಕ್ಸ್ ಆಫೀಸ್ ಅದು ಕೂಡಾ ದಾವಣಗೆರೆಗೆ ಹೋಯಿತು. ನಮ್ಮಲ್ಲಿರತಕ್ಕಂಥ ಎಲ್ಲಾ ಆಫೀಸ್‌ಗಳನ್ನು ಕೂಡ ತೆಗೆದುಹಾಕಿಬಿಡಿ. ಆಗ ಸಂತೋಷಪಡುತ್ತೇವೆ. ಈ ರೀತಿಯಲ್ಲೆಲ್ಲಾ ನಮ್ಮ ಬಳ್ಳಾರಿಗೆ ಬಹಳ ಅನ್ಯಾಯ ಮಾಡಿದ್ದಾರೆ. ನಮ್ಮಲ್ಲಿರುವ ಮೈನಾರಿಟೀಸ್ ನವರು ಒಂದು ಪಾಲಿಟೆಕ್ನಿಕಲ್ ಬೇಕು ಎಂದು ಕೇಳಿದ್ದರು. ಅದಕ್ಕೆ ಸಹ ಒಂದು ರಾಜಕೀಯ ಮಾಡಿ ಯಾರು ಕೂಡಾ ಹೋಗದೆ ಇದ್ದ ಜಾಗದಲ್ಲಿ ಅದನ್ನು ಹಾಕಿದ್ದಾರೆ. ಅಂಥ ಸ್ಥಳದಲ್ಲಿ ಅದನ್ನು ಕೊಟ್ಟಿದ್ದಾರೆ. ಅದನ್ನು ಸೆಂಟರ್ ಪ್ಲೇಸ್‌ನಲ್ಲಿ ಕೊಡಿ ಎಂದು ಕೇಳಿದ್ದೆವು. ಅದಕ್ಕೆ ಸಂಬಂಧಪಟ್ಟ ಜಿಲ್ಲಾ ಮಂತ್ರಿಗಳನ್ನು ಕೇಳಿದಾಗ ಅದಕ್ಕೆ ಅವರು ಲ್ಯಾಂಡ್ ಛೇಂಜ್ ಇದೆ ಎಂದು ಹೇಳಿಬಿಟ್ಟು ನಾಲ್ಕು ವರ್ಷವಾಗಿದೆ ಇವತ್ತಿನವರೆಗೂ ಏನೂ ಮಾಡುತ್ತಿಲ್ಲ. ಇದರ ಬಗ್ಗೆ ಸ್ವಲ್ಪ ಗಮನವನ್ನು ಹರಿಸಬೇಕು. ಇನ್ನು ನಮ್ಮ ಬಳ್ಳಾರಿಯಲ್ಲಿ ತೆಲುಗು ಮಾತನಾಡುವವರು, ಮುಸ್ಲಿಂ ಜನಗಳೂ ಕೂಡಾ ಸಾಕಷ್ಟು ಮಂದಿ ಇದ್ದಾರೆ ; ಇವರುಗಳ ಬಗ್ಗೆ ನಮ್ಮ ಸರ್ಕಾರದವರು ಏತಕ್ಕೆ ಸೆಪರೇಟ್ ಆಗಿ ನೋಡುತ್ತಿದ್ದಾರೋ ನನಗಂತೂ ಅರ್ಥವಾಗುತ್ತಿಲ್ಲ. ನಮ್ಮ ಬಳ್ಳಾರಿಗೆ ನೀವು ಏನು ಕೊಡುಗೆಯನ್ನು ಕೊಡುತ್ತೀರಿ, ಅದನ್ನಾದರೂ ಸ್ವಲ್ಪ ಹೇಳಬೇಕು. ನಮ್ಮ ಬಳ್ಳಾರಿಗೆ ಏನಾದರೂ ಇಂಪ್ರೂವ್‌ಮೆಂಟ್ಸ್ ಮಾಡಬೇಕಾದಾಗ ಆಯವ್ಯಯದಲ್ಲಿ ಅದಕ್ಕೆ ಸೂಕ್ತ ಆದ್ಯತೆಯನ್ನು ಕೊಡಬೇಕೆಂದು ಹೇಳಿ ಇಷ್ಟು ಹೊತ್ತು ನನಗೆ ಮಾತನಾಡಲು ಅವಕಾಶವನ್ನು ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಪ್ರಸ್ತಾವ

ರಾಜ್ಯದ ವಿದ್ಯುಚ್ಛಕ್ತಿ ಸಮಸ್ಯೆಗಳ ಪರಿಹಾರ ಸೂಚಕ ಸಮಿತಿ ರಚನೆ

ಅಧ್ಯಕ್ಷರು.—ಇಲ್ಲಿ ಒಂದು ಪ್ರಸ್ತಾವ ಇದೆ. ಆ ಪ್ರಸ್ತಾವ ಏನೆಂದರೆ "ರಾಜ್ಯದಲ್ಲಿ ತಲೆದೋರಿರುವ ವಿದ್ಯುಚ್ಛಕ್ತಿ ಕಡಿತ, ಲೋಡ್ ಶೆಡ್ಡಿಂಗ್ ಹಾಗೂ ವಿದ್ಯುಚ್ಛಕ್ತಿ ಇಲಾಖೆಯ ಇತರೆ ವ್ಯವಹಾರಗಳಿಂದ ರಾಜ್ಯದ ಜನತೆ ಹಾಗೂ ವಿಶೇಷವಾಗಿ ರೈತರಿಗೆ ಉಂಟಾಗಿರುವ ಸಮಸ್ಯೆಯನ್ನು ಪರಿಶೀಲಿಸಿ ಸದನಕ್ಕೆ ೭ನೇ ಏಪ್ರಿಲ್. ೧೯೮೦ರೊಳಗಾಗಿ ವರದಿಯನ್ನು ಒಪ್ಪಿಸಲು ಈ ಕೆಳಕಂಡ ಸದಸ್ಯರನ್ನು ಒಳಗೊಂಡ "ರಾಜ್ಯ ವಿದ್ಯುಚ್ಛಕ್ತಿ ಸಮಸ್ಯೆಗಳ ಪರಿಹಾರ ಸೂಚಕ" ಸದನದ ಸಮಿತಿಯನ್ನು ರಚಿಸಲು ಈ ಸದನವು ನಿರ್ಣಯಿಸುತ್ತದೆ.

ಶ್ರೀಯುತರುಗಳಾದ.—

೧.	ಲಕ್ಷ್ಮೀನರಸಿಂಹಯ್ಯ	:	ಅಧ್ಯಕ್ಷರು
೨.	ಕಲ್ಯಾಣರಾವ್ ಮೊಳಕೇರಿ	;	ಸದಸ್ಯರು
೩.	ರೇವಣ ಸಿದ್ದಯ್ಯ	;	ಸದಸ್ಯರು
೪.	ಹೆಚ್.ಸಿ. ಮಹದೇವಪ್ಪ	;	ಸದಸ್ಯರು
೫.	ಕೆ. ಮಲ್ಲಪ್ಪ	;	ಸದಸ್ಯರು
೬.	ಐ.ಬಿ. ಶಂಕರ್	;	ಸದಸ್ಯರು
೭.	ಎಂ. ವೀರಪ್ಪಮೊಯಿಲಿ	;	ಸದಸ್ಯರು
೮.	ಜಿ.ಎಸ್. ಆಚಾರ್	;	ಸದಸ್ಯರು
೯.	ಮಲ್ಲಿಕಾರ್ಜುನ ಎಂ. ಖರ್ಗೆ	;	ಸದಸ್ಯರು